ಸಂಪುಟ: 05 ಸಂಚಿಕೆ: 342 ಪುಟಗಳು: 08 ಮಂಗಳವಾರ 24 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5


**ಮುಂಜಾನೆ ಮಾತು**

ಸತ್ಯಕ್ಕಾಗಿ ಯಾವುದನ್ನು ಬೇಕಾದರೂ ತ್ಯಾಗಮಾಡಿ, ಆದರೆ ಯಾವುದಕ್ಕೂ ಸತ್ಯವನ್ನು ತ್ಯಾಗ ಮಾಡಬೇಡಿ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## 3.25 ಲಕ್ಷ ಕೋಟಿ ದಾಟಿದ ರಾಜ್ಯದ ಜೈವಿಕ ಆರ್ಥಿಕತೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಜೈವಿಕ ಆರ್ಥಿಕತೆಯು 2025ರಲ್ಲಿ 3,25,360 ಕೋಟಿಗಳಿಗೆ (39.2 ಶತಕೋಟಿ ಡಾಲರ್) ತಲುಪಿದ್ದು, ಸಂಶೋಧನೆ-ನೇತೃತ್ವದ ಜೊತೆಗೆ ತಯಾರಿಕೆ, ವಿತರಣೆ, ಸೇವೆಗಳವರೆಗೆ ಸಂಪೂರ್ಣ ಮೌಲ್ಯ ಸರಪಳಿ ಒಳಗೊಂಡಿರುವ, ತಯಾರಿಕೆ ಕೇಂದ್ರಿತ ಜೈವಿಕ ಆರ್ಥಿಕತೆಯು ರಾಜ್ಯದಲ್ಲಿ ಗಮನಾರ್ಹವಾಗಿ ವಿಸ್ತರಣೆಯಾಗುತ್ತಿದೆ. ಎಲೆಕ್ಟ್ರಾನಿಕ್ಸ್, ಐಟಿ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕೆಐಟಿಎಸ್), ಜೈವಿಕ ತಂತ್ರಜ್ಞಾನ ಉದ್ಯಮಗಳ ಸಂಘದ (ಎಬಿಎಲ್‌ಇ) ಸಹಯೋಗದಲ್ಲಿ ಸಿದ್ಧಪಡಿಸಿರುವ ರಾಜ್ಯದ ಜೈವಿಕ ಆರ್ಥಿಕತೆಯ ವರದಿ 2025ಯಲ್ಲಿ ಈ ಸಂಗತಿ ಉಲ್ಲೇಖವಾಗಿದೆ. ದೇಶದ ಅತ್ಯಂತ ಪ್ರಬುದ್ಧ ಮತ್ತು ನಾವೀನ್ಯತೆ ಆಧಾರಿತ ಜೈವಿಕ ತಂತ್ರಜ್ಞಾನ ವ್ಯವಸ್ಥೆಯಾಗಿ ಕರ್ನಾಟಕವು ಸುಸ್ಥಿರ ರೀತಿಯಲ್ಲಿ ತನ್ನ ಮುಂಚೂಣಿ ಸ್ಥಾನ ಕಾಯ್ದುಕೊಂಡಿರುವುದರ ಮೇಲೆ ಈ ವರದಿಯು ಬೆಳಕು ಚೆಲ್ಲಿದೆ. ವರದಿ ಬಿಡುಗಡೆ ಮಾಡಿ ಮಾತನಾಡಿದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು, 'ಈ ವರದಿಯು ರಾಜ್ಯದ ಜೈವಿಕ ಆರ್ಥಿಕತೆಯ ಅಂಕಿ ಸಂಖ್ಯೆಗಳಲ್ಲಿನ ಹೆಚ್ಚಳವನ್ನಷ್ಟೇ ಪ್ರತಿಬಿಂಬಿಸುತ್ತಿಲ್ಲ. ರಾಜ್ಯದ ಸಮಗ್ರ ಆರ್ಥಿಕ ವ್ಯವಸ್ಥೆಯಲ್ಲಿ ಜೈವಿಕ ಆರ್ಥಿಕತೆಯು ಗಮನಾರ್ಹ ಪಾಲು ಹೊಂದಿರುವುದನ್ನೂ ಸೂಚಿಸುತ್ತದೆ. ಜೈವಿಕ ತಂತ್ರಜ್ಞಾನವು ಇನ್ನು ಮುಂದೆ ಪ್ರಯೋಗಾಲಯಗಳಿಗೆ ಮಾತ್ರ ಸೀಮಿತವಾಗಿರದೆ, ಆರ್ಥಿಕ ಬೆಳವಣಿಗೆ, ಕೈಗಾರಿಕಾ ನಾವೀನ್ಯತೆ ಮತ್ತು ಸಾಮಾಜಿಕ ಪ್ರಭಾವದ ಕೇಂದ್ರ, ಚಾಲಕ ಶಕ್ತಿಯಾಗಿ ಅಭಿವೃದ್ಧಿಗೊಳ್ಳುತ್ತ ಮುನ್ನಡೆಯುತ್ತಿದೆ' ಎಂದರು.

## ಕಾಂತಾರ ದೈವಪಾತ್ರಕ್ಕೆ ಅವಮಾನ ಕೇಸ್ ರದ್ದು ಕೋರಿ ಹೈ ಮೊರೆ

• ಉದಯವಾಹಿನಿ, ಬೆಂಗಳೂರು

ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರವನ್ನು ಅವಮಾನಿಸಲಾಗಿದೆ ಎಂಬ ಆರೋಪದ ಮೇಲೆ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದು ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ ಕರ್ನಾಟಕ ಹೈಕೋರ್ಟ್ ಮೊರೆ ಹೋಗಿದ್ದಾರೆ. ಈ ಕುರಿತು ರಣವೀರ್ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದು, ನಗರದ ಹೈಗ್ರೌಂಡ್ಸ್ ಠಾಣಾ ಪೊಲೀಸರು ಮತ್ತು ಪ್ರಕರಣದ ಖಾಸಗಿ ದೂರುದಾರ ಪ್ರಶಾಂತ್ ಮೆಥಲ್ ಅವರನ್ನು ಪ್ರತಿವಾದಿ ಮಾಡಿದ್ದಾರೆ. ರಣವೀರ್ ಪರ ವಕೀಲರು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಹಾಜರಾಗಿ, 'ಧಿ'ರಣವೀರ್ ಸಿಂಗ್ ಕಾಂತಾಧಿರ ಚಾಪ್ಟರ್-1 ರ ಪಾತ್ರದಲ್ಲಿರಿಷಬ್ ಶೆಟ್ಟಿ ನಟನೆ ಕುರಿತು ಹೊಗಳಿ ಮಾತನಾಡಿದ್ದಾರೆ. ಆದರೆ, ಅವರ ಹೇಳಿಕೆ ತಿರುಚಿ ಕ್ರಿಮಿನಲ್ ಬಣ್ಣ ಬಳಿಯಲಾಗಿದೆ. ಪ್ರಕರಣದಲ್ಲಿನ ಖಾಸಗಿ ದೂರುದಾರರು ವಕೀಲರಾಗಿದ್ದಾರೆ. ಅರ್ಜಿಯನ್ನು ಸೋಧಿಮಧಿವಾರ ಮಧ್ಯಾಹ್ನವೇ ತುರ್ತು ವಿಚಾರಣೆ ನಡೆಸಬೇಕು' ಎಂದು ಕೋರಿದರು. ನ್ಯಾಯಮೂರ್ತಿಗಳು, ಏಕೆ ತುರ್ತು ವಿಚಾರಣೆ ನಡೆಸಬೇಕು? ಅರ್ಜಿದಾರರು ಬಾಲಿವುಡ್ ನಟರೆಂಬ ಕಾರಣಕ್ಕಾಗಿಯೇ? ಹಾಲಿವುಡ್‌ನವರಾದರೆ ಈಗಲೇ ವಿಚಾರಣೆ ನಡೆಸಬೇಕಾ? ಎಂದು ಪ್ರಶ್ನಿಸಿದರು.

ಕೇಂದ್ರದ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟಕ್ಕೆ ವಿರುದ್ಧವಾಗಿ ರಚನೆಯಾಗಿರುವ ವಿಪಕ್ಷಗಳ ಇಂಡಿ ಮೈತ್ರಿಕೂಟ, ಈಗಲೂ ತನ್ನ ನಾಯಕತ್ವ ಗೊಂದಲಗಳನ್ನು ಪರಿಹರಿಸಿಕೊಂಡಿಲ್ಲ. ಮೈತ್ರಿಕೂಟದ ಬಹುತೇಕ ರಾಜಕೀಯ ಪಕ್ಷಗಳು, ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಅವರ ನಾಯಕತ್ವಕ್ಕೆ ಅಪಸ್ವರ ಎತ್ತುತ್ತಲೇ ಬಂದಿದ್ದಾರೆ.



**ಬಿಜೆಪಿ ಸೇರಿದ ಅಸ್ಸೋಂ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಭೂಪೇನ್**

**ಕೈ ಮುಗಿತಿನಿ ಇಂಡಿ ಒಕ್ಕೂಟದ ನಾಯಕತ್ವ ಬಿಡಿ**

# ಇಂಡಿ ಒಕ್ಕೂಟ ಹರೋಹರ ರಾಹುಲ್ ನಾಯಕತ್ವಕ್ಕೆ ಅಪಸ್ವರ

### ಐಎನ್‌ಡಿಐಎ ಹರಿದು ಹಂಚಿಹೋಗುತ್ತದೆ

ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇಂಡಿ ಬಣದ ಅಸಲಿ ನಾಯಕಿಯಾಗಿದ್ದು, ಅವರಿಲ್ಲದೆ ಭಾರತ ಮೈತ್ರಿಕೂಟವು 'ಐ', 'ಎನ್', 'ಡಿ', 'ಐ', 'ಎ'ಗಳಾಗಿ ಹರಿದು ಹಂಚಿಹೋಗುತ್ತದೆ. ಹೋಗುತ್ತವೆ ಎಂದು ಮಣಿಶಂಕರ್ ಅಯ್ಯರ್ ಸೂಚ್ಯವಾಗಿ ಹೇಳಿದರು. 2024ರಲ್ಲೂ ಮಣಿಶಂಕರ್ ಅಯ್ಯರ್ ಕಾಂಗ್ರೆಸ್ ಇಂಡಿ ಮೈತ್ರಿಕೂಟ ತ್ಯಜಿಸಲು ಸಿದ್ಧವಾಗಬೇಕು ಎಂದು ಹೇಳಿಕೆ ನೀಡಿದ್ದರು. ಮಮತಾ ಬ್ಯಾನರ್ಜಿ ಇಂಡಿಯಾ ಮೈತ್ರಿಕೂಟದ ನಿಜವಾದ ನಾಯಕಿ. ಅವರ ಜೊತೆಗೆ, ಈ ಸ್ಥಾನವನ್ನು ಹಂಚಿಕೊಳ್ಳಲಬಹುದಾದ ಇನ್ನೂ ಒಂದಿಬ್ಬರು ನಾಯಕರಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಮತ್ತು ಡಿಎಂಕೆ ಮುಖ್ಯಸ್ಥ ಎಂಕೆ ಸ್ಟಾಲಿನ್ ಅವರಲ್ಲಿ ಪ್ರಮುಖರು ಎಂದು ಮಣಿಶಂಕರ್ ಅಯ್ಯರ್ ಅಭಿಪ್ರಾಯಪಟ್ಟಿದ್ದಾರೆ.

**ಮಣಿಶಂಕರ್ ಅಯ್ಯರ್ ಎಂಬ ರಾಹುಲ್ ಪಾಲಿನ ಬಿಸಿತುಪ್ಪ!**



### ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ನಿರೀಕ್ಷೆ

ತಮ್ಮ ನಿರ್ಧಾರವನ್ನು ಮರುಪರಿಶೀಲಿಸಲು ಬೋರಾ ಸಮಯ ಕೇಳಿದ್ದರು, ಆದರೆ ಮರುದಿನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ನಿವಾಸಕ್ಕೆ ಹೋಗಿ ಫೆಬ್ರವರಿ 22 ರಂದು ಬಿಜೆಪಿಗೆ ಸೇರುವುದಾಗಿ ಘೋಷಿಸಿದ್ದರು. 126 ಸದಸ್ಯರ ಅಸ್ಸೋಂ ವಿಧಾನಸಭೆಗೆ ಮಾರ್ಚ್-ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ನಿರೀಕ್ಷೆಯಿದೆ.

1 ಮತ್ತೆ ರಾಹುಲ್ ಗಾಂಧಿ ವಿರುದ್ಧ ಮಣಿಶಂಕರ್ ಅಯ್ಯರ್ ವಾಗ್ದಾಳಿ

2 ರಾಹುಲ್ ಗಾಂಧಿ ಇಂಡಿ ಬ್ಲಾಕ್‌ನ ನಾಯಕತ್ವ ತಯಜಿಸಲಿ ಎಂದ ಮಣಿಶಂಕರ್ ಅಯ್ಯರ್.

3 ಇಂಡಿ ಬ್ಲಾಕ್ ನಾಯಕತ್ವಕ್ಕೆ ಮಮತಾ ಬ್ಯಾನರ್ಜಿ ಪರ ಮಣಿಶಂಕರ್ ಅಯ್ಯರ್ ಬ್ಯಾಟಿಂಗ್.

• ಉದಯವಾಹಿನಿ, ಕೋಲ್ಕತ್ತಾ

ಕಾಂಗ್ರೆಸ್‌ಗೆ ಮೈತ್ರಿಕೂಟದ ಅನ್ಯ ಪಕ್ಷಗಳ ಅಸಹನೆಗಿಂತ, ಸ್ವಪಕ್ಷದ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಅವರ ಅಸಮಾಧಾನ ನಿಜಕ್ಕೂ ಗಂಭೀರ ಸಮಸ್ಯೆಯಾಗಿ ಕಾಡುತ್ತಿದೆ. ಪಕ್ಷದ ನೀತಿ-ನಿರೂಪಣೆಗಳನ್ನು ಬಹಿರಂಗವಾಗಿ ಟೀಕಿಸುವ ಮಣಿಶಂಕರ್ ಅಯ್ಯರ್, ಇದೀಗ ಇಂಡಿ ಬ್ಲಾಕ್ ನಾಯಕತ್ವವನ್ನು ರಾಹುಲ್ ಗಾಂಧಿ ತ್ಯಜಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಇತ್ತೀಚಿಗೆ ಕೇರಳದಲ್ಲಿ ಕಮ್ಯೂನಿಸ್ಟರನ್ನು ಹೊಗಳುತ್ತಾ, ಮಣಿಶಂಕರ್ ಅಯ್ಯರ್ ಕೇರಳ ಕಾಂಗ್ರೆಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಹೌದು, ಪಶ್ಚಿಮ ಬಂಗಾಳ ಪ್ರವಾಸದಲ್ಲಿರುವ ಮಣಿಶಂಕರ್ ಅಯ್ಯರ್, ಇಂಡಿ ಮೈತ್ರಿಕೂಟದ ನಾಯಕತ್ವವನ್ನು ಪ್ರಾದೇಶಿ ಪಕ್ಷಗಳ ನಾಯಕರ ಹೆಗಲಿಗೆ ಹೊರಿಸುವ ಸಮಯ ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ನಾಯಕತ್ವಕ್ಕೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರೇ ಸೂಕ್ತ ವ್ಯಕ್ತಿ ಎಂದು ಹೇಳಿದ್ದಾರೆ.

ಎಂಕೆ ಸ್ಟಾಲಿನ್, ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್, ತೇಜಸ್ವಿ ಯಾದವ್ ಅಥವಾ ಬೇರೆ ಯಾರಾದರೂ ಸಣ್ಣ ಪಕ್ಷಗಳಿಗೆ ಸೇರಿದ ನಾಯಕರು, ಇಂಡಿ ಮೈತ್ರಿಕೂಟದ ನಾಯಕತ್ವ ಸ್ಥಾನದಲ್ಲಿ ಕುಳಿತುಕೊಳ್ಳಲು ಅರ್ಹರಾಗಿದ್ದಾರೆ. ಆದರೆ ರಾಹುಲ್ ಗಾಂಧಿ ಮಾತ್ರ ಇಂಡಿ ಮೈತ್ರಿಕೂಟವನ್ನು ಮುನ್ನಡೆಸುವುದು ಬೇಡ ಎಂದು ಹಿರಿಯ ಕಾಂಗ್ರೆಸ್ ನಾಯಕ ಕಡ್ಡಿ ತುಂಡು ಮಾಡಿದಂತೆ ಹೇಳಿದ್ದಾರೆ. ಇನ್ನು ಮಣಿಶಂಕರ್ ಅಯ್ಯರ್ ಅವರ ಹೇಳಿಕೆಗೆ ಪಶ್ಚಿಮ ಬಂಗಾಳದ ಕಾಂಗ್ರೆಸ್ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ವಿಧಾನಸಭೆ ಚುನಾವಣೆಗೂ ಮೊದಲು ಅವರ ಹೇಳಿಕೆ ಪಕ್ಷಕ್ಕೆ ಹಾನಿಯನ್ನುಂಟುಮಾಡುತ್ತದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಈ ಕುರಿತು ಮಾತನಾಡಿರುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸುಮನ್ ರಾಯ್ ಚೌಧರಿ, ಮಣಿಶಂಕರ್ ಅಯ್ಯರ್ ಅವರು ಬಹಳ ಸಮಯದಿಂದ ಕಾಂಗ್ರೆಸ್ ಪಕ್ಷದ ಚಟುವಟಿಕೆಗಳೊಂದಿಗೆ ಸಂಬಂಧ ಹೊಂದಿಲ್ಲ. ಬಂಗಾಳದಿಂದ ಐದು ರಾಜ್ಯಸಭಾ ಸ್ಥಾನಗಳು ಈಗ ಖಾಲಿಯಾಗಿವೆ. ಮಣಿಶಂಕರ್ ಅಯ್ಯರ್ ಇಂತಹ ಹೇಳಿಕೆ ನೀಡಿ, ಇಲ್ಲಿಂದ ರಾಜ್ಯಸಭಾ ಸ್ಥಾನ ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿರಬಹುದು ಎಂದು ಆರೋಪಿಸಿದರು.ಮಣಿಶಂಕರ್ ಅಯ್ಯರ್ ಅವರು ಈ ಹಿಂದೆ ರಾಹುಲ್ ಗಾಂಧಿ ಜೊತೆಗೆ ಲೈಕಿಂಗ್ ಪ್ರಾಬ್ಲಂ ಇದೆ ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.



### ದೀಪಕ್ ಅವರಿಗೆ ರಾಹುಲ್ ಅಭಯ

ಉತ್ತರಾಖಂಡದ ಜಿಮ್ ಮಾಲಕ ಮೊಹಮ್ಮದ್ ದೀಪಕ್ ಅವರಿಗೆ ಭಯ ಪಡಬೇಡಿ ಎಂದು ರಾಹುಲ್ ಗಾಂಧಿ ಅಭಯ ನೀಡಿದ್ದಾರೆ. ಅವರು ತಮ್ಮನ್ನು ಮೊಹಮ್ಮದ್ ದೀಪಕ್ ಎಂದು ಪರಿಚಯಿಸಿಕೊಂಡು ಬಜರಂಗದಳ ಕಾರ್ಯಕರ್ತರಿಂದ 70 ವರ್ಷದ ಮುಸ್ಲಿಂ ವ್ಯಾಪಾರಿಯನ್ನು ರಕ್ಷಿಸುವ ಮೂಲಕ ಸುದ್ದಿಯಲ್ಲಿದ್ದಾರೆ. ರಾಹುಲ್ ಗಾಂಧಿ ನನ್ನನ್ನು ಭೇಟಿಯಾಗಲು ಕರೆದಿದ್ದರು. ಅವರು ನನ್ನ ಕುಟುಂಬದೊಂದಿಗೆ ಮಾತನಾಡಿದ್ದು, ಭಯಪಡುವ ಅಗತ್ಯವಿಲ್ಲ. ನೀವು ಯಾವುದೇ ತಪ್ಪು ಮಾಡಿಲ್ಲ ಎಂದು ನನಗೆ ವಿವರಿಸಿದರು ಎಂದು ದೀಪಕ್ ಹೇಳಿದರು. ಜನವರಿ 26ರಂದು ಈ ವಿವಾದ ಆರಂಭವಾಯಿತು. ಗುಂಪೊಂದು ವಕೀಲ್ ಅಹ್ಮದ್ ಅವರ ಬಾಬಾ ಸ್ಕೂಲ್ ಡ್ರೆಸ್ ಅಂಗಡಿಯನ್ನು ಗುರಿಯಾಗಿಸಿ ದಾಳಿ ನಡೆಸಿತು. ಬಾಬಾ ಎಂಬ ಹೆಸರನ್ನು ಸ್ಥಳೀಯ ಸಿದ್ಧಬಲಿ ಬಾಬಾ ದೇವಾಲಯದೊಂದಿಗೆ ಗೊಂದಲವಾಗಬಹುದು ಎಂದು ಆ ಗುಂಪು ಆಕ್ಷೇಪ ವ್ಯಕ್ತಪಡಿಸಿತು. ಆದರೆ ಈ ಪ್ರದೇಶದ ಇತರ ಅನೇಕರು ಬಾಬಾ ಎಂಬ ಪದವನ್ನು ಯಾವುದೇ ಸಮಸ್ಯೆಯಿಲ್ಲದೆ ಬಳಸುತ್ತಿವೆ ಎಂದು ಸ್ಥಳೀಯರು ಹೇಳಿದರು. ಅಹ್ಮದ್ ಅವರ ಧಾರ್ಮಿಕ ಗುರುತಿಗಾಗಿ ಮಾತ್ರ ಗುರಿಯಾಗಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

### ಸಂಚಾಲಕ ಸ್ಥಾನಕ್ಕೆ ಸ್ಟಾಲಿನ್ ಸೂಕ್ತ

ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರು 'ಇಂಡಿಯಾ' ಕೂಟದ ಸಂಚಾಲಕರಾಗಲು 'ಸೂಕ್ತ ವ್ಯಕ್ತಿ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಅವರು ಸೋಮವಾರ ಪ್ರತಿಪಾದಿಸಿದರು. 'ಕೂಟದಲ್ಲಿ ಒಗ್ಗಟ್ಟನ್ನು ಖಾತರಿಪಡಿಸಲು ಪ್ರಾಬಲ್ಯ ಸಾಧಿಸುವ ಪಕ್ಷಕ್ಕಿಂತ ಸಣ್ಣ ಪಕ್ಷದ ನಾಯಕರೊಬ್ಬರು ಆ ಹುದ್ದೆಯಲ್ಲಿ ಕೂರುವುದು ಉತ್ತಮ' ಎಂದು ಅವರು ಅಭಿಪ್ರಾಯಪಟ್ಟರು. 'ಸದ್ಯ 2029ರ ಚುನಾವಣೆಯೇ ನಮ್ಮ ಗುರಿ. ಹೀಗಿದ್ದಾಗ 'ಇಂಡಿಯಾ' ಒಕ್ಕೂಟ ಮುನ್ನಡೆಸಲು ಸ್ಟಾಲಿನ್‌ಗಿಂತ ಉತ್ತಮ ಆಯ್ಕೆ ಬೇರೆ ಇಲ್ಲ' ಎಂದು ಅವರು ಹೇಳಿದರು.'ಬಲಿಷ್ಠ 'ಇಂಡಿಯಾ' ಒಕ್ಕೂಟ ಮಾತ್ರ 2029ರ ಚುನಾವಣೆಯಲ್ಲಿ ಗೆಲುವು ಸಾಧಿಸಲು ಸಾಧ್ಯ. ಇದಿಲ್ಲದಿದ್ದರೆ ರಾಹುಲ್ ಗಾಂಧಿ ಪ್ರಧಾನಮಂತ್ರಿಯಾಗಲು ಸಾಧ್ಯವಿಲ್ಲ' ಎಂದೂ ಅವರು ಕಾರಣವನ್ನು ವಿವರಿಸಿದರು.

## ನನ್ನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ ದಿನವೇ ರಾಜಕೀಯ ಕೊನೆ: ಸಚಿವ

• ಉದಯವಾಹಿನಿ, ಬೆಂಗಳೂರು

ಸಂಘದವರ ಚಡ್ಡಿಗಳನ್ನು ತಲೆ ಮೇಲೆ ಹೊರುವುದು ದಲಿತತ್ವವಲ್ಲ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರಿಗೆ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ಛಲವಾದಿ ನಾರಾಯಣಸ್ವಾಮಿಯವರು ನನ್ನ ಬಗ್ಗೆ ಬಗೆಬಗೆಯ ಮಾತುಗಳನ್ನಾಡಿದ್ದಾರೆ, ಬಹುಶಃ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ನನ್ನ ಬಗ್ಗೆ ಮಾತನಾಡುವುದು ಅವರಿಗೆ ಅನಿವಾರ್ಯ, ನನ್ನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ ದಿನವೇ ಅವರ ರಾಜಕೀಯದ ಕೊನೆಯ ದಿನವಾಗುತ್ತದೆ ಎಂದು ತಿರುಗೇಟು ನೀಡಿದ್ದಾರೆ.

ಆರ್‌ಎಸ್‌ಎಸ್ ನವರ ಚಡ್ಡಿಗಳನ್ನು ತಲೆ ಮೇಲೆ ಹೊತ್ತು ರಾಜಕೀಯ ಅಸ್ತಿತ್ವ ಕಂಡುಕೊಳ್ಳುವ ಬದಲು ನನ್ನ ತಂದೆಯವರ ಸೈದ್ಧಂತಿಕ ನೆರಳಿನಲ್ಲಿ ಮುಂದುವರೆಯುವುದು ಅತ್ಯಂತ ಗೌರವಯುತ ರಾಜಕಾರಣ ಎಂದು ಭಾವಿಸಿದ್ದೇನೆ.

ವಂಶಪರಂಪರೆಯ ರಾಜಕಾರಣದ ಬಗ್ಗೆ ಮಾತನಾಡಲೇಬೇಕು ಎಂದಿದ್ದರೆ ತಮ್ಮದೇ ಪಕ್ಷದ ಅಧ್ಯಕ್ಷರಾದ ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕರಾದ ಅರವಿಂದ್ ಬೆಲ್ಲದ್ ಅವರಿಂದ



**ಕೆಣಕಿದರೆ ಸುಮ್ಮನಿರಲ್ಲ ಎಂದ ಛಲವಾದಿ**

ಮಾತನಾಡಲು ಶುರು ಮಾಡಲಿ, ಆ ಧೈರ್ಯ ನಾರಾಯಣಸ್ವಾಮಿಯವರಿಗಿದೆಯೇ? ಎಂದು ಪ್ರಶ್ನೆ ಮಾಡಿದ್ದಾರೆ.

ಸಂವಿಧಾನ ವಿರೋಧಿಸಿ ಕರಡು ಪ್ರತಿಯನ್ನು ಸುಟ್ಟಿದ್ದ ಸಂಘದವರ ಚಡ್ಡಿಗಳನ್ನು ತಲೆ ಮೇಲೆ ಹೊರುವುದು ದಲಿತತ್ವವಲ್ಲ, ದಲಿತತ್ವ ಎಂದರೆ ಸ್ವಾಭಿಮಾನ, ದಲಿತತ್ವ ಎಂದರೆ ಅನ್ಯಾಯಕ್ಕೆ ಪ್ರತಿರೋಧ, ದಲಿತತ್ವ ಎಂದರೆ ಆತ್ಮಬಲ. ದಲಿತತ್ವದ ಸ್ವಾಭಿಮಾನವನ್ನು ಆರ್ ಎಸ್‌ಎಸ್ ನವರ ಚಡ್ಡಿಗಳಿಗೆ ಅಡ ಇಟ್ಟವರು ದಲಿತತ್ವದ ಪಾಠ ಹೇಳುವುದು ಕುಚೋದ್ಯವಲ್ಲದೆ ಇನ್ನೇನು! ಎಂದು ಕಿಡಿಕಾರಿದ್ದಾರೆ.

ಒಳ ಮೀಸಲಾತಿಯಲ್ಲಿ ಅನ್ಯಾಯವಾದರೂ, ಬೀದಿ ಬೀದಿಗಳಲ್ಲಿ ಸಮುದಾಯದ ಯುವಜನರು ಹೋರಾಟಕ್ಕಿಳಿದು ಚಪ್ಪಲಿ,

### ನನ್ನನ್ನು ಕೆಣಕಿದರೆ ಬಿಡುವುದಿಲ್ಲ!

ದಲಿತತ್ವ ಎಂದರೆ, SCSP-TSP ಯೋಜನೆಯ ರೂ.39,000 ಕೋಟಿ ಹಣವನ್ನು ಕಾಂಗ್ರೆಸ್ ಹಗಲು ದರೋಡೆ ಮಾಡಿದರೂ, ದಲಿತ ಮಂತ್ರಿಯಾಗಿ ತುಟಿ ಬಿಚ್ಚದೆ, ಖಂಡಿಸುವ ಬದಲು 'ಹಣ ಬಳಕೆ ಸರಿ ಇದೆ' ಎಂದು ಹೆಮ್ಮೆಯಿಂದ ಬೊಗಳೆ ಬಿಡುವುದಲ್ಲ ಎಂದು ಪ್ರಿಯಾಂಕ್ ಖರ್ಗೆ ಅವರಿಗೆ ಛಲವಾದಿ ನಾರಾಯಣ ಸ್ವಾಮಿ ತಿರುಗೇಟು ನೀಡಿದ್ದಾರೆ.

ಬೂಟುಗಳಿಂದ ನಿಮ್ಮ ಜನ್ಮ ಜಾಲಾಡುತ್ತಿದ್ದರೂ, ನೀವು ಕಾಂಗ್ರೆಸ್ ಗುಮಲಾಮಗಿರಿ ಮಾಡುವುದು ನಿಮ್ಮ ಸ್ವಾಭಿಮಾನವೇ ಎಂದು ಪ್ರಶ್ನಿಸಿದ್ದಾರೆ. ದಲಿತತ್ವದ ಗಂಧವೇ ಅರಿಯದೆ, ದಲಿತರ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಚಿಂತಿಸದೆ, ಗೂಗಲ್ ಬೇಬಿ ದಲಿತನಾಗಿ ದಿನಂಪ್ರತಿ ಆರ್‌ಎಸ್‌ಎಸ್ ಅಥವಾ ವಿರೋಧ ಪಕ್ಷದ ಮುಖಂಡರ ಮೇಲೆ ಸುಖಾಸುಮ್ಮನೆ ಆರೋಪ ಮಾಡುವುದೇ ನಿಮ್ಮ ಸಾಧನೆಯೇ? ಎಲ್ಲದರಲ್ಲಿಯೂ ಬೀದಿಬಸವನಂತೆ ಮೂಗು ತೂರಿಸಿ, ಮತಿಹೀನರಂತೆ ವರ್ತಿಸುವುದು ನಾಯಕರ ಲಕ್ಷಣವಲ್ಲ ಎಂದಿದ್ದಾರೆ.

ಮೂಢನಿಗೆ ಮುಕ್ತಿ ಮಾರ್ಗವ ತೋರಲರಿಯದೆ, ಆಡಬಾರದ ಮಾತನಾಡಿ ನರಕಕ್ಕೆ ಗುರಿಯಾದ ಎಂಬಂತೆ ಪ್ರಸ್ತುತ ನಿಮ್ಮ ಸ್ಥಿತಿಯಾಗಿದೆ. ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತೆ, ಬಡ ದಲಿತರನ್ನು ತುಳಿದು, ಹಲವು ಬಾರಿ ಗೆದ್ದ ದಲಿತ ಶಾಸಕರನ್ನು ವಂಚಿಸಿ, ದಲಿತರ ಆಶಾಕಿರಣದಂತಿದ್ದ ದಿ. ಶ್ರೀ ಶ್ರೀನಿವಾಸ್ ಪ್ರಸಾದ್ ರವರನ್ನು ಸಂಪುಟದಿಂದ ಕಿತ್ತೊಗೆಸಿ, ಅಪ್ಪನ ಆಶೀರ್ವಾದದಿಂದ ಮಂತ್ರಿಯಾದ ನಿಮ್ಮ ಪೌರುಷ ಎಂತದ್ದೆಂದು ನಿಜವಾದ ದಲಿತರಿಗೆ ನೆನಪಿದೆ ಬಿಡಿ.

ನಿಮ್ಮ ಕುಟುಂಬಕ್ಕಾಗಿ ದಶಕಗಳ ಕಾಲ ಸೇವೆ ಮಾಡಿದ ನಿಷ್ಠಾವಂತರು ಇಂದಿಗೂ ಹೋಬಳಿ, ಗ್ರಾಮ ಮಟ್ಟದಲ್ಲಿ ಉಳಿದಿದ್ದಾರೆ. ದಲಿತರನ್ನು ಕೇವಲ ಮೆಟ್ಟಿಲುಗಳಾಗಿ ಬಳಸಿಕೊಳ್ಳುವ ನಿಮ್ಮ ಈ ನಡೆಯೇ ವಂಶಪಾರಂಪರ್ಯ ದಲಿತತ್ವಕ್ಕೆ ಸ್ಪಷ್ಟ ಉದಾಹರಣೆ.

ನಿಮ್ಮ ಸಾಧನೆ, ಹೋರಾಟ ಮತ್ತು ರಾಜಕೀಯ ಹಿನ್ನೆಲೆಯನ್ನು ತಿಳಿಯಬೇಕಾದರೆ ಒಮ್ಮೆ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಳ್ಳಿ. ಬಹುಶಃ ಆ ಕನ್ನಡಿಯೂ ನಿಮ್ಮ ಮುಖವನ್ನು ತೋರಿಸಲು ಹಿಂಜರಿಯಬಹುದು. ಯಾಕೆಂದರೆ ಯಾವುದೇ ಹೋರಾಟದ ಹಿನ್ನೆಲೆ ಇಲ್ಲದೆ, ಪಕ್ಷ ಸಂಘಟನೆಯ ಶ್ರಮವಿಲ್ಲದೆ, ಕೇವಲ ತಂದೆಯ ಹೆಸರಿನಲ್ಲಿ ಅಧಿಕಾರ ಅನುಭವಿಸುವ ನಿಮಗೆ ದಲಿತತ್ವದ ಮೌಲ್ಯ ಹೇಗೆ ತಾನೇ ತಿಳಿದೀತು? ಎಂದು ಪ್ರಶ್ನಿಸಿದ್ದಾರೆ.

## ಅವರು ನಮ್ಮ ರಾಷ್ಟ್ರೀಯ ನಾಯಕರು, ಇಲ್ಲಿಂದಲೇ ನಮಸ್ಕಾರ: ಡಿಕೆಶಿ

● ಮನರೇಗಾ ವಿಚಾರವಾಗಿ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಕಿಡಿ ● ಮೊಬೈಲ್ ಬ್ಯಾನ್ ಬಗ್ಗೆ ಸರ್ಕಾರದ ಚಿಂತನೆ

• ಉದಯವಾಹಿನಿ, ಬೆಂಗಳೂರು

ಅವರು ನಮ್ಮ ರಾಷ್ಟ್ರೀಯ ನಾಯಕರು. ಅವರಿಗೆ ಇಲ್ಲಿಂದಲೇ ನಮಸ್ಕಾರ. ಹೀಗಂತ ಡಿಸಿಎಂ ಡಿಕೆ ಶಿವಕುಮಾರ್ ಅವರು ಸಚಿವ ಎಚ್ ಸಿ ಮಹದೇವಪ್ಪಗೆ ವ್ಯಂಗ್ಯವಾಗಿ ತಿರುಗೇಟು ನೀಡಿದರು. ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ಸಚಿವ ಮಹದೇವಪ್ಪ ಅವರು ದಲಿತ ಸಿಎಂ ವಿಚಾರ ಮಂಡಿಸಿರುವ ಬಗ್ಗೆ ಕೇಳಿದಾಗ, ಅವರು ನಮ್ಮ ರಾಷ್ಟ್ರೀಯ ನಾಯಕರು. ಅವರಿಗೆ ಇಲ್ಲಿಂದಲೇ ನಮಸ್ಕಾರ ಎಂದರು.

**ಮಹದೇವಪ್ಪಗೆ ವ್ಯಂಗ್ಯ ತಿರುಗೇಟು**

ಇನ್ನು ಇದೇ ಸಂದರ್ಭದಲ್ಲಿ ಶಾಲೆಗಳಲ್ಲಿ ಮೊಬೈಲ್ ಬ್ಯಾನ್ ಮಾಡುವ ವಿಚಾರ ಚರ್ಚೆಯಲ್ಲಿದೆ. ಪೋಷಕರಿಂದಲೂ ಈ ಬಗ್ಗೆ ಒತ್ತಡವಿದೆ. ಅನೇಕ ದೇಶಗಳಲ್ಲೂ ಈ ಕ್ರಮ ಕೈಗೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗುತ್ತಿದೆ ಎಂದು ಹೇಳಿದರು.

''ನಮ್ಮ ಶಾಲೆಗಳಲ್ಲೂ ಮೊಬೈಲ್ ಬ್ಯಾನ್ ಮಾಡಿದ್ದೇವೆ. ಯಾವ ರೀತಿ ಮೊಬೈಲ್ ಬಳಕೆ ದುರುಪಯೋಗವಾಗುತ್ತಿದೆ ಎಂದು ಬಹಿರಂಗಗೊಳಿಸಲು ಆಗುವುದಿಲ್ಲ. ಅದಕ್ಕೆ ಈ ವಿಚಾರವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದರು.

ರಾಷ್ಟ್ರೀಯ ನೀರು ಗುಣಮಟ್ಟ ಪ್ರಮಾಣಿತ ಸಂಸ್ಥೆಯು ಬೆಂಗಳೂರು ಕೆರೆಗಳ ನೀರು ಕುಡಿಯಲು ಅರ್ಹವಲ್ಲ ಎಂದು ನೀಡಿರುವ ವರದಿ ಬಗ್ಗೆ ಕೇಳಿದಾಗ, ಬೆಂಗಳೂರಿನ ಕೆರೆ ನೀರನ್ನು ಕುಡಿಯಲು ಹಾಗೂ ಸ್ನಾನಕ್ಕೆ ಬಳಸಿ ಎಂದು ಸರ್ಕಾರ ಹೇಳಿಲ್ಲ.

ಈ ಕೆರೆಗಳು ಇರುವುದು ಅಂತರ್ಜಲ ಹೆಚ್ಚಳ ಮಾಡಲು. ತಿಪ್ಪಗೊಂಡನಹಳ್ಳಿ ಕೆರೆ ನೀರನ್ನು ಬಿಡ್ಬ್ಲ್ಯು ಎಸ್ ಎಸ್ ಬಿಯಿಂದ ಶುದ್ದಿ ಮಾಡಲಾಗುತ್ತಿದೆ. ಬೆಂಗಳೂರಿನ ಕೆರೆಗಳ ನೀರು ಕುಡಿಯಲು, ಸ್ನಾನಮಾಡಲು ಅಲ್ಲ ಎಂದರು.

**ಬಿಜೆಪಿ ವಿರುದ್ಧ ಕಿಡಿ:** ''ದೀಪ ಆರುವಾಗ ಜೋರಾಗಿ ಉರಿಯುತ್ತದೆಯಂತೆ. ಅದೇ ರೀತಿ



### ಕೂಲಿ ಮಾಡಿದವರಿಗೂ ಹಣ ಬಿಡುಗಡೆ ಮಾಡಿಲ್ಲ

ವಿಬಿ ಗ್ರಾಮ್ ಜೀ ವಿಚಾರವಾಗಿ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟನೆ ನೀಡಿಲ್ಲ. ಹಾಗೂ ಯಾವುದೇ ನಿರ್ದೇಶನ ನೀಡಿಲ್ಲ. ಈ ಹಿಂದೆ ಕೂಲಿ ಮಾಡಿದವರಿಗೂ ಹಣ ಬಿಡುಗಡೆ ಮಾಡಿಲ್ಲ. ಕಾಯ್ದೆಯನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಲಾಗಿದೆ. ಕೂಲಿ ಕಾರ್ಮಿಕರು, ಬಡವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಇದರ ವಿರುದ್ಧ ದೊಡ್ಡ ಹೋರಾಟ ನಡೆಸುತ್ತಿದ್ದೇವೆ. ಚಿಕ್ಕಬಳ್ಳಾಪುರದಲ್ಲಿ ನರೇಗಾ ಬಚಾವ್ ಆದೋಂಲನ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬಿಜೆಪಿಯ ಅಂತಿಮ ದಿನಗಳು ಸಮೀಪಿಸಿರುವ ಕಾರಣ, ಮಹಾತ್ಮಾ ಗಾಂಧಿ ಅವರ ಹೆಸರು ಬದಲಿಸುವ ಕೆಲಸಕ್ಕೆ ಮುಂದಾಗಿದ್ದಾರೆ'' ವಾಗ್ದಾಳಿ ನಡೆಸಿದರು.

ಮನರೇಗಾ ಬಚಾವೋ ಸಂಗ್ರಾಮ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿ, ''ಈ ದೇಶ ಉಳಿಸಲು ನಾವು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ. ಕಾಂಗ್ರೆಸ್ ಪಕ್ಷ ಸದಾ ಎಲ್ಲಾ ವರ್ಗದ ಜನರಿಗೆ ಕಾರ್ಯಕ್ರಮ ನೀಡುತ್ತಾ ಬದುಕಿನಲ್ಲಿ ಬದಲಾವಣೆ ತರುವ ಕೆಲಸ ಮಾಡಿಕೊಂಡು ಬರುತ್ತಿದೆ. ಮಹಾತ್ಮ ಗಾಂಧಿ ಅವರ ಹೆಸರಿನಲ್ಲಿ 20 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರವು ಬಡವರಿಗಾಗಿ ಉದ್ಯೋಗ ಖಾತರಿ ಕಾರ್ಯಕ್ರಮ ನೀಡಿತ್ತು. ಇದು ದೇಶದ ಪಾಲಿಗೆ ಕ್ರಾಂತಿಕಾರಿ ಕಾರ್ಯಕ್ರಮ'' ಎಂದು ತಿಳಿಸಿದರು.

''ಈ ಕಾರ್ಯಕ್ರಮದಲ್ಲಿ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಯಾವ ಕಾಮಗಾರಿ ಮಾಡಬೇಕು ಎಂಬ ತೀರ್ಮಾನ ಮಾಡುವ ಅಧಿಕಾರ ಹೊಂದಿದ್ದವು. ಹಸಿದ ಹೊಟ್ಟೆ, ಖಾಲಿ ಜೇಬಿನ ನೋವು ಏನು ಎಂಬುದು ನಮಗೆ ಅರಿವಿದೆ. 60% ಗ್ರಾಮೀಣ ಭಾಗದ ಮಹಿಳೆಯರು ಕೂಲಿ ಮಾಡುತ್ತಿದ್ದಾರೆ. ರಾಜ್ಯದಲ್ಲಿರುವ 5900 ಪಂಚಾಯ್ತಿಗಳಲ್ಲಿ, ಕನಿಷ್ಠ 1-2 ಕೋಟಿ ರೂಪಾಯಿಯಷ್ಟು ಹಣವನ್ನು ಪಂಚಾಯಿತಿಗಳಲ್ಲಿ ನೀಡಿ ಅಲ್ಲಿ ಶಾಶ್ವತ ಆಸ್ತಿ ಸೃಷ್ಟಿಸಿ ಜನರಿಗೆ ಉದ್ಯೋಗ ಕಲ್ಪಿಸಲಾಗುತ್ತಿತ್ತು.

ಮನರೇಗಾ ಉಳಿಸುವ ಮೂಲಕ, ಹಳ್ಳಿಗಳು, ಈ ದೇಶ, ಕಾರ್ಮಿಕರು, ಪಂಚಾಯಿತಿಗಳು ಹಾಗೂ ಮಹಾತ್ಮ ಗಾಂಧಿ ಅವರ ಹೆಸರು ಉಳಿಸಬೇಕಾಗಿದೆ'' ಎಂದು ಕರೆ ನೀಡಿದರು.

**ಈ ದಿನದ ದರ** ಪೆಟ್ರೋಲ್: 102.98 ₹/L ಡೀಸೆಲ್ : 91.42 ₹/L ಬಂಗಾರ: ₹16,135/Gram24ct ₹14,790/Gram22ct ಬೆಳ್ಳಿ: ₹300.00/Gram

## ಜಪಾನ್‌ನಂತೆಯೇ ಕಾಣಿದೆ ಬೆಂಗಳೂರು ಮನಸೋತ ಉದ್ಯಾನ ನಗರಿ ಜನ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಜಪಾನ್-ಕೊರಿಯನ್ ವೆಬ್‌ಸೀರಿಸ್ ಅಥವಾ ಸಿನಿಮಾಗಳನ್ನು ನೋಡುವ ಜನರಿಗೆ ಚೆರ್ರಿ ಬ್ಲಾಸಮ್ ಅಂದ್ರೆ ತುಂಬಾನೆ ಇಷ್ಟ. ಈ ಸೀಸನ್ ಅತ್ಯಂತ ಬ್ಯೂಟಿಫುಲ್ ಆಗಿ ಕಾಣಿಸುತ್ತದೆ. ಆದರೆ ನಮ್ಮ ಬೆಂಗಳೂರು ಕೂಡ ಈ ದೇಶಗಳನ್ನು ಮೀರಿಸಿದೆ. ಜಪಾನ್, ಕೊರಿಯಾ ರೀತಿ ನಮ್ಮ ಬೆಂಗಳೂರಿನ ಬೀದಿಬೀದಿಯಲ್ಲಿಯೂ ಪಿಂಕ್ ಹೂವುಗಳನ್ನು ಕಾಣಬಹುದಾಗಿದೆ.


ಬೆಳಗ್ಗೆ ಹಾಗೂ ಸಂಜೆ ಈ ಮರಗಳ ಬಳಿ ಓಡಾಡೋದೇ ಒಂದು ಸಂಭ್ರಮ. ಇನ್ನು ಫೋಟೊ ಪ್ರಿಯರಿಗೆ ಇದಕ್ಕಿಂತಹ ಚಂದದ ಸಾಮಾಜಿಕ ಜಾಲತಾಣದಲ್ಲಿ ಇದರ ಫೋಟೊ, ವಿಡಿಯೋಗಳು ವೈರಲ್ ಆಗಿವೆ.ಸದ್ಯ ಬೆಂಗಳೂರಿನಲ್ಲಿ ಹಳದಿ ಹಾಗೂ ಗುಲಾಬಿ ಬಣ್ಣದ ಹೂಗಳು ಅರಳಿ ನಿಂತ್ತಿವೆ. ಕೊಳವೆ ಆಕಾರದಲ್ಲಿ ಕಾಣುವ ಗುಲಾಬಿ ಬಣ್ಣದ ಹೂವನ್ನ ಟಬುಬಿಯಾ ರೋಸುಯಾ ಪಿಂಕ್ ಪೋಯ್ ಅಂತ ಕರೆಯಲಾಗಿತ್ತೆ. ಹಳದಿ ಬಣ್ಣದ ಹೂಗಳನ್ನ ಯೆಲ್ಲೋ ಟ್ರಂಪೆಟ್ ಫ್ಲವರ್ ಅಂತಾ ಕರೆಯಲಾಗುತ್ತೆ. ವಿಶೇಷತೆ ಅಂದರೆ ಮರದಲ್ಲಿ ಎಲೆಗಳು ವಿರಳವಾಗಿದ್ದು, ಸಂಪೂರ್ಣವಾಗಿ ಹೂಗಳಿಂದ ತುಂಬಿರುತ್ತವೆ.

## ರಾಜ್ಯದ ಜಿಲ್ಲೆಗಳಲ್ಲಿ ಒಣಹವೆ, ಬಿಸಿಲು: ಬೆಂಗಳೂರಂತೂ ಧಗಧಗ

• ಉದಯವಾಹಿನಿ,ಬೆಂಗಳೂರು

ರಾಜ್ಯದಲ್ಲಿ ಬಿಸಿಲು ನೆತ್ತಿಗೇರುತ್ತಿದ್ದು, ಬಹುತೇಕ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ರಾಜಧಾನಿ ಬೆಂಗಳೂರಿನಲ್ಲಿ ಮಾತ್ರ ಅತಿಯಾದ ಬಿಸಿಲು ಇರಲಿದೆ.
ರಾಜ್ಯದಲ್ಲಿ ಬೇಸಿಗೆ ತೀವ್ರಗೊಳ್ಳುತ್ತಿದ್ದು, ಸಿಲಿಕಾನ್ ಸಿಟಿ ಬೆಂಗಳೂರು ಬಿಸಿಲಿನ ತಾಪಕ್ಕೆ ತತ್ತರಿಸುತ್ತಿದೆ. ಕಳೆದ ಒಂದು ವಾರದಿಂದ ತಾಪಮಾನ ನಿರಂತರ ಏರಿಕೆಯಾಗುತ್ತಿದ್ದು ಮುಂದಿನ ದಿನಗಳಲ್ಲಿ ಗರಿಷ್ಠ ತಾಪಮಾನ 38ರಿಂದ 39 ಡಿಗ್ರಿ ಸೆಲ್ಸಿಯಸ್ ತಲುಪುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

## ವಿದೇಶಕ್ಕೆ ಹೋಲಿಸಿದರೆ ಬೆಂಗಳೂರೇ ಬೆಸ್ಟ್ ವರ್ಲ್ಡ್ ಬೆಸ್ಟ್ ಪ್ಲೇಸ್ ಎಂದ ನೆಟ್ಟಿಗನ ಪೋಸ್ಟ್ ವೈರಲ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕೆಲಸದ ನಿಮಿತ್ತ ಬೆಂಗಳೂರನ್ನು ಆಯ್ಕೆ ಮಾಡಿಕೊಂಡ ಹಲವು ಮಂದಿ ಇದ್ದಾರೆ. ಇಲ್ಲಿನ ಜೀವನ ಶೈಲಿ ದುಬಾರಿಯಾಗಿದ್ದು, ಹೆಚ್ಚಿನವರಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತಿದೆ. ಇಲ್ಲಿನ ಟ್ರಾಫಿಕ್ ಮತ್ತು ಮೂಲ ಸೌಕರ್ಯಗಳ ಬಗ್ಗೆ ಹೆಚ್ಚಿನ ದೂರುಗಳಿದ್ದರೂ, ಇಲ್ಲಿ ವರ್ಷಪೂರ್ತಿ ಆಹ್ಲಾದಕರವಾದ ಹವಾಮಾನ, ತಂಪಾದ ವಾತಾವರಣ ಇರುತ್ತದೆ ಎಂದು ಹೇಳುವವರಿಗೂ ಕಡಿಮೆ ಏನಿಲ್ಲ. ಇತ್ತೀಚೆಗೆ ಹೊರಗಿನಿಂದ ಬಂದ ವ್ಯಕ್ತಿಯೊಬ್ಬರು ಬೆಂಗಳೂರಿನ ಹವಾಮಾನಕ್ಕೆ ಫಿದಾ ಆಗಿದ್ದು ವರ್ಲ್ಡ್ ಬೆಸ್ಟ್ ಸಿಟಿ ಎಂದು ಹೊಗಳಿದ್ದಾರೆ. ಸದ್ಯ ಇವರ ಪೋಸ್ಟ್ ಸೋಶಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗಿದೆ.

ಅಮರನಾಥ್ ಶಿವಶಂಕರ್ ಎಂಬ ವ್ಯಕ್ತಿ ಬೆಂಗಳೂರಿನ ವಾತಾವರಣದ ಅನುಭವವನ್ನು ಹಂಚಿಕೊಂಡಿದ್ದಾರೆ. ನೀವು ವಿದೇಶದಲ್ಲಿ ವಾಸಿಸುತ್ತಿದ್ದರೆ, ಬೆಂಗಳೂರಿನ ಹವಾಮಾನ ಎಷ್ಟು ಅದ್ಭುತ ಎಂಬುದು ನಿಮಗೆ ಅರ್ಥವಾಗುತ್ತದೆ. ಇದು ನಿಜಕ್ಕೂ ಮೆಚ್ಚುವಂತದ್ದು ಎಂದಿದ್ದಾರೆ.ತಮ್ಮ ಪೋಸ್ಟ್‌ನಲ್ಲಿ, ನೀವು ಪಾಶ್ಚಿಮಾತ್ಯ ಜಗತ್ತಿನಲ್ಲಿ ವಾಸಿಸುತ್ತಿದ್ದರೆ, ಬೆಂಗಳೂರಿನ ಹವಾಮಾನ ಬಗ್ಗೆ ನೀವು ಅರಿತುಕೊಳ್ಳುತ್ತೀರಿ.

ಮಾಲಿನ್ಯವನ್ನು ಕಡಿಮೆ ಮಾಡಲು, ನಮ್ಮ ರಸ್ತೆಗಳನ್ನು ಸರಿ ಪಡಿಸಲು, ಸಾರ್ವಜನಿಕ ಸಾರಿಗೆಯನ್ನು ಹೆಚ್ಚಿಸಲು ಮತ್ತು ನಮ್ಮ ಮಳೆನೀರು ಚರಂಡಿಗಳನ್ನು ಸರಿಪಡಿಸಲು ನಾವು ಸಾಧ್ಯವಾದರೆ, ವಿಶ್ವದ ಶ್ರೇಷ್ಠ ನಗರಗಳಲ್ಲಿ ಒಂದಾಗುತ್ತದೆ. ಬೆಂಗಳೂರನ್ನು ಮತ್ತೆ ಶ್ರೇಷ್ಠಗೊಳಿಸಿ ಎಂದು ಬರೆದುಕೊಂಡಿದ್ದಾರೆ. ಈ ಪೋಸ್ಟ್ ತ್ವರಿತವಾಗಿ ಜನಪ್ರಿಯತೆ ಗಳಿಸಿದ್ದು, 31,000ಕ್ಕೂ ಹೆಚ್ಚು ವೀಕ್ಷಣೆ ಗಳಿಸಿದೆ.

## 2,500ಕ್ಕೂ ಅಧಿಕ ಡೆಂಜರಸ್ ನಾಯಿಗಳ ಸೆರೆಗೆ ಮುಹೂರ್ತ ಫಿಕ್ಸ್!

• ಉದಯವಾಹಿನಿ,ಬೆಂಗಳೂರು

ಸಿಲಿಕಾನ್ ಸಿಟಿಯಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಬೀದಿ ನಾಯಿಗಳ ಹಾವಳಿ ತಡೆಗಟ್ಟಲು ಮತ್ತು ಸಾರ್ವಜನಿಕರ ರಕ್ಷಣೆಗಾಗಿ ಜಿಬಿಎ ಒಂದು ಮಹತ್ವದ ಹೆಜ್ಜೆ ಇಟ್ಟಿದೆ. ಸುಪ್ರೀಂಕೋರ್ಟ್ ನೀಡಿದ ಕಟ್ಟುನಿಟ್ಟಿನ ಸೂಚನೆಯ ಬೆನ್ನಲ್ಲೇ, ನಗರದ ಕ್ರೂರ ಸ್ವಭಾವವುಳ್ಳ ಬೀದಿ ನಾಯಿಗಳನ್ನು ಪ್ರತ್ಯೇಕಿಸಿ ಅವುಗಳ ಪಾಲನೆಗಾಗಿ ಬೃಹತ್ ಶೆಲ್ಟರ್‌ಗಳನ್ನು ನಿರ್ಮಿಸಲು ಜಿಬಿಎ ಮುಂದಾಗಿದೆ.

ಬೆಂಗಳೂರಿನಲ್ಲಿ ಸುಮಾರು 2.30 ಲಕ್ಷಕ್ಕೂ ಅಧಿಕ ಬೀದಿ ನಾಯಿಗಳಿದ್ದು, ಹೆಚ್ಚು ಆಕ್ರಮಣಕಾರಿಯಾಗಿರುವ 2,500ಕ್ಕೂ ಹೆಚ್ಚು ನಾಯಿಗಳನ್ನು ಗುರುತಿಸಲಾಗಿದೆ. ಒಟ್ಟು 7 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 5 ಪಾಲಿಕೆ ವ್ಯಾಪ್ತಿಗಳಲ್ಲಿ ಅತ್ಯಾಧುನಿಕ ಶೆಲ್ಟರ್‌ಗಳನ್ನು ನಿರ್ಮಿಸಲು ಜಿಬಿಎ ಪ್ಲಾನ್ ಮಾಡಿದೆ.

## ಪವರ್ ಫೈಟ್ ಮಧ್ಯೆ ಸಂಪುಟ ಪುನಾರಚನೆ ಕೂಗು: 31 ಹೊಸ ಕೈ ಶಾಸಕರಿಂದ ಸಂಪುಟ ಸ್ಥಾನ ಕೋರಿ ಹೈಕಮಾಂಡ್‌ಗೆ ಪತ್ರ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪವರ್ ಫೈಟ್ ಮಧ್ಯೆ ಸಚಿವ ಸಂಪುಟ ಪುನಾರಚನೆಯ ಕೂಗು ಕೇಳಿ ಬಂದಿದೆ. ಕಾಂಗ್ರೆಸ್‌ನ 31 ಹೊಸ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದು ಸಂಪುಟ ಪುನಾರಚನೆಗೆ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಪವರ್ ಫೈಟ್ ಚರ್ಚೆ ಹೆಚ್ಚುತ್ತಿರುವ ಬೆನ್ನಲ್ಲೇ ಇದೀಗ ಸಂಪುಟ ಪುನಾರಚನೆಯ ಕೂಗು ಜೋರಾಗಿ ಕೇಳಿ ಬಂದಿದೆ. ಈ ಸಂಬಂಧ ಕಾಂಗ್ರೆಸ್‌ನ ಹೊಸ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದು ಸಂಪುಟ ಪುನಾರಚನೆ ಮಾಡುವಂತೆ ಒತ್ತಾಯಿಸಿದ್ದಾರೆ. ಹೊಸ ಶಾಸಕರಿಗೆ ಅವಕಾಶ ಮಾಡಿಕೊಡುವಂತೆ ಬೇಡಿಕೆ ಇಟ್ಟಿದ್ದಾರೆ. ರಾಹುಲ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾಗೆ ಪತ್ರ ಬರೆದು, ಸಚಿವ ಸಂಪುಟದಲ್ಲಿ ಹೊಸ ಐವರು ಶಾಸಕರಿಗೆ ಅವಕಾಶ ಕೊಡಿ ಎಂದು ಆಗ್ರಹಿಸಿದ್ದಾರೆ. ಶಾಸಕ ಪ್ರದೀಪ್ ಈಶ್ವರ್, ಭೀಮಸೇನ ಚಿಮ್ಮನಕಟ್ಟಿ, ಎ.ಎಸ್. ಪೊನ್ನಣ್ಣ, ನಯನ ಮೋಟಮ್ಮ, ದೇವೇಂದ್ರಪ್ಪ, ವಿಶ್ವಾಸ್ ವೈದ್ಯ, ಇಕ್ಬಾಲ್ ಹುಸೇನ್, ಎನ್.ಟಿ. ಶ್ರೀನಿವಾಸ, ಅಶೋಕ್ ಕುಮಾರ್ ರೈ, ಎನ್. ಶ್ರೀನಿವಾಸ, ನಾರಾ ಭರತ್ ರೆಡ್ಡಿ, ಪ್ರಕಾಶ್ ಕೋಳಿವಾಡ, ಮಂಥರ್ ಗೌಡ, ದರ್ಶನ ಧ್ರುವ ನಾರಾಯಣ, ಚನ್ನಾರೆಡ್ಡಿ, ರವಿಶಂಕರ್ ಸೇರಿ 31 ಹೊಸ ಶಾಸಕರು ಅಂಕಿತದೊಂದಿಗೆ ಪತ್ರ ಬರೆದು ಒತ್ತಾಯ ಮಾಡಿದ್ದಾರೆ.

ಕರ್ನಾಟಕದ ಜನರು ಮೊದಲ ಬಾರಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ 38 ಹೊಸ ಕಾಂಗ್ರೆಸ್ ಸದಸ್ಯರನ್ನು ಆಯ್ಕೆ ಮಾಡಿದ್ದಾರೆ. ಆ ಮೂಲಕ ವಿಧಾನಸಭೆಯಲ್ಲಿ ಹೊಸ ಮುಖಗಳನ್ನು ನೋಡಲು ಅವರು ಬಯಸುತ್ತಾರೆ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಅದು ಕರ್ನಾಟಕದ ಜನರ ಆಕಾಂಕ್ಷೆಯೂ ಆಗಿದೆ. ಹೀಗಾಗಿ ಮೊದಲ ಬಾರಿಗೆ ಆಯ್ಕೆಯಾದ ಶಾಸಕರಿಗೆ ಸಂಪುಟದಲ್ಲಿ ಸ್ಥಾನ ನೀಡುವುದು ಸಮರ್ಥನೀಯವಾಗಿದೆ.

## ಕಾಂಗ್ರೆಸ್ಸಿನವರು ಎಷ್ಟು ಬಟ್ಟೆ ಬಿಚ್ಚಿಕೊಂಡರೂ ವಿಬಿ ಜಿ ರಾಮ್ ಜಿಯೇ ಊರ್ಜಿತ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕಾಂಗ್ರೆಸ್ಸಿನವರು ಎಷ್ಟು ಬಟ್ಟೆ ಬಿಚ್ಚಿಕೊಂಡರೂ ವಿಬಿ ಜಿ ರಾಮ್ ಜಿ ಯೇ ಊರ್ಜಿತವಾಗಲಿದೆ. ಆದ್ದರಿಂದ ವ್ಯರ್ಥ ಪ್ರಯತ್ನ ಮಾಡಬೇಡಿ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ. ಸೋಮವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ವಿಬಿ ಜಿ ರಾಮ್ ಜಿ ಜಾಗೃತಿಗಾಗಿ ಎಲ್ಲಾ ಕಡೆ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ಇಡೀ ದೇಶವ್ಯಾಪಿ ಬೆಂಬಲವೂ ಅದಕ್ಕೆ ವ್ಯಕ್ತವಾಗಿದೆ. ಅದನ್ನು ವಾಪಸ್ ಪಡೆಯುವ ಸಂದರ್ಭ ಒದಗಿಬರಲಾರದು ಎಂದು ತಿಳಿಸಿದರು.

ಕಾಂಗ್ರೆಸ್ಸಿನವರು ದೇಶವಿರೋಧಿ ಚಟುವಟಿಕೆ ಮಾಡುತ್ತಾರೆ. ದೇಶಕ್ಕೇ ಅಪಮಾನ ಮಾಡುತ್ತಾರೆ ಎಂದು ಟೀಕಿಸಿದರು. ಇವತ್ತು ಚಿಕ್ಕಬಳ್ಳಾಪುರದಲ್ಲಿ ಮತ್ತೆ ಮನ್‌ರೇಗಾ ಬೇಕೆಂದು ಹೋರಾಟ ಮಾಡಿದ್ದಾರೆ. ನಿನ್ನೆ ಶೃಂಗಸಭೆ ವಿರೋಧಿಸಲು ಎಷ್ಟು ಬಟ್ಟೆ ಬಿಚ್ಚಿಕೊಂಡಿದ್ದೀರೋ ಅದಕ್ಕಿಂತ ಹೆಚ್ಚು ಬಟ್ಟೆ ಬಿಚ್ಚಿಕೊಂಡರೂ ವಿಬಿ ಜಿ ರಾಮ್ ಜಿ ಯೇ ಊರ್ಜಿತವಾಗಲಿದೆ. ಇದರಿಂದ ಜನರಿಗೆ ಬಹಳ ಅನುಕೂಲ ಆಗುತ್ತಿದೆ ಎಂದರು.

**ಅಭಿವೃದ್ಧಿ, ಅನ್ಯಾಯ ಸರಿಪಡಿಸುವ ಕೆಲಸ ಮಾಡಿ:** ವಿಬಿ ಜಿ ರಾಮ್ ಜಿ ಏನೆಂಬುದು ಜನರಿಗೆ ಗೊತ್ತಾಗಿದೆ. ನೀವು ಮಾಡಬೇಕಾದುದು ಅಭಿವೃದ್ಧಿ ಕೆಲಸಗಳು ಎಂದು ಹೇಳಿದ ಅವರು, ಜನರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕಾದ ಕೆಲಸ ಮಾಡಿ ಎಂದು ಆಗ್ರಹಿಸಿದರು. ಒಳ ಮೀಸಲಾತಿ ಸೃಷ್ಟಿ ಮಾಡಿದ್ದೀರಿ.

## ಬಹುತೇಕ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕುಸಿತ

# ಬೇಸಿಗೆ ಮುನ್ನ ಬಿಗ್ ಶಾಕ್..!


ಉದಯವಾಹಿನಿ ಚಿತ್ರ

### ಅಣೆಕಟ್ಟುಗಳಲ್ಲಿ ನೀರಿನ ಮಟ್ಟ ಕುಸಿತ: ಬೇಸಿಗೆ ಆರಂಭಕ್ಕೂ ಮೊದಲೇ ಕುಡಿಯುವ ನೀರಿಗೆ ಹಾಹಾಕಾರ!

### ನೀರಿನ ಸಮಸ್ಯೆಗೆ ಜನ ಹೈರಾಣ

ರಾಜ್ಯದಲ್ಲಿ ಮಳೆಯಾಗದೆ ಬಿಸಿಲಿನ ಪ್ರಮಾಣ ಹೆಚ್ಚಳವಾದ ನೀರಿನ ಅಭಾವವೂ ಎದುರಾಗಿತ್ತು. ನೀರಿನ ಸಮಸ್ಯೆಯಿಂದ ಬೆಂಗಳೂರು ಸೇರಿದಂತೆ ಕರ್ನಾಟಕದ ಜನ ಹೈರಾಣಾಗಿದ್ದರು. ಇದೀಗ 2026ರಲ್ಲೂ ಅದೇ ಪರಿಸ್ಥಿತಿ ಮರುಕಳಿಸುವ ಸಾಧ್ಯತೆ ದಟ್ಟವಾಗಿದೆ. ಕಳೆದ ವರ್ಷ ತುಂಗಭದ್ರಾ ಅಣೆಕಟ್ಟೆಯಲ್ಲಿ ಸುಮಾರು 40 ಟಿಎಂಸಿ ಅಡಿ ನೀರು ಇದ್ದು, ಈಗ ಅದು 24 ಟಿಎಂಸಿಗೆ ಇಳಿದಿದೆ. ಅದೇ ರೀತಿ, ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಈಗ 87 ಟಿಎಂಸಿ ಇದೆ. ಕಳೆದ ವರ್ಷ 78 ಟಿಎಂಸಿ ಇದೆ. ಸೂಪಾ ಅಣೆಕಟ್ಟಿನ ನೀರಿನ ಮಟ್ಟ 82 ಟಿಎಂಸಿ ಯಿಂದ 77 ಅಡಿಗೆ ಇಳಿದಿದೆ. ಕೃಷ್ಣರಾಜ ಜಲಾಶಯದಲ್ಲಿ ಸ್ವಲ್ಪ ಹೆಚ್ಚಳವಾಗಿದೆ. ಕಳೆದ ವರ್ಷ ಇದು 37.88 ಟಿಎಂಸಿಎಫ್‌ಟಿ ಇತ್ತು, ಈಗ ಅದು 38.64 ಟಿಎಂಸಿ ಆಗಿದೆ. 13 ಅಣೆಕಟ್ಟುಗಳಲ್ಲಿ ಒಟ್ಟು ಸಾಮರ್ಥ್ಯ 895.07 ಟಿಎಂಸಿ ಅಡಿಯಿದೆ.
ಆದರೆ ಸದ್ಯ 493.91 ಟಿಎಂಸಿ ಅಡಿಯಿದೆ. ಆಂದರೆ ಸಾಮರ್ಥ್ಯದ ಶೇ.45ರಷ್ಟು ಮಾತ್ರ ನೀರು ಸಂಗ್ರಹವಾಗಿದೆ.

### ನೀರಿನ ಅಗತ್ಯಗಳೇ ಆದ್ಯತೆ

ಕಳೆದ ವರ್ಷ ಕ್ರೆಸ್ಟ್ ಗೇಟ್‌ಗಳು ಮುರಿದು ನೀರು ನಷ್ಟವಾದ ಕಾರಣ ತುಂಗಭದ್ರಾ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸಲು ಸಾಧ್ಯವಿಲ್ಲ. ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದ್ದರೂ, ಜಲಾಶಯವು ಅದರಲ್ಲಿ ಶೇ.70ರಷ್ಟು ಮಾತ್ರ ಸಂಗ್ರಹಿಸಲು ಸಾಧ್ಯವಾಯಿತು ಎಂದು ಹೇಳಿದ್ದಾರೆ.

ಕುಡಿಯುವ ನೀರಿನ ಅಗತ್ಯಗಳೇ ಆದ್ಯತೆಯಾಗಿರುವುದರಿಂದ ರೈತರು ಕೃಷಿ ಜಮೀನುಗಳಿಗೆ ನೀರು ಸರಬರಾಜು ಮಾಡದೆ ತೀವ್ರ ಸಂಕಷ್ಟದಲ್ಲಿದ್ದಾರೆ ಎಂದು ನೀರಾವರಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಕಳೆದ ವರ್ಷ ರಾಜ್ಯದಲ್ಲಿ ನಿರೀಕ್ಷೆಗೂ ಮೀರಿ ಮಳೆಯಾದ್ದರಿಂದ ರಾಜ್ಯದ ಬಹುತೇಕ ಎಲ್ಲಾ ಜಲಾಶಯಗಳು ಅವಧಿಗೂ ಮುನ್ನವೇ ತುಂಬಿದ ಪರಿಣಾಮ ಜನಜಾನುವಾರುಗಳಿಗೆ ಯಾವುದೇ ಕೊರತೆಯಾಗುವುದಿಲ್ಲ ಎಂಬ ಭರವಸೆಯಿತ್ತು. ಆದರೆ ವಾಸ್ತವ ಬೇರೆಯೇ ಇದೆ.

ರಾಜ್ಯದ 13 ಪ್ರಮುಖ ಅಣೆಕಟ್ಟುಗಳ ಪೈಕಿ ಹತ್ತು ಜಲಾಶಯಗಳಲ್ಲಿ ಈಗ ಹಿಂದಿನ ವರ್ಷಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ.

ಹೆಚ್ಚುತ್ತಿರುವ ತಾಪಮಾನದಿಂದಾಗಿ ಅಣೆಕಟ್ಟುಗಳಿಂದ ನೀರು ಆವಿಯಾಗುವಿಕೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಅತಿಯಾದ ಬಳಕೆ ಅಂತರ್ಜಲದ ಮೇಲೂ ಪರಿಣಾಮ ಬೀರಿದೆ. ಈ ಬೇಸಿಗೆಯಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಕುಡಿಯುವ ನೀರು ಕಳವಳಕಾರಿಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಮಾಹಿತಿಯ ಪ್ರಕಾರ, 2025ರಲ್ಲಿ ಎಲ್ಲಾ 13 ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹವು 535 ಸಾವಿರ ಮಿಲಿಯನ್ ಘನ ಅಡಿ (ಟಿಎಂಸಿ) ಆಗಿತ್ತು, ಆದರೆ ಈಗ ಅದು 493 ಟಿಎಂಸಿಎಫ್‌ಟಿ ಆಗಿದೆ, 42 ಟಿಎಂಸಿಎ ವ್ಯತ್ಯಾಸವಾಗಿದೆ. ಬೇಸಿಗೆಯಲ್ಲಿ ಹೆಚ್ಚುತ್ತಿರುವ ಬಿಸಿಲಿನ ತಾಪದಿಂದಾಗಿ ಜಲಾಶಯಗಳು, ಕೆರೆ-ಕಟ್ಟೆಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿಯುತ್ತಿದ್ದು, ಕುಡಿಯುವ ನೀರಿಗೆ ತೀವ್ರ ಅಭಾವ ಸೃಷ್ಟಿಯಾಗಿದೆ. ಹವಾಮಾನ ಬದಲಾವಣೆ, ಅಸಮರ್ಪಕ ಮಳೆ ಮತ್ತು ಬತ್ತಿ ಹೋಗುತ್ತಿರುವ ಅಂತರ್ಜಲ ಮಟ್ಟದಿಂದಾಗಿ ಈ ಸಮಸ್ಯೆ ಜಟಿಲವಾಗಿದೆ. ಬೆಂಗಳೂರಿನಂತಹ ನಗರಗಳಲ್ಲಿ ಪರ್ಯಾಯ ನೀರಿನ ಮೂಲಗಳ ಹುಡುಕಾಟ ಮತ್ತು ಜಲ ಸಂರಕ್ಷಣೆ ಅತ್ಯಗತ್ಯವಾಗಿದೆ.

2025ನೇ ಸಾಲು ಕರ್ನಾಟಕಕ್ಕೆ ಹವಾಮಾನದ ವಿಚಾರದಲ್ಲಿ ಅತ್ಯಂತ ಉತ್ತಮ ವರ್ಷವಾಗಿತ್ತು. ರಾಜ್ಯದಲ್ಲಿ ಉತ್ತಮ ಮಳೆಯಿಂದಾಗಿ ಯಾವುದೇ ಸಮಸ್ಯೆ ಆಗಿರಲಿಲ್ಲ.

ಆದರೆ 2023 - 2024ನೇ ಸಾಲಿನಲ್ಲಿ ಮಳೆ ಆಗದೆ ಸಮಸ್ಯೆ ಹೆಚ್ಚಾಗಿತ್ತು. ತಾಪಮಾನವೂ ಹೆಚ್ಚಳವಾಗಿತ್ತು. ಇದೀಗ 2026ನೇ ಸಾಲಿನಲ್ಲೂ ಇದೇ ಪರಿಸ್ಥಿತಿ ಎದುರಾಗುವ ಆತಂಕ ಶುರುವಾಗಿದೆ. ಕರ್ನಾಟಕದಲ್ಲಿ ಈ ಬಾರಿ ಭಾರೀ ಬಿಸಿಲು ಇರಲಿದೆ. ಅಲ್ಲದೇ ಈ ಬಾರಿಯ ಬೇಸಿಗೆಯ ಸಮಯದಲ್ಲಿ ಗರಿಷ್ಠ ತಾಪಮಾನವು ಹೆಚ್ಚಳವಾಗಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ ಬಿಸಿಲಿ ಪ್ರಮಾಣವು ಸರಾಸರಿಗಿಂತ 1-3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. 2026ನೇ ಸಾಲಿನ ಬೇಸಿಗೆಯಲ್ಲಿ ಬಿಸಿಲ ತೀವ್ರತೆಯು ಹೆಚ್ಚಾಗಿರುವ ಸಾಧ್ಯತೆ ಇದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಉಷ್ಣಾಂಶವು ಸರಾಸರಿಗಿಂತ 1ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿರಲಿದೆ ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ.

## ಕಾಡುಪ್ರಾಣಿಗಳ ಓಡಾಟದ ಬಗ್ಗೆ ಸ್ಥಳೀಯರಿಗೆ ತಕ್ಷಣ ಎಚ್ಚರಿಕೆ ನೀಡಿ

• ಉದಯವಾಹಿನಿ,ಬೆಂಗಳೂರು



ಚಿಕ್ಕಮಗಳೂರಿನ ಎಸ್ಟೇಟ್‌ವೊಂದರಲ್ಲಿ ಕಾಡಾನೆ ದಾಳಿಯಲ್ಲಿ 42 ವರ್ಷದ ಕೃಷಿ ಕೆಲಸ ಮಾಡುತ್ತಿದ್ದ ಬೋರಮ್ಮ ಸಾವನ್ನಪ್ಪಿದ್ದರು. ಈ ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಇದರ ಬೆನ್ನಲ್ಲೇ ಹಿರಿಯ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಚಿಕ್ಕಮಗಳೂರು ಜಿಲ್ಲೆಯ ಹುಣಸೇಹಳ್ಳಿ ಬಳಿಯ ಎಸ್ಟೇಟ್‌ನಲ್ಲಿ ಏಳು ದಿನಗಳ ಅವಧಿಯಲ್ಲಿ ಇಬ್ಬರು ಕೂಲಿ ಕೆಲಸಗಾರರು ಮೃತಪಟ್ಟಿದ್ದರು. ಅರಣ್ಯದಂಚಿನ ಪ್ರದೇಶಗಳಲ್ಲಿ ಕಾಡು ಪ್ರಾಣಿಗಳ ಓಡಾಟದ ಬಗ್ಗೆ ಮಾಹಿತಿಯನ್ನು ಕಮಾಂಡ್ ಸೆಂಟರ್‌ಗೆ ತಲುಪಿದ ತಕ್ಷಣ ತೋಟಗಾರಿಕಾ ಬೆಳೆಗಾರರ ಸಂಘಗಳು, ಕಾರ್ಮಿಕ ಸಂಘಗಳು ಮತ್ತು ಸ್ಥಳೀಯ ನಾಯಕರೊಂದಿಗೆ ಹಂಚಿಕೊಳ್ಳುವಂತೆ ಕರ್ನಾಟಕ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮಾನವ-ವನ್ಯಜೀವಿ ಸಂಘರ್ಷ ವಲಯಗಳಲ್ಲಿರುವ ಗ್ರಾಮಗಳಲ್ಲಿ ಸ್ಥಳೀಯ ನಾಯಕರು ಮತ್ತು ಭೂಮಾಲೀಕರಿಗೆ ಮಾಹಿತಿಯ ತ್ವರಿತ ಪ್ರಸರಣಕ್ಕೆ ಅನುಕೂಲವಾಗುವಂತೆ ವಾಟ್ಸಾಪ್ ಗುಂಪುಗಳನ್ನು ರಚಿಸುವಂತೆ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಾನವ ಜೀವ ಅಮೂಲ್ಯ ಎಂದು ಒತ್ತಿ ಹೇಳಿದ ಸಚಿವರು, ಪದೇ ಪದೇ ಸಂಭವಿಸುತ್ತಿರುವ ಸಾವುಗಳ ಬಗ್ಗೆ ದುಃಖ ವ್ಯಕ್ತಪಡಿಸಿದರು. ಇಂತಹ ಘಟನೆಗಳು ಮರುಕಳಿಸದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ದಿನದ 24 ಗಂಟೆಗಳ ಕಾಲ ಕಟ್ಟೆಚ್ಚರ ವಹಿಸುವಂತೆ ಕೇಳಿಕೊಂಡರು. ವನ್ಯಜೀವಿ ಸೆರೆಹಿಡಿಯುವ ಕಾರ್ಯಾಚರಣೆಯ ಸಮಯದಲ್ಲಿ ಸೆಕ್ಷನ್ 144ರ ಅಡಿಯಲ್ಲಿ ನಿಷೇಧಾಜ್ಞೆಗಳನ್ನು ಕಡ್ಡಾಯವಾಗಿ ಹೇರುವಂತೆ ನಿರ್ದೇಶಿಸಿದರು.

ಅಲ್ಲದೆ ಥರ್ಮಲ್ ಡ್ರೋನ್‌ಗಳಂತಹ ಸುಧಾರಿತ ಉಪಕರಣಗಳನ್ನು ಬಳಸುವಂತೆ ಒತ್ತಾಯಿಸಿದರು. ಚಿಕ್ಕಮಗಳೂರಿನ ಅರಣ್ಯ ಪ್ರದೇಶಗಳ ಹೊರಗೆ ಪ್ರಸ್ತುತ 35 ಆನೆಗಳು ಮೂರು ಗುಂಪುಗಳಾಗಿ ಓಡಾಡುತ್ತಿವೆ ಎಂದು ಮಾಹಿತಿ ಇದೆ.

ಬೇಸಿಗೆಯಲ್ಲಿ ಆನೆಗಳು ಕಾಡುಗಳಿಂದ ಹೊರಗೆ ಹೋಗುವುದು ಸಾಮಾನ್ಯವಾದರೂ,ಅಧಿಕಾರಿಗಳು ಮತ್ತು ಸಿಬ್ಬಂದಿ ಮಾನವ-ವನ್ಯಜೀವಿ ಸಂಘರ್ಷಗಳು ಸಂಭವಿಸದಂತೆ ನೋಡಿಕೊಳ್ಳಬೇಕು. ವನ್ಯಜೀವಿ-ಮಾನವ ಸಂಘರ್ಷದಿಂದ ಉಂಟಾಗುವ ಸಾವಿನ ಸಂಖ್ಯೆ ಪ್ರತಿ ವರ್ಷ ಕಡಿಮೆಯಾಗಬೇಕೇ ಹೊರತು ಹೆಚ್ಚಾಗಬಾರದು ಎಂದು ಸಚಿವರು ಹೇಳಿದರು.

## ಯಲಹಂಕದಲ್ಲಿ ಅಮೆಜಾನ್‌ನ ಏಷ್ಯಾದಲ್ಲೇ ಎರಡನೇ ಅತಿದೊಡ್ಡ ಕಾರ್ಪೊರೇಟ್ ಪ್ರಧಾನ ಕಚೇರಿ ಉದ್ಘಾಟನೆ

• ಉದಯವಾಹಿನಿ ,ಬೆಂಗಳೂರು


ಉದಯವಾಹಿನಿ ಚಿತ್ರ

ಅಮೆಜಾನ್ ಕಂಪನಿಯು ಇಲ್ಲಿನ ಯಲಹಂಕ ಸಮೀಪದ ವಿನಾಯಕ ನಗರದಲ್ಲಿ ನಿರ್ಮಿಸಿರುವ 11 ಲಕ್ಷ ಚದರ ಅಡಿ ವಿಸ್ತಾರದ ಸುಸಜ್ಜಿತ ಕಾರ್ಪೊರೇಟ್ ಪ್ರಧಾನ ಕಚೇರಿಯನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸಿದರು.

ಮಾತನಾಡಿದ ಅವರು, ಅಮೆಜಾನ್ ಕಂಪನಿಯ 10ನೇಯ ಕಾರ್ಪೊರೇಟ್ ಕಚೇರಿಯಾಗಿದೆ. ರಾಜ್ಯದೊಂದಿಗೆ ಎರಡು ದಶಕಗಳ ಬಾಂಧವ್ಯ ಹೊಂದಿರುವ ಕಂಪನಿಯು ಮುಂದಿನ ನಾಲ್ಕು ವರ್ಷಗಳಲ್ಲಿ ಭಾರತದಲ್ಲಿ 35 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ 15 ಮಿಲಿಯನ್ ಸಣ್ಣ ಉದ್ಯಮಗಳಿಗೆ ನೆರವು ಸಿಗಲಿದ್ದು, ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿವೆ.

ಇದರಲ್ಲಿ ರಾಜ್ಯಕ್ಕೆ ಗಮನಾರ್ಹ ಪಾಲು ಹರಿದು ಬರಲಿದೆ ಎಂದಿದ್ದಾರೆ. 3.80 ಲಕ್ಷ ರೂ.ಗಿಂತ ಹೆಚ್ಚು ತಲಾ ಆದಾಯ ಹೊಂದಿರುವ ಕರ್ನಾಟಕವು ದೇಶದಲ್ಲೇ ಅಗ್ರಸ್ಥಾನದಲ್ಲಿದೆ.

ಜೊತೆಗೆ, ದೇಶದ ಬೊಕ್ಕಸಕ್ಕೆ ವಾರ್ಷಿಕ 1.6 ಲಕ್ಷ ಕೋಟಿ ರೂ. ಜಿಎಸ್‌ಟಿ ಪಾವತಿ ಮೂಲಕ ದ್ವಿತೀಯ ಸ್ಥಾನದಲ್ಲಿದ್ದೇವೆ. ನಾವೀನ್ಯತಾ ಸೂಚ್ಯಂಕದಲ್ಲಿ ಬೆಂಗಳೂರು ಜಾಗತಿಕ ಸ್ತರದಲ್ಲಿ 21ನೇ ಸ್ಥಾನಕ್ಕೆ ಜಿಗಿದಿದೆ. ಟೆಕ್-ಸಿಟಿ ಸೂಚ್ಯಂಕದಲ್ಲಿ ಮೊದಲ 30 ಸ್ಥಾನಗಳಲ್ಲಿ ಕಾಣಿಸಿಕೊಂಡಿರುವ ದೇಶದ ಏಕೈಕ ನಗರ ಬೆಂಗಳೂರಾಗಿದೆ.

ಕಳೆದ ವರ್ಷ ಬೆಂಗಳೂರಿನಲ್ಲಿ 14.6 ಮಿಲಿಯನ್ ಚದರ ಅಡಿ ಜಾಗವನ್ನು ಕೈಗಾರಿಕಾ ವಹಿವಾಟು ಉದ್ದೇಶಕ್ಕೆ ಭೋಗ್ಯಕ್ಕೆ ನೀಡಿದ್ದು, ನಾವು ಪ್ರಥಮ ಸ್ಥಾನದಲ್ಲಿದ್ದೇವೆ ಎಂದು ಸಚಿವರು ವಿವರಿಸಿದ್ದಾರೆ. ದೇಶದಲ್ಲಿ ಒಟ್ಟು 900 ಜಿಸಿಸಿ ಕೇಂದ್ರಗಳಿದ್ದು, ಇವುಗಳ ಪೈಕಿ ಶೇ.35ರಷ್ಟು ಕರ್ನಾಟಕದಲ್ಲೇ ಇವೆ. ಇ-ಕಾಮರ್ಸ್ ವಹಿವಾಟಿಗೆ ಬೇಕಾದ ಮೂಲಸೌಕರ್ಯದಲ್ಲೂ ರಾಜ್ಯವು ಮೊದಲ ಸ್ಥಾನದಲ್ಲಿದೆ.
ನಮ್ಮಲ್ಲಿ 42.48 ಲಕ್ಷ ಟನ್ ದಾಸ್ತಾನು ಸಂಗ್ರಹಿಸುವಷ್ಟು ಉಗ್ರಾಣಗಳು ಮತ್ತು 233 ಶೀತಲಗೃಹಗಳಿವೆ.

## ಬಂಜಾರ ಸಮಾಜವನ್ನು ಕಾಂಗ್ರೆಸ್ ಟಾರ್ಗೆಟ್

• ಉದಯವಾಹಿನಿ ,ಬೆಂಗಳೂರು


ಉದಯವಾಹಿನಿ ಚಿತ್ರ

ಬಂಜಾರ ಸಮಾಜವನ್ನು ಕಾಂಗ್ರೆಸ್ ಈಗ ಟಾರ್ಗೆಟ್ ಮಾಡಿದೆ. ಬಂಜಾರ ಸಮಾಜ ಬಿಜೆಪಿ ಜೊತೆ ಗಟ್ಟಿಯಾಗಿ ನಿಂತಿರುವುದು ಕಾಂಗ್ರೆಸ್‌ಗೆ ಸಹಿಸಲು ಸಾಧ್ಯವಾಗುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಆರೋಪಿಸಿದ್ದಾರೆ. ವಿಧಾನಸೌಧದಲ್ಲಿ ಈ ಕುರಿತು ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಶಾಸಕ ಚಂದ್ರು ಲಮಾಣಿ ಬಂಧನ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಬಂಜಾರ ಸಮಾಜವನ್ನೇ ಟಾರ್ಗೆಟ್ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸಿದ್ದರಾಮಯ್ಯ ಅವರು ಸಿಎಂ ಆದ ಬಳಿಕ ಬಂಜಾರ ಸಮಾಜಕ್ಕೆ ಅನ್ಯಾಯವಾಗಿದೆ.

ಆ ಸಮುದಾಯವನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ದೂರಿದರು.

ಡಿಸಿಎಂ ಅವರು ಬಂಜಾರ ಕಾರ್ಯಕ್ರಮಕ್ಕೆ ಬಂದಾಗ ಸಹಜವಾಗಿ ಆ ಸಮಾಜದ ಯುವಕರು ಅವರು ಘೇರಾವ್ ಹಾಕಿ ಪ್ರತಿಭಟನೆ ಮಾಡಿದ್ರು. ಸಹಿಸದ ಡಿಸಿಎಂ ಓಡಿ ಹೋಗುವುದರ ಜೊತೆಗೆ ಘೋಷಣೆ ಕೂಗಿದ ಯುವಕರ ಮೇಲೆ DMS ಹಾಕಿದ್ದಾರೆ. ಹಾಗಾಗಿ ಆ ಸಮಾಜವನ್ನು ಕಾಂಗ್ರೆಸ್ ಈಗ ಟಾರ್ಗೆಟ್ ಮಾಡಿದೆ. ನಮ್ಮ ಶಾಸಕರಾದ ಚಂದ್ರು ಲಮಾಣಿ ಅವರು ಕೋರ್ಟ್‌ಲ್ಲಿ ವಿಚಾರಣೆ ಎದುರಿಸುತ್ತಾರೆ. ಈಗಾಗಲೇ ಅನೇಕ ಆಡಿಯೋ ಲೀಕ್ ಆಗಿದೆ. ಅದರ ಸತ್ಯಾಸತ್ಯತೆ ಹೊರಬರಬೇಕು ಎಂದು ಹೇಳಿದರು.

**ಚಂದ್ರು ಲಮಾಣಿಗೆ ನೋಟಿಸ್ ನೀಡಲು ನಿರ್ಧಾರ:** ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡಿರುವ ವಿಚಾರವಾಗಿ ವಿಧಾನಸೌಧದಲ್ಲಿ ವಿಜಯೇಂದ್ರ ಚರ್ಚೆ ನಡೆಸಿದರು. ಲಮಾಣಿಗೆ ನೋಟಿಸ್ ಕೊಡಲು ತೀರ್ಮಾನಿಸಿದ್ದು, ವಿವರಣೆ ಕೊಟ್ಟ ಬಳಿಕ ಮುಂದಿನ ಕ್ರಮದ ಬಗ್ಗೆ ತೀರ್ಮಾನಿಸಲಾಗುವುದು ಎಂದಿದ್ದಾರೆ. ಇದೇ ವೇಳೆ, ಸಿಎಂ, ಡಿಸಿಎಂ ಹಾಗು ಸಚಿವ ಪ್ರಿಯಾಂಕ್ ಖರ್ಗೆಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡೋ ಯೋಗ್ಯತೆ ಇದೆಯಾ?. ಸರ್ಕಾರ ಬಂದ ಕೂಡಲೇ ವಾಲ್ಮೀಕಿ ಹಗರಣ, ಮುಡಾ ಹಗರಣ ನಡೆದಿದೆ. ವಾಲ್ಮೀಕಿ ನಿಗಮದ ಹಣ ಚುನಾವಣೆಗೆ ಬಳಸಿಕೊಂಡಿಲ್ಲವಾ?. ಪ್ರಿಯಾಂಕ್ ಖರ್ಗೆ ನಮಗೆ ಭ್ರಷ್ಟಾಚಾರದ ಬಗ್ಗೆ ಹೇಳ್ತಾರೆ. ಇದು ಭೂತದ ಬಾಯಲ್ಲಿ ಭಗವದ್ಗೀತೆಯಂತೆ ಆಗಿದೆ. ನಾವು ಭ್ರಷ್ಟಾಚಾರಕ್ಕೆ ಜಾತಿ ಲೇಪನ ಹಾಕಲ್ಲ. ಸತ್ಯಾಸತ್ಯತೆ ಹೊರಗೆ ಬರಲಿ, ತನಿಖೆ ಆಗಲಿ ಎಂದರು. ಸಿದ್ದರಾಮಯ್ಯ ಅವರಿಗೆ ಬಿಜೆಪಿ ಮೇಲೆ ಸಿಟ್ಟು ಇಲ್ಲ. ಆದರೆ, ಅವರ ಕೋಪ ಅವರ ಪಕ್ಷದಲ್ಲಿ ಇರುವವರ ಮೇಲೆ ಇದೆ. ಕುರಿ ಕಾಯೋರು ಸಿಎಂ ಆಗಿದ್ದಾರೆ ಸಂತೋಷ. ಆದ್ರೆ ಈ ಬಜೆಟ್‌ನಲ್ಲಾದ್ರೂ ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿ ಅಂತ ನಾವು ಹಕ್ಕೊತ್ತಾಯ ಮಾಡ್ತಿದ್ದೇವೆ ಎಂದು ಹೇಳಿದರು.

## ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವನ್ನು ಜೀವಂತವಾಗಿರಿಸಲು ಪ್ರತಿಯೊಬ್ಬರೂ ಶ್ರಮಿಸಬೇಕು

• ಉದಯವಾಹಿನಿ, ಮಹದೇವಪುರ


ಉದಯವಾಹಿನಿ ಚಿತ್ರ

ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವನ್ನು ಜೀವಂತವಾಗಿರಿಸಲು ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ರಿಪಬ್ಲಿಕನ್ ಸೇನಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಆನಂದ್ ರಾಜ್ ಅಂಬೇಡ್ಕರ್ ಅವರು ಹೇಳಿದರು.

ಮಹದೇವಪುರ ಕ್ಷೇತ್ರದ ವೈಟ್ ಫಿಲ್ಡ್ ನ ವಿಜಯನಗರದಲ್ಲಿರುವ ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷ ವೈಟ್ ಫಿಲ್ಡ್ ಮುರುಗೇಶ್ ನೇತೃತ್ವದಲ್ಲಿ ನಡೆಯುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಉಚಿತ ಕ್ಯಾಂಟಿನ್ ಭೇಟಿ ನೀಡಿ ಮಾತನಾಡಿದರು.

ಬಡವರ ಹಸಿವು ನೀಗಿಸಲು ಅಂಬೇಡ್ಕರ್ ಹೆಸರಿನಲ್ಲಿ ಹಲವು ವರ್ಷಗಳಿಂದ ಉಚಿತ ಕ್ಯಾಂಟಿನ್ ನಡೆಸುವ ಮೂಲಕ ಮಹತ್ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ. ಈ ರೀತಿಯ ಕ್ಯಾಂಟಿನ್‌ಗಳು ಎಲ್ಲಾ ಕಡೆ ತೆರೆಯುವ ಮೂಲಕ ಬಡವರ ಹಸಿವು ನೀಗಿಸುವ ಕಾರ್ಯಕ್ಕೆ ಅವರ ಅನುಯಾಯಿಗಳು ಮುಂದಾಗಬೇಕು ಎಂದರು. ಕರ್ನಾಟಕ ರಾಜ್ಯದಲ್ಲಿ ದೇಶದ ಅತಿ ಎತ್ತರದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡಲು ಭೀಮ್ ಪ್ರಜಾ ಸಂಘವು ಹಲವಾರು ವರ್ಷಗಳಿಂದ ಸತತವಾಗಿ ಹೋರಾಟ ಮಾಡಿಕೊಂಡು ಬರುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪ್ರತಿಮೆ ನಿರ್ಮಾಣ ಮಾಡಲು ಗಮನ ಹರಿಸಬೇಕು ಎಂದು ನುಡಿದರು. ಭೀಮ್ ಪ್ರಜಾ ಸಂಘದ ರಾಜ್ಯಾಧ್ಯಕ್ಷ ವೈಟ್ ಫಿಲ್ಡ್ ಮುರುಗೇಶ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಆನಂದ್ ರಾಜ್ ಅಂಬೇಡ್ಕರ್ ಅವರು ನಾವು ನಡೆಸಿಕೊಂಡು ಬರುತ್ತಿರುವ ಉಚಿತ ಕ್ಯಾಂಟಿನ್ ಅನ್ನು ಸಾಮಾಜೀಕ ಜಾಲತಾಣದಲ್ಲಿ ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಇಲ್ಲಿಗೆ ಬಂದು ವೀಕ್ಷಣೆ ಮಾಡಿದ್ದು ಜೀವನ ಸಾರ್ಥಕವೆನಿಸಿದೆ.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಕ್ಯಾಂಟಿನ್ ನಡೆಸಲು ಸಹಕಾರ ನೀಡುತ್ತೇನೆ ಯಾವುದೇ ಕಾರಣಕ್ಕೆ ಮುಚ್ಚದೆ ಅಂಬೇಡ್ಕರ್ ಹೆಸರಿನಲ್ಲಿ ಸೇವಾ ಕಾರ್ಯ ನೀಡುವಂತೆ ಅಭಯ ನೀಡಿದ್ದಾರೆ ಎಂದರು. ಕರ್ನಾಟಕ ಸಾಮರಸ್ಯ ಸಮಿತಿ ರಾಜ್ಯಾಧ್ಯಕ್ಷ ಕನ್ನಲ್ಲಿ ಕೃಷ್ಣಪ್ಪ, ರಿಪಬ್ಲಿಕನ್ ಸೇನಾ ಪಕ್ಷದ ರಾಜ್ಯಾಧ್ಯಕ್ಷ ಪ್ರಜ್ವಲ್, ಜಬಿ ಹುಸೇನ್, ರಮೇಶ್, ರಾಜಣ್ಣ, ಬಿ.ಕೃಷ್ಣಪ್ಪ ಉಪಸ್ಥಿತರಿದ್ದರು.

## ಹಗದೂರು ಗ್ರಾಮದ ಪುರಾಣ ಪ್ರಸಿದ್ಧ ಶ್ರೀರಾಮ ದೇವರಿಗೆ 1 ಕೋಟಿ ರೂ. ಶ್ರೀರಾಮ ಬ್ರಹ್ಮರಥ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆರವರಿಂದ ಲೋಕಾರ್ಪಣೆ

• ಉದಯವಾಹಿನಿ,ಬೆಂಗಳೂರು


ಉದಯವಾಹಿನಿ ಚಿತ್ರ

ಹಗದೂರು ಗ್ರಾಮದ ಪುರಾಣ ಪ್ರಸಿದ್ದ ಶ್ರೀರಾಮ ದೇವರಿಗೆ 1ಕೋಟಿ ರೂಪಾಯಿ ವೆಚ್ಚದಲ್ಲಿ ಶ್ರೀರಾಮ ಬ್ರಹ್ಮರಥಕ್ಕೆ ಭೂಮಿ ಸ್ಪರ್ಶ ಪೂಜೆ ಕಾರ್ಯಕ್ರಮ ಮತ್ತು ರಥದ ಮನೆ ಹಾಗೂ ದಾನಿಗಳ ಸನ್ಮಾನ ಕಾರ್ಯಕ್ರಮ..

ಇಡಗುಂಜಿ ಗ್ರಾಮಕ್ಕೆ ಶ್ರೀರಾಮ ಬ್ರಹ್ಮರಥಕ್ಕೆ ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆರವರು ವಿಶೇಷ ಪೂಜೆ ಸಲ್ಲಿಸಿ, ಶುಭ ಕೋರಿದರು. ಹಗದೂರು ಶ್ರೀರಾಮ ಯುವಕ ರೈತ ಸಂಘದ ಅಧ್ಯಕ್ಷರಾದ ಹೆಚ್.ಕೆ. ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ಮೋಹನ್ ಬಾಬು, ಖಜಾಂಚಿ ಹೆಚ್. ಕೆ.ಮುನಿರಾಜು, ಉಪಾಧ್ಯಕ್ಷರಾದ ಹೆಚ್.ಎ.ಶ್ರೀನಿವಾಸ್, ಆಡಳಿತ ಮಂಡಳಿ ಸದಸ್ಯರುಗಳಾದ ಹೆಚ್.ಬಿ.ಹರೀಶ್, ಹೆಚ್. ಎಸ್.ಮಂಜುನಾಥ್, ಜೆ.ರಘುರವರು ಭಾಗವಹಿಸಿದ್ದರು.

ಇಡಗುಂಜಿಯಲ್ಲಿ ವಿಶೇಷಪೂಜೆ ಸಲ್ಲಿಸಿ ಅಲ್ಲಿಂದ ಶ್ರೀರಾಮ ಬ್ರಹ್ಮರಥವನ್ನು ಹಗದೂರು ಗ್ರಾಮಕ್ಕೆ ತರಲಾಯಿತು.

ಗಣಪತಿ ಪೂಜೆ ನೂತನ ರಥದ ಸ್ಥಳಗಳಿಗೆ ಫಲತಾಂಬೂಲ ಸಮರ್ಪಣೆ ಹಾಗೂ ಶುದ್ದಿ ಪುಣ್ಯಾಹ, ಕೃಷ್ಣಚರಣೆ, ಯಜ್ಞ ಗೃರ್ಣನೆ ಮಂಡಲ ದರ್ಶನ, ಕಳಶಸ್ಥಾಪನೆ, ರಾಕ್ಷೆಪ್ಪ ಹೋಮ. ಅಗೋರಾಷ್ಟ್ರ ಹೋಮ, ಇಂದ್ರಾದಿ ದಿಕ್ಪಾಲಕ ಬಲಿ, ಬೆಳಗ್ಗೆ ಬ್ರಾಹ್ಮ ಮುಹೂರ್ತದಲ್ಲಿ ದೂಪತಿ ಪೂಜೆ, ಶುದ್ದಿ ಪುಣ್ಯಾಹ ರಥಕ್ಕೆ ಶಿಕ್ಷೆಯಿಂದ ಶೋಡೋಪಚಾರ ಪೂಜೆ ಮಾಡಿ ರಥ ಪರಿಗ್ರಹ ರಥ

ಭೂ ಸ್ಪರ್ಶ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಕಾರ್ಯಕ್ರಮ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆರವರು ಮಾತನಾಡಿ ಮನುಷ್ಯ ಜೀವನದಲ್ಲಿ ಯಶಸ್ವಿಯಾಗಬೇಕಾದರೆ ದೇವರ, ತಂದೆ, ತಾಯಿ ಆಶೀರ್ವಾದವಿರಬೇಕು. ದೇವರ ಸೇವೆ ಮಾಡುವ ಸೌಭಾಗ್ಯ ಎಲ್ಲರಿಗೂ ಸಿಗುವುದಿಲ್ಲ. ಹಗದೂರು ಗ್ರಾಮದ ಜನರು ಶ್ರೀ ರಾಮ ಮೇಲಿನ ಪ್ರೀತಿ, ಭಕ್ತಿ ನಂಬಿಕೆಯಿಂದ ಶ್ರದ್ದೆಯಿಂದ ರಥ ಮಾಡಿದ್ದಾರೆ.

ಹಗದೂರು ಗ್ರಾಮದ ಜನರಿಗೆ ಒಳ್ಳೆಯದಾಗಲಿ ಶ್ರೀರಾಮ ಕೃಪೆ, ಆಶೀರ್ವಾದ ಎಲ್ಲರಿಗೂ ಲಭಸಲಿ ಎಂದು ಶ್ರೀ ಮಂಜುನಾಥನಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಹಗದೂರು ಗ್ರಾಮದ ಶ್ರೀರಾಮ, ಹೆಚ್.ಎ.ಮುನಿಯಪ್ಪ, ಎ.ಶ್ರೀನಿವಾಸ್, ಹೆಚ್.ಎನ್.ರವಿ, ಹೆಚ್.ಎಸ್.ಉಮೇಶ್, ತಿಮ್ಮರಾಯಪ್ಪ, ಹೆಚ್.ಎನ್.ಜೀವಂತ್, ಪಿ.ಚಂದ್ರಪ್ಪ, ಅಶೋಕ್ ರೆಡ್ಡಿ, ರಾಮಕೃಷ್ಣಪ್ಪ, ಹರೀಶ್ ಹೆಚ್.ಎಂ, ನರೇಂದ್ರಬಾಬು, ಹೆಚ್. ಎಸ್.ಮುನಿರಾಜು, ಸೂರಿ, ಮಂಜುನಾಥ್, ತೋಟಪ್ಪ ಹಾಗೂ ಗ್ರಾಮಸ್ಥರುಗಳು ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.

# ಬೇರೆ ಲೀಡರ್ ರೀತಿ ಡಿಕೆಶಿ ಬಿಜೆಪಿ ಜೊತೆ ರಾಜಿ ಮಾಡಿಕೊಂಡಿದ್ರೆ ಇಷ್ಟೊತ್ತಿಗೆ ಎಲ್ಲಿರುತ್ತಿದ್ದರೋ ಗೊತ್ತಿಲ್ಲ : ಶಾಸಕ ಹೆಚ್ ಸಿ ಬಾಲಕೃಷ್ಣ

• ಉದಯವಾಹಿನಿ, ರಾಮನಗರ

ಸದ್ಯಕ್ಕೆ ಡಿಸಿಎಂ ಡಿ. ಕೆ. ಶಿವಕುಮಾರ್ ಸಿಎಂ ಆಗಬೇಕೆಂಬ ಕೂಗು ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಕಾಂಗ್ರೆಸ್ ಪಕ್ಷಕೋಸ್ಕರ ತಮ್ಮ ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಪಕ್ಷಕೋಸ್ಕರ ಜೈಲಿಗೆ ಹೋಗಿದ್ದಾರೆ. ಬೇರೆ ಲೀಡರ್‌ಗಳ ರೀತಿ ಬಿಜೆಪಿ ಜೊತೆ ರಾಜಿ ಮಾಡಿಕೊಂಡಿದ್ರೆ ಇಷ್ಟೊತ್ತಿಗೆ ಎಲ್ಲಿರುತ್ತಿದ್ದರೋ ಗೊತ್ತಿಲ್ಲ ಎಂದು ಮಾಗಡಿ ಶಾಸಕ ಹೆಚ್. ಸಿ. ಬಾಲಕೃಷ್ಣ ಕಾಂಗ್ರೆಸ್ ಹೈಕಮಾಂಡ್ ವಿರುದ್ಧವೇ ಟಾಂಗ್ ಕೊಟ್ಟಿದ್ದಾರೆ.


ಉದಯವಾಹಿನಿ ಚಿತ್ರ

ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿಯಲ್ಲಿ ಮಾತನಾಡಿ, ನಾನು ಹುಟ್ಟಿರುವುದು ಕಾಂಗ್ರೆಸ್‌ನಲ್ಲಿಯೇ, ಬೆಳೆಯುತ್ತಿರುವುದೂ ಕಾಂಗ್ರೆಸ್‌ನಲ್ಲಿಯೇ ಎನ್ನುತ್ತಾರೆ. ಅವರು ಒಮ್ಮೆ 1994ರಲ್ಲಿ ಇಂಡಿಪೆಂಡೆಂಟ್ ಆಗಿ ಗೆದ್ದರು. ಆಗ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂತು. ಆಗ ಶಿವರಾಮೇಗೌಡ ಅವರು ಗೆದ್ದಿದ್ದರು. ಅವರೆಲ್ಲ ಹೋಗಿ ದಳ ಸೇರಿಕೊಂಡಿದ್ದರು.

ಆದರೆ ಇವರು ಯಾವುದೇ ಕಾರಣಕ್ಕೂ ಜನತಾದಳ ಸೇರಿಕೊಳ್ಳಲಿಲ್ಲ.

ಅವರನ್ನು ಗುಜರಾತ್ ರಾಜ್ಯಸಭಾ ಚುನಾವಣೆ ಸಮಯದಲ್ಲಿ ಭಾಗಿಯಾದರು ಎಂದು ಜೈಲಿಗೆ ಕಳುಹಿಸಿದರು. ಇಷ್ಟೆಲ್ಲ ಆದ್ರೂ ಯಾವುದಕ್ಕೂ ಜಗ್ಗದೆ ಕಾಂಗ್ರೆಸ್‌ನಲ್ಲೇ ಇದ್ದಾರೆ. ಹಾಗಾಗಿ, ನಮ್ಮ ನಾಯಕರಿಗೂ ಅವಕಾಶ ಕೊಡಿ ಎಂದು ನಾವೆಲ್ಲರೂ ಹೈಕಮಾಂಡ್‌ಗೆ ಮನವಿ ಮಾಡುತ್ತೇವೆ. ಡಿಕೆಶಿ ಸಿಎಂ ಆದ್ರೆ, ನಮ್ಮ ಜಿಲ್ಲೆಯಲ್ಲಿ ಇನ್ನೂ ಅಭಿವೃದ್ಧಿ ಕೆಲಸಗಳು ಆಗುತ್ತವೆ ಎಂಬುದು ನಮ್ಮ ಸ್ವಾರ್ಥ ಎಂದರು.

ಡಾ. ಜಿ. ಪರಮೇಶ್ವರ್ ಅವರು ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿರುವ ವಿಚಾರವಾಗಿ ಮಾತನಾಡಿದ ಬಾಲಕೃಷ್ಣ, ಯಾವಾಗ ಭೇಟಿಯಾಗಿದ್ದಾರೆ ಹಾಗೂ ಏಕೆ ಭೇಟಿಯಾಗಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಎಲ್ಲೋ ಸಿಕ್ಕಿದಾಗ ಮಾತನಾಡೋದು ಸಹಜ. ಮನೆಗೆ ಹೋಗಿ ಭೇಟಿ ಮಾಡಿದ್ರೆ ಅದಕ್ಕೆ ಒಂದು ಅರ್ಥ ಇದೆ. ಕಚೇರಿಯಲ್ಲಿ, ರೋಡ್‌ನಲ್ಲಿ, ಮದುವೆಲಿ ಸಿಕ್ಕಿದಾಗ ಮಾತಾಡಿದ್ರೆ ಅದಕ್ಕೆ ವಿಶೇಷವಾದ ಅರ್ಥ ಕಲ್ಪಿಸುವ ಅವಶ್ಯಕತೆ ಇಲ್ಲ ಎಂದು ಹೇಳಿದರು.

ಅವರೇ ಮುಂದುವರೆಯುತ್ತಾರೆ – ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಮುಂದುವರೆಯುತ್ತಾರೆ. ಈಗ ಇದ್ದವರೇ ಮುಂದುವರೆಯುತ್ತಾರೆ ಎಂಬ ಲೆಕ್ಕಾಚಾರ ಇದೆ. ನೋಡಿ ಅರ್ಧ ಗಿರ್ಧಾ ಅಂತ ಹೇಳಿಲ್ಲಾ. ಈಗ ಅವರು ಇದ್ದಾರೆ. ಅವರೇ ಮುಂದುವರೆಯುತ್ತಾರೆ ಎಂಬುದು ಅಷ್ಟೇ. ಇದಕ್ಕೂ ಹೆಚ್ಚಿನದು ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಅವರು ನಿನ್ನೆ ಹೇಳಿದ್ದರು. ಇದೇ ವೇಳೆ ರಾಜಕೀಯ ಬೆಳವಣಿಗೆಗಳ ಕುರಿತು ಮಾತನಾಡಿದ್ದ ಸಚಿವರು, ತಿಂಗಳಲ್ಲಿ ಎರಡು–ಮೂರು ಬಾರಿ ದೆಹಲಿಗೆ ಹೋಗುತ್ತೇವೆ. ಅಲ್ಲಿ ಇಲಾಖೆ ಕಾರ್ಯಕ್ರಮಗಳ ಜೊತೆಗೆ ಪಕ್ಷದ ಹೈಕಮಾಂಡ್‌ರನ್ನು ಭೇಟಿ ಮಾಡುತ್ತೇವೆ. ಪಕ್ಷದ ಬೆಳವಣಿಗೆ ಮತ್ತು ರಾಜ್ಯದಲ್ಲಿ ಉಂಟಾದ ರಾಜಕೀಯ ಗೊಂದಲ ಕುರಿತು ಚರ್ಚೆ ಮಾಡಿದ್ದೇವೆ.

ಈ ಬಗ್ಗೆ ಶೀಘ್ರದಲ್ಲಿ ನಿರ್ಣಯ ಕೈಗೊಳ್ಳುತ್ತೇವೆ ಅಂತಾ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ' ಎಂಬುದನ್ನು ಪುನರುಚ್ಚರಿಸಿದ್ದರು.

---

ಮನರೇಗಾ ಕಾಯ್ದೆಗೆ ಗ್ರಾಮೀಣಾಭಿವೃದ್ಧಿಯ ಕನಸು ಕಂಡಿದ್ದ ಮಹಾತ್ಮ ಗಾಂಧಿಯವರ ಹೆಸರನ್ನು ಇಡಲಾಗಿತ್ತು. ಅವರ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಮನರೇಗಾ ಶಕ್ತಿ ತುಂಬಿತ್ತು. 100 ದಿನಗಳ ಉದ್ಯೋಗದ ಖಾತ್ರಿ ನೀಡುತ್ತಿದ್ದ ಮನರೇಗಾ ಕಾಯ್ದೆಯಡಿ, ಕೂಲಿಕಾರರು ತಮ್ಮ ಸ್ಥಳೀಯ ಮಟ್ಟದಲ್ಲಿಯೇ ಕೆಲಸ ಮಾಡಬಹುದಿತ್ತು. ಗ್ರಾಮ ಪಂಚಾಯಿತಿ ಮತ್ತು ಗ್ರಾಮಸಭೆಗಳು ನಿರ್ಧರಿಸುವ ಅಧಿಕಾರವಿತ್ತು. ಆದರೀಗ ಈ ನಿರ್ಧಾರವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಲಿದೆ. ಕೇಂದ್ರದ ಅನುದಾನ , ಅನುಮತಿ ಇಲ್ಲದೇ ಇಲ್ಲಿನ ಗ್ರಾಮ ಪಂಚಾಯಿತಿಯಲ್ಲಿ ಕೆಲಸವಾಗಲು ಸಾಧ್ಯ. ಆದ್ದರಿಂದ ಮನರೇಗಾವನ್ನು ಮುಂದುವರಿಸಬೇಕೆಂಬುದು ಕಾಂಗ್ರೆಸ್ ಸರ್ಕಾರದ ಒತ್ತಾಯವಾಗಿದೆ. ಮನರೇಗಾದಲ್ಲಿ 100 ದಿನ ಭತ್ಯೆಯನ್ನು ತಪ್ಪದೇ ಕೊಡಲಾಗುತ್ತಿತ್ತು. ಹೊಸ ಕಾಯ್ದೆಯಂತೆ ಕೇಂದ್ರ 60% ಅನುದಾನ ಮತ್ತು ರಾಜ್ಯಗಳು 40% ಅನುದಾನ ಕೊಡಬೇಕಾಗಿದೆ. ರಾಜ್ಯದ ಹಿತವನ್ನು ಕಾಪಾಡುವಲ್ಲಿ ಕೇಂದ್ರ ಸೋತಿದೆ. ಅದ್ದರಿಂದ ವಿಬಿ ಜಿ ರಾಮ್ ಜಿ ರದ್ದುಪಡಿಸಿ,ಮನರೇಗಾವನ್ನು ಮರುಸ್ಥಾಪಿಸಲು ದೇಶಾದ್ಯಂತ ಕಾಂಗ್ರೆಸ್ ಪಕ್ಷ ಹೋರಾಟ ಮಾಡುತ್ತಿದೆ ಎಂದರು.

## ಗ್ರಾಮಸ್ವರಾಜ್ಯ ಪರಿಕಲ್ಪನೆಗೆ ಶಕ್ತಿ ತುಂಬಿದ್ದ ಮನರೇಗಾ

# ಮನರೇಗಾ ಮರುಸ್ಥಾಪಿಸುವ ಕಾಂಗ್ರೆಸ್ ಹೋರಾಟಕ್ಕೆ ಬೆಂಬಲಿಸಿ ಜನರಿಗೆ ಸಿಎಂ ಕರೆ

## ಬೇಡಿಕೆ ಈಡೇರುವವರೆಗೂ ಹೋರಾಟ



ಉದಯವಾಹಿನಿ ಚಿತ್ರ



• ಉದಯವಾಹಿನಿ,ಚಿಕ್ಕಬಳ್ಳಾಪುರ

ಗ್ರಾಮೀಣ ಜನರ ಉದ್ಯೋಗದ ಹಕ್ಕನ್ನು ಕಸಿಯುತ್ತಿರುವ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸುವವರೆಗೆ ದೇಶಾದ್ಯಂತ ಕಾಂಗ್ರೆಸ್ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಬೇಕೆಂದು ರಾಜ್ಯದ ಜನರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವ್ ಆಂದೋಲನದಲ್ಲಿ ಭಾಗವಹಿಸಿ ಸಿಎಂ ಮಾತನಾಡಿದರು. ದೇಶಾದ್ಯಂತ ಮನರೇಗಾವನ್ನು ಉಳಿಸಿ ಅಭಿಯಾನ ಪ್ರಾರಂಭಿಸಲಾಗಿದೆ. ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮನರೇಗಾವನ್ನು ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಜಾರಿ ಮಾಡಿದೆ. ಮನರೇಗಾದ ರದ್ದು ಅಗತ್ಯವಿರಲಿಲ್ಲ.

ಕೂಲಿಕಾರರು, ಆದಿವಾಸಿಗಳು, ಸಣ್ಣರೈತರಿಗೆ, ಮಹಿಳೆಯರಿಗೆ ಉದ್ಯೋಗದ ಅನುಕೂಲ ಕಲ್ಪಿಸುವ ದಿಸೆಯಲ್ಲಿ 2005 ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ನಾಯಕಿ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಈ ಕಾಯ್ದೆ ಜಾರಿಯಾಯಿತು. ಇದೇ ಕಾಯ್ದೆಯಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿದಂತೆ ಹಲವು ಜನಪರ ಕಾಯ್ದೆಗಳನ್ನು ಜಾರಿಗೆ ತಂದಿದ್ದರು. ಆದರೆ ಈ ಎಲ್ಲಾ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ಮೋದಿಯವರ ನೇತೃತ್ವದ ಸರ್ಕಾರ ಮಾಡುತ್ತಿದೆ ಎಂದರು.

ಸದನದಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ಮಾಡಿದ ಕೇಂದ್ರ ಸರ್ಕಾರ, ನಂತರ ಹೊಸ ಕಾಯ್ದೆಯನ್ನು ಜಾರಿಗೆ ತಂದರು. ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಜೀವಿಕ ಮಿಷನ್ ಗ್ರಾಮೀಣ ಕಾಯ್ದೆ, 12.16 ಕೋಟಿ ಜನರು ಕೆಲಸ ಪಡೆಯುತ್ತಿದ್ದರು.

---

# ಕಾಮಸಮುದ್ರ ರೈಲ್ವೆಗೇಟ್‌ನಿಂದ 50ಕ್ಕೂ ಹೆಚ್ಚು ಹಳ್ಳಿಗರಿಗೆ ತೊಂದರೆ!

• ಉದಯವಾಹಿನಿ,ಬಂಗಾರಪೇಟೆ

ಬೆಂಗಳೂರು–ಚೆನ್ನೈ ರೈಲು ಮಾರ್ಗದಲ್ಲಿ ಪ್ರತಿನಿತ್ಯ ನೂರಾರು ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತವೆ. ಆದರೆ, ತಾಲ್ಲೂಕಿನ ಕಾಮಸಮುದ್ರ ರೈಲ್ವೆ ನಿಲ್ದಾಣದ ಬಳಿ ಹೆಚ್ಚು ರೈಲು ಸಂಚಾರವೇ ಸುತ್ತಮುತ್ತಲಿನ ಜನತೆಗೆ ಸಂಕಷ್ಟವಾಗಿದೆ.

ದಿನದ 24 ಗಂಟೆಗಳಲ್ಲಿ ಸುಮಾರು 100ಕ್ಕೂ ಹೆಚ್ಚು ರೈಲುಗಳು ಕಾಮುದ್ರ ರೈಲ್ವೆ ಗೇಟ್ ಮೂಲಕ ಹಾದು ಹೋಗುತ್ತವೆ. ಇದರಿಂದ ಪ್ರತಿ 15–20 ನಿಮಿಷಕ್ಕೊಮ್ಮೆ ರೈಲ್ವೆಗೇಟ್ ಮುಚ್ಚಲಾಗುತ್ತದೆ. ಇದರಿಂದ ಸುತ್ತಮುತ್ತಲಿನ 50ಕ್ಕೂ ಹೆಚ್ಚು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯೂ ಇದೇ ಆಗಿರುವುದರಿಂದ ಜನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಕಾಮ ಸಮುದ್ರ ಭಾಗದ ಹಳ್ಳಿಗಳ ಜನರಿಗೆ ಆರೋಗ್ಯ ಸೇವೆ ದೂರದ ಬೆಟ್ಟ. ಸ್ಥಳೀಯವಾಗಿ ಇಂದಿಗೂ ಸುಸಜ್ಜಿತ ಆಸ್ಪತ್ರೆಗಳಿಲ್ಲ. ಯಾವುದೇ ತುರ್ತು ಸಂದರ್ಭ ಎದುರಾದರೂ ಬಂಗಾರಪೇಟೆ ಅಥವಾ ಕೆಜಿಎಫ್ ಆಸ್ಪತ್ರೆಗಳತ್ತ ಹೋಗಬೇಕು. ಆದರೆ, ಈ ಹಾದಿಯಲ್ಲಿರುವ ರೈಲ್ವೆ ಗೇಟ್ ಜನರಿಗೆ ಸಂಕಷ್ಟವೊಡ್ಡುವಂತಿದೆ.

ಅಪಘಾತ ಅಥವಾ ಹೆರಿಗೆ ನೋವಿನಿಂದ ಬಳಲುತ್ತಿದ್ದವರನ್ನು ಕರೆದೊಯ್ಯುವಾಗ ರೈಲ್ವೆಗೇಟ್ ಬಿದ್ದರೆ ಎಲ್ಲವೂ ಸ್ಥಗಿತಗೊಂಡಂತೆ. ಆಂಬುಲೆನ್ಸ್ ಸೈರನ್ ಶಬ್ದ ಎಷ್ಟೇ ಜೋರಾಗಿದ್ದರೂ, ಹಳಿಯ ಮೇಲೆ ವೇಗವಾಗಿ ಬರುವ ರೈಲುಗಳ ಮುಂದೆ ಅಂಬುಲೆನ್ಸ್ ಅಸಹಾಯಕವಾಗಿ ನಿಲ್ಲಲೇಬೇಕು. ಜೊತೆಗೆ ಶಾಲೆ–ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ, ನೌಕರರಿಗೆ, ಮಾರುಕಟ್ಟೆಗೆ ತರಕಾರಿ ಸಾಗಿಸುವ ರೈತರಿಗೆ ಎಲ್ಲರಿಗೂ ತೊಂದರೆಯಾಗುತ್ತದೆ. ಹಾಗಾಗಿ ಕಾಮಸಮುದ್ರ ರೈಲ್ವೆ ಮೇಲ್ಸೇತುವೆ ನಿರ್ಮಿಸಿ ಎಂದು ಮೂರು ದಶಕಗಳಿಂದ ಸರ್ಕಾರದ ಮುಂದೆ ಬೇಡಿಕೆ ಇಟ್ಟರೂ ಯಾವುದೇ ಪ್ರಯೋಜನವಾಗಿಲ್ಲ. ಸರ್ಕಾರ, ಜನಪ್ರತಿನಿಧಿಗಳು ಬದಲಾದರೂ ಕಾಮಸಮುದ್ರದ ಜನರ ಹಣೆಬರಹ ಮಾತ್ರ ಬದಲಾಗಿಲ್ಲ ಎಂಬುದು ಸಾರ್ವಜನಿಕರ ಅಳಲಾಗಿದೆ. ಚುನಾವಣೆ ಬಂದಾಗ ಜನಪ್ರತಿನಿಧಿಗಳು ಬಂದು ಭರವಸೆ ನೀಡುತ್ತಾರೆ. ಆದರೆ


ಉದಯವಾಹಿನಿ ಚಿತ್ರ

ಚುನಾವಣೆ ಮುಗಿದ ಮೇಲೆ ರೈಲ್ವೆಗೇಟ್ ಸಮಸ್ಯೆ ಕಾಣುವುದೇ ಇಲ್ಲ. ಯಾವುದೇ ತುರ್ತು ಸಂದರ್ಭ ಎದುರಾದರೂ ಬಂಗಾರಪೇಟೆ ಅಥವಾ ಕೆಜಿಎಫ್ ಆಸ್ಪತ್ರೆಗಳತ್ತ ಹೋಗಬೇಕು. ರೈಲ್ವೆ ಇಲಾಖೆಯು ಈ ಮಾರ್ಗವನ್ನು ಹೈ – ಸ್ಪೀಡ್ ಮಾಡಲು ಹೊರಟಿದೆ. ಆದರೆ ಜನರ ಸಂಕಷ್ಟಕ್ಕೆ ಮಾತ್ರ ಸ್ಪಂದಿಸುತ್ತಿಲ್ಲ.

---

## ಮಿನಿ ನ್ಯೂಸ್

# ಯುವಕರು ಒಳ್ಳೆಯ ಉದ್ಯೋಗದ ಜೊತೆ ವ್ಯಕ್ತಿತ್ವ ರೂಢಿಸಿಕೊಳ್ಳಿ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಗುಂಡ್ಲುಪೇಟೆ

ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಯುವಕರು ಒಳ್ಳೆಯ ಉದ್ಯೋಗದ ಜೊತೆಗೆ ಉತ್ತಮ ವ್ಯಕ್ತಿತ್ವವನ್ನ ರೂಢಿಸಿಕೊಳ್ಳಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಮದನ್ ಕುಮಾರ್ ಸಲಹೆ ನೀಡಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಕುಂದುಕೊರತೆ ನಿವಾರಣೆ ಮತ್ತು ದೌರ್ಜನ್ಯ ತಡೆ ಸಮಿತಿ , ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ ಆಯೋಜಿಸಿದ್ದ ವರದಕ್ಷಿಣೆ ಕಾನೂನು ,ಮಹಿಳಾ ಹಕ್ಕುಗಳು ವಿಚಾರದ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಪೊಲೀಸ್ ಇಲಾಖೆ ಅಪರಾಧ ವಿಭಾಗದ ನಾಗರಾಜು ವರದಕ್ಷಿಣೆ ಹಾಗೂ ಯುವಜನತೆಯ ಜವಾಬ್ದಾರಿ ಕುರಿತು ಅರಿವು ಮೂಡಿಸಿದರು.

ಈ ವೇಳೆ ಮಹಿಳಾ ಸಮಿತಿ ಸಂಚಾಲಕಿ ಜ್ಯೋತಿ, ಐಕ್ಯೂಎಸಿ ಸಂಚಾಲಕ ವಿಜಯ ಕುಮಾರ್, ಗಣಿತಶಾಸ್ತ್ರ ವಿಭಾಗ ಮುಖ್ಯಸ್ಥೆ ಪವಿತ್ರಾ, ಇತಿಹಾಸ ವಿಭಾಗ ಕವಿತಾ, ಗ್ರಂಥಪಾಲಕ ಶ್ರೀನಿವಾಸ್ ನಾಯಕ್, ಮಂಜುನಾಥ್, ದೈಹಿಕ ಶಿಕ್ಷಣ ನಿರ್ದೇಶಕ ಪುಟ್ಟರಾಜು, ವಿದ್ಯಾರ್ಥಿಗಳು ಹಾಜರಿದ್ದರು.

# ಶುದ್ಧಿ ಚಾರಿಟಬಲ್, ಎಜುಕೇಷನ್ ಟ್ರಸ್ಟ್ ವತಿಯಿಂದ 35 ಮಂದಿಗೆ ವಿದ್ಯಾರ್ಥಿ ವೇತನ

• ಉದಯವಾಹಿನಿ,ತುಮಕೂರು

ಕಷ್ಟದಲ್ಲಿರುವ ಮಕ್ಕಳನ್ನು ಗುರುತಿಸಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸದುಪಯೋಗ ಪಡೆದುಕೊಳ್ಳಬೇಕು ಎಂದು ಶುದ್ಧಿ ಚಾರಿಟಬಲ್ ಮತ್ತು ಎಜುಕೇಷನ್ ಟ್ರಸ್ಟ್ ಸಿಇಒ, ಕಾರ್ಯದರ್ಶಿ ಪ್ರೊ.ಕೆ.ಚಂದ್ರಣ್ಣ ಹೇಳಿದರು.

ನಗರದ ಕೃಷಿಕ್ ಫೌಂಡೇಷನ್ ಸಭಾಂಗಣದಲ್ಲಿ ವೂಡೇ ಪ್ರತಿಷ್ಠಾನ, ಶುದ್ಧಿ ಚಾರಿಟಬಲ್ ಮತ್ತು ಎಜುಕೇಷನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಗ್ರಾಮೀಣ ಭಾಗದ 35 ಹೆಣ್ಣು ಮಕ್ಕಳಿಗೆ ತಲಾ 10 ಸಾವಿರ ನೀಡಲಾಗುತ್ತಿದೆ. 61 ಅರ್ಜಿಗಳು ಸಲ್ಲಿಕೆಯಾಗಿದ್ದವು. ತೀರ ಹಣಕಾಸಿನ ನೆರವು ಅಗತ್ಯ ಇರುವ ಮಕ್ಕಳನ್ನು ಗುರುತಿಸಲಾಗಿದೆ. ಉತ್ತಮ ಫಲಿತಾಂಶ ಪಡೆಯುವ ಮಕ್ಕಳಿಗೆ ಮುಂದಿನ ವರ್ಷವೂ ವಿದ್ಯಾರ್ಥಿ ವೇತನ ನೀಡಲಾಗುವುದು ಎಂದರು.

ವೂಡೇ ಪ್ರತಿಷ್ಠಾನದ ಅನುಪಮಾ, ಪ್ರತಿಷ್ಠಾನದಿಂದ ಬಡ, ನಿರ್ಗತಿಕ, ಏಕ ಪೋಷಕ ಹಾಗೂ ಅಂಗವಿಕಲ ಹೆಣ್ಣು ಮಕ್ಕಳಿಗೆ ಸಹಾಯಧನ ವಿತರಿಸಲಾಗುತ್ತಿದೆ. ಮಕ್ಕಳು ಒಳ್ಳೆಯ ಶಿಕ್ಷಣ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಸಾರ್ಥಕ ಜೀವನ ನಡೆಸಬೇಕು.

# ಫೆ. 26ರಿಂದ ಕಾರೇಹಳ್ಳಿ ದನಗಳ ಜಾತ್ರೆ

• ಉದಯವಾಹಿನಿ, ಹುಳಿಯಾರು

ಹೋಬಳಿಯ ಕಾರೇಹಳ್ಳಿ ರಂಗನಾಥಸ್ವಾಮಿಯ ಜಾತ್ರೆ ಮತ್ತು ದನಗಳ ಜಾತ್ರೆ, ಫೆ. 26ರಿಂದ ಮಾರ್ಚ್ 5ರ ವರೆಗೆ ನಡೆಯಲಿದೆ. 10 ದಿನ ದನಗಳ ಜಾತ್ರೆ ನಡೆಯುತ್ತದೆ. ಕೆರೆಯ ಅಂಗಳ ಅಂಚಿನಲ್ಲಿ ನೂರಾರು ಏಕರೆ ವಿಶಾಲ ಪ್ರದೇಶ ದನಗಳ ಜಾತ್ರೆಗೆ ಹೇಳಿ ಮಾಡಿಸಿದಂತಿದೆ.

ಉತ್ತಮ ನೆರಳು ಹಾಗೂ ನೀರಿಗೆ ಅವಕಾಶವಿರುವುದು ಜಾತ್ರೆಗೆ ಬರುವ ರಾಸುಗಳಿಗೆ ಸಹಕಾರಿಯಾಗಿದೆ.

ರಂಗನಾಥಸ್ವಾಮಿಯ ಜಾತ್ರೆ, ಜಾತ್ರೆಯಲ್ಲಿ ವಿಶೇಷ ರಾಸುಗಳು ಸೇರಲಿದ್ದು ರಾಜ್ಯದ ವಿವಿಧ ಭಾಗಗಳಿಂದ ರೈತರು ಬರಲಿದ್ದಾರೆ. ಪ್ರತಿದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

---

# ಸ್ವಚ್ಛತಾ ರಾಯಭಾರಿಗಳಾದ ವಸಿಷ್ಠ ಸಿಂಹ, ಹರಿಪ್ರಿಯ, ಅರುಣ್ ಯೋಗಿರಾಜ್ ಸೇರಿ ಆರು ಗಣ್ಯರು

• ಉದಯವಾಹಿನಿ, ಮೈಸೂರು

ಐತಿಹಾಸಿಕ ಪರಂಪರೆ ,ಸಾಂಸ್ಕೃತಿಕ ವೈಭವದಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮೈಸೂರು ನಗರದ ಸ್ವಚ್ಛತೆಯನ್ನು ಉತ್ತಮಪಡಿಸುವ ಉದ್ದೇಶದಿಂದ ಮೈಸೂರು ಮಹಾನಗರ ಪಾಲಿಕೆಯು ಆರು ಮಂದಿ ಸಾಧಕರನ್ನು ಸ್ವಚ್ಛತಾ ಬ್ರ್ಯಾಂಡ್ ಅಂಬಾಸಿಡರ್ ಗಳನ್ನಾಗಿ ನೇಮಕ ಮಾಡಿದೆ.



ಉದಯವಾಹಿನಿ ಚಿತ್ರ

ಸ್ವಚ್ಛ ಭಾರತ ಅಭಿಯಾನದಡಿ ಮೈಸೂರು ನಗರವನ್ನು ಕೇವಲ ಬಾಹ್ಯವಾಗಿ ಅಷ್ಟೇ ಅಲ್ಲದೆ, ನಾಗರಿಕರ ಮನೋಭಾವದಲ್ಲಿಯೂ ಸ್ವಚ್ಛತೆಯ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಪಾಲಿಕೆ ಈ ಕ್ರಮ ಕೈಗೊಂಡಿದೆ. ಚಲನಚಿತ್ರ, ಸಂಗೀತ ಹಾಗೂ ಕಲೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗುರುತರ ಸೇವೆ ಸಲ್ಲಿಸಿರುವ ಗಣ್ಯರ ಜನಪ್ರಿಯತೆ ಮತ್ತು ಬದ್ಧತೆಯನ್ನು ಗಮನಿಸಿ ಈ ಜವಾಬ್ದಾರಿ ನೀಡಲಾಗಿದೆ. ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಚಲನಚಿತ್ರ ಕಲಾವಿದರಾದ ವಸಿಷ್ಠ ಸಿಂಹ, ನಟಿ ಹರಿಪ್ರಿಯಾ, ಬಿಗ್‌ಬಾಸ್ ಖ್ಯಾತಿಯ ಸೂರಜ್ ಸಿಂಗ್, ಖ್ಯಾತ ಗಾಯಕಿ ಅನನ್ಯಾ ಭಟ್ ಹಾಗೂ ಆಲೋಕ್ ಇವರು ಮೈಸೂರು ಮಹಾನಗರ ಪಾಲಿಕೆಯ ನೂತನ ಸ್ವಚ್ಛತಾ ರಾಯಭಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾನೆ. ನೇಮಕಗೊಂಡಿರುವ ಈ ಗಣ್ಯರು ನಗರದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಲಿದ್ದಾರೆ. ಪಾಲಿಕೆಯು ಹಮ್ಮಿಕೊಳ್ಳುವ ಸ್ವಚ್ಛ ಭಾರತ ಅಭಿಯಾನದ ವಿವಿಧ ಕಾರ್ಯಕ್ರಮಗಳು ಹಾಗೂ ಜಾಗೃತಿ ಜಾಥಾಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ.

ಶಾಲಾ–ಕಾಲೇಜುಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಸ್ವಚ್ಛತೆಯ ಸಂದೇಶವನ್ನು ಪರಿಣಾಮಕಾರಿಯಾಗಿ ತಲುಪಿಸುವ ಕೆಲಸವನ್ನು ಇವರು ಮಾಡಲಿದ್ದಾರೆ.

ಸಂಪೂರ್ಣವಾಗಿ ಸೇವಾ ಮನೋಭಾವದಿಂದ, ಯಾವುದೇ ಗೌರವಧನ ಅಥವಾ ಆರ್ಥಿಕ ಲಾಭದ ಅಪೇಕ್ಷೆಯಿಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ ಸೇವಾ ಮನೋಭಾವದಿಂದ, ಈ ಸಾಧಕರು ರಾಯಭಾರಿಗಳಾಗಿ ನೇಮಕಗೊಂಡಿದ್ದಾರೆ. ಮೈಸೂರನ್ನು ಶಿಸ್ತುಬದ್ಧ , ಮಾದರಿ ನಗರವಾಗಿ ರೂಪಿಸುವ ಪಾಲಿಕೆಯ ಆಶಯಕ್ಕೆ ಇವರ ಸಹಕಾರ ಜೊತೆಯಾಗಲಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಮುದಾಯದ ಮುಖಂಡರನ್ನು ಹಾಗೂ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಾದ ಸುದರ್ಶನ್ ರಾವ್, ಪ್ರೀತಮ್ ರಾವ್, ಪ್ರಜ್ವಲ್ ರಾವ್ ಅವರನ್ನು ಸನ್ಮಾನಿಸಲಾಯಿತು.

# ಸೌಕರ್ಯ ವಂಚಿತ ಭವನದಲ್ಲಿ ವಸತಿ ಶಾಲೆ!

• ಉದಯವಾಹಿನಿ, ಪಾಂಡವಪುರ

ಮೂಲಸೌಕರ್ಯ ವಂಚಿತ ಖಾಸಗಿ ಸಮುದಾಯದ ಭವನದಲ್ಲೇ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ಹೆಣ್ಣುಮಕ್ಕಳ ವಸತಿ ಶಾಲೆ ನಡೆಯುತ್ತಿದೆ. ನೂತನ ಕಟ್ಟಡಕ್ಕೆ ಸರ್ಕಾರ 22 ಕೋಟಿ ಬಿಡುಗಡೆ ಮಾಡಿ ವರ್ಷ ಕಳೆದರೂ, ನಿರ್ಮಾಣ ಕಾರ್ಯ ಪ್ರಾರಂಭವಾಗಿಲ್ಲ. ತಾಲ್ಲೂಕಿನ ಮಹದೇಶ್ವರಪುರ ಗ್ರಾಮದ ಮಹದೇಶ್ವರಸ್ವಾಮಿ ದೇವಸ್ಥಾನದ ಬಳಿ ಇರುವ ಈ ವಸತಿ ಶಾಲೆಯು ಕಳೆದ 9 ವರ್ಷಗಳಿಂದ ಮಹದೇಶ್ವರ ಸೇವಾ ಸಮಿತಿಗೆ ಸೇರಿದ ಸಮುದಾಯ ಭವನದಲ್ಲಿಯೇ ನಡೆಯುತ್ತಿದೆ.

2017ರಲ್ಲಿ 50 ಹೆಣ್ಣುಮಕ್ಕಳಿಂದ ಈ ವಸತಿ ಶಾಲೆ ಪ್ರಾರಂಭಗೊಂಡಿತು. 6ನೇ ತರಗತಿಯಿಂದ 10ನೇ ತರಗತಿಯವರೆಗೆ ನಡೆಯುತ್ತಿರುವ ಈ ವಸತಿ ಶಾಲೆಯಲ್ಲಿ ಈಗ 250 ಹೆಣ್ಣುಮಕ್ಕಳಿದ್ದಾರೆ. ಪಾಠ, ಊಟ, ವಸತಿಗೆ ಪ್ರತ್ಯೇಕ ಕೊಠಡಿಗಳಿಲ್ಲದೆ, ಸಮುದಾಯ ಭವನದ ಹಾಲ್‌ನಲ್ಲಿಯೇ ಎಲ್ಲಾ ಚಟುವಟಿಕೆಗಳು ನಡೆಯಬೇಕಿದೆ. ಜತೆಗೆ ಸಮರ್ಪಕ ಗಾಳಿ– ಬೆಳಕಿಲ್ಲದೆ ಉಸಿರುಗಟ್ಟಿದ ವಾತಾವರಣದಲ್ಲಿಯೇ ಮಕ್ಕಳು ದಿನದೂಡುವಂತಾಗಿದೆ. ತಿಂಗಳಿಗೆ 55 ಸಾವಿರ ಬಾಡಿಗೆ ಪಡೆಯುತ್ತಿರುವ ಸೇವಾ ಸಮಿತಿಯವರು ಬಾಡಿಗೆ ಕರಾರು ಮಾಡಿಕೊಂಡಾಗ, ವಸತಿ ಶಾಲೆಗೆ ಮೂಲಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ಒಪ್ಪಿಕೊಂಡಿದ್ದರು. ಅದರಂತೆ ಒಂದಿಷ್ಟು ಸೌಲಭ್ಯಗಳನ್ನು ಒದಗಿಸಿ ಕೈತೊಳೆದುಕೊಂಡಿದ್ದಾರೆ. ಈ ಸಮುದಾಯ ಭವನಕ್ಕೆ ಸರ್ಕಾರದ ಕೆ.ಆರ್.ಡಿ.ಎಲ್. ವತಿಯಿಂದ 5 ಲಕ್ಷ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಿಕೊಡಲಾಗಿದೆ.

**ಕಟ್ಟಡಕ್ಕೆ 22ಕೋಟಿ ಮಂಜೂರು:** ಡಾ. ಬಿ.ಆರ್. ಅಂಬೇಡ್ಕರ್ ಹೆಣ್ಣುಮಕ್ಕಳ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಕಳೆದ 8 ವರ್ಷಗಳ ಹಿಂದೆಯೇ ಮಹದೇಶ್ವರ ಗ್ರಾಮದ ಬಳಿ ಸರ್ಕಾರವು 5 ಎಕರೆ ಜಾಗ ಮಂಜೂರು ಮಾಡಿತ್ತು.

ಬಳಿಕ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ನೂತನ ಕಟ್ಟಡ ನಿರ್ಮಾಣಕ್ಕೆ 10ನೇ ಮಾರ್ಚ್ 2025 ರಂದು 22 ಕೋಟಿ ಬಿಡುಗಡೆ ಮಾಡಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದಾರೆ. 12 ತಿಂಗಳೊಳಗಾಗಿ ಕಟ್ಟಡ ಕಾಮಗಾರಿಯನ್ನು ಮುಕ್ತಾಯಗೊಳಿಸಿ ಕಟ್ಟಡವನ್ನು ಇಲಾಖೆ ವಶಕ್ಕೆ ನೀಡತಕ್ಕದ್ದು ಎಂದು ಆದೇಶ ನೀಡಿದೆ.

---

# ಸಿಮ್ಸ್ ವೈದ್ಯಕೀಯ ಆಸ್ಪತ್ರೆಯಲ್ಲಿ ಸರ್ವೈಕಲ್ ಕ್ಯಾನ್ಸರ್ ಕುರಿತು ಕಾರ್ಯಾಗಾರ

• ಉದಯವಾಹಿನಿ ,ಚಾಮರಾಜನಗರ

ಸ್ತ್ರೀಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಎಚ್ಚರಿಕೆ ವಹಿಸಬೇಕು, ಪ್ರಾಥಮಿಕ ಹಂತದಲ್ಲಿಯೇ ಕಾಯಿಲೆಯನ್ನು ಪತ್ತೆ ಹಚ್ಚಿ ಚಿಕಿತ್ಸೆ ಪಡೆದುಕೊಂಡರೆ ಸಂಪೂರ್ಣವಾಗಿ ಗುಣಪಡಿಸಬಹುದು ಎಂದು ಪ್ರಸೂತಿ ಮತ್ತು ಸ್ತ್ರೀ ರೋಗಗಳ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್ ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

ಚಾಮರಾಜನಗರದ ಹೊರವಲಯದಲ್ಲಿರುವ ಸಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಮೈಸೂರಿನ ನಾರಾಯಣ ಹೆಲ್ತ್‌ಕೇರ್ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ಸರ್ವೈಕಲ್ ಕ್ಯಾನ್ಸರ್ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಈಚೆಗೆ ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿದ್ದು ಜಗತ್ತಿನಲ್ಲಿ ಭಾರತದಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿರುವುದು ಆತಂಕಕಾರಿ. ಗರ್ಭಕಂಠ ಕ್ಯಾನ್ಸರ್‌ಗೆ ಚಿಕಿತ್ಸೆ ಇದ್ದರೂ ಬಾಧಿತರು ಕೊನೆಯ ಹಂತದಲ್ಲಿ ಚಿಕಿತ್ಸೆಗೆ ಬರುತ್ತಿರುವುದು ರೋಗಿಗಳನ್ನು ಬದುಕುಳಿಸುತ್ತಿರುವುದು ಕಷ್ಟವಾಗುತ್ತಿದೆ. ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಗುಣಮುಖರಾಗಿ ಸಹಜ ಜೀವನ ನಡೆಸಬಹುದು ಎಂದರು. ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಗರ್ಭ ಧರಿಸುತ್ತಿರುವ ಮಹಿಳೆಯರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದ್ದು ತಡೆಯಲು ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕಲಾಗುತ್ತದೆ. ಈಚೆಗೆ ಪ್ರೌಢಶಾಲಾ ಹಂತದಲ್ಲಿಯೇ ಎಚ್‌ಪಿವಿ ಲಸಿಕೆ ಹಾಕಲಾಗುತ್ತದೆ. ಅನಿಮಿಯತವಾಗಿ ಬಿಳಿಸೆರಗು ಹೋಗುವುದು ಕಾಯಿಲೆಯ ಲಕ್ಷಣಗಳಲ್ಲಿ ಒಂದು. ಮುಂಜಾಗ್ರತಾ ಕ್ರಮಗಳು ಗರ್ಭಕಂಠ ಕ್ಯಾನ್ಸರ್‌ನಿಂದ ದೂರ ಇರಬಹುದು. ಕಿರಿಯ ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳಿಗೆ ಗರ್ಭಕಂಠ ಕ್ಯಾನ್ಸರ್ ಬಗ್ಗೆ ತಜ್ಞ ವೈದ್ಯರಿಂದ ಮಾಹಿತಿ ನೀಡುವುದು ಹಾಗೂ ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸುವುದು ಕಾರ್ಯಾಗಾರದ ಉದ್ದೇಶವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿಮ್ಸ್ ಡೀನ್ ಡಾ.ಎಚ್.ಜಿ.ಮಂಜುನಾಥ್ ಮಾತನಾಡಿ, ವೈದ್ಯಕೀಯ ಕಾಲೇಜಿನ ಎಲ್ಲಾ ವಿಭಾಗಗಳಿಂದ ಕಾಯಿಲೆಗಳ ಕುರಿತು ಜಾಗೃತಿ ಮೂಡಿಸಲು ಹಾಗೂ ವಿಚಾರ ವಿನಿಯಮಕ್ಕೆ ನಿರಂತರ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. ಮುಂದುವರಿದ ವೈದ್ಯಕೀಯ ಶಿಕ್ಷಣಕ್ಕೆ ಬುನಾದಿ ಹಾಕಲಾಗುತ್ತಿದೆ. ಇಂತಹ ಕಾರ್ಯಾಗಾರಗಳು ವೈದ್ಯಕೀಯ ವಿದ್ಯಾರ್ಥಿಗಳ ಕೌಶಲವನ್ನು ಹೆಚ್ಚಿಸುತ್ತವೆ, ಕಿರಿಯ ವೈದ್ಯರ ವೃತ್ತಿ ಕೌಶಲ ವೃದ್ಧಿಸುತ್ತದೆ. ರೋಗಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಗುಣಾತ್ಮಕ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ ಎಂದರು.

ಸಿಮ್ಸ್‌ನಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ರೋಗ ತಡೆಯಲು ತಜ್ಞ ವೈದ್ಯರ ತಂಡ ಶ್ರಮಿಸುತ್ತಿದ್ದು ಗುಣಮಟ್ಟದ ಚಿಕಿತ್ಸೆ ನೀಡುತ್ತಿದೆ. ಗರ್ಭಕಂಠ ಕ್ಯಾನ್ಸರ್‌ನ ಲಕ್ಷಣಗಳು ಕಂಡುಬಂದರೆ ಮಹಿಳೆಯರು ತಕ್ಷಣ ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಬೇಕು ಎಂದು ಸಲಹೆ ನೀಡಿದರು.

# ಕಾರಂಜಿ ತಂತ್ರಾಂಶದಲ್ಲಿ ದೋಷ

• ಉದಯವಾಹಿನಿ, ಶ್ರೀರಂಗಪಟ್ಟಣ

ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಕೆ.ಆರ್.ಎಸ್ ಬೃಂದಾವನದ ಸಂಗೀತ ನೃತ್ಯ ಕಾರಂಜಿ ಪ್ರದರ್ಶನದ ತಂತ್ರಾಂಶದಲ್ಲಿ ದೋಷ ಕಾಣಿಸಿಕೊಂಡಿದ್ದು, ಸೋಮವಾರ ಸಂಜೆವರೆಗೂ ಸರಿಪಡಿಸಲು ಸಾಧ್ಯವಾಗಿಲ್ಲ. ನೀರಿನ ಚಿಲುಮೆಗಳಿಗೆ ಸಂಗೀತ ಮತ್ತು ಬೆಳಕನ್ನು ಸಂಯೋಜಿಸುವ ಸಾಫ್ಟ್‌ವೇರ್ ದಿಢೀರ್ ಸ್ಥಗಿತಗೊಂಡಿದೆ. ತಜ್ಞರು ಸರಿಪಡಿಸುವ ಪ್ರಯತ್ನ ಮುಂದುವರಿಸಿದ್ದಾರೆ.

ಸಾಫ್ಟ್‌ವೇರ್‌ನ ದೋಷ ಸರಿಯಾಗುವವರೆಗೆ ಸಂಗೀತ ಮತ್ತು ನೃತ್ಯ ಕಾರಂಜಿಯ ಪ್ರದರ್ಶನ ಇರುವುದಿಲ್ಲ ಎಂದು ಟಿಕೆಟ್ ಕೌಂಟರ್ ಬಳಿ ಫಲಕ ಹಾಕಲಾಗಿದೆ. ಪ್ರವಾಸಿಗರು ಬೃಂದಾವನ ಉದ್ಯಾನ ವೀಕ್ಷಿಸಲು ಅವಕಾಶ ಇರುತ್ತದೆ' ಎಂದು ಕಾವೇರಿ ನೀರಾವರಿ ನಿಗಮದ ಎಇಇ ಫಾರೂಕ್ ಅಬು ತಿಳಿಸಿದ್ದಾರೆ. ಸಾಫ್ಟ್‌ವೇರ್‌ಗಳನ್ನು ನಿರ್ವಹಣೆ ಮಾಡಬೇಕು. ಪ್ರದರ್ಶನವನ್ನು ಅನಿವಾರ್ಯವಾಗಿ ನಿಲ್ಲಿಸಲಾಗುತ್ತದೆ.

---

# ಅಭಿವೃದ್ಧಿ ಶೂನ್ಯರಿಂದ ಟೀಕೆ ಅರ್ಥಹೀನ : ಬಿಜೆಪಿ ನಾಯಕರಿಗೆ ಶಾಸಕ ಎಚ್.ಎಂ.ಜಿ. ತಿರುಗೇಟು

• ಉದಯವಾಹಿನಿ,ಗುಂಡ್ಲುಪೇಟೆ

ಅಭಿವೃದ್ಧಿ ಶೂನ್ಯರಿಂದ ಬರುವ ಟೀಕೆ ಟಿಪ್ಪಣಿಗಳು ಅರ್ಥಹೀನ ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ವಿಪಕ್ಷ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

ತಾಲ್ಲೂಕಿನ ವಡ್ಡಗೆರೆ ಗ್ರಾಮದಲ್ಲಿ 16 ಕೋಟಿ ವೆಚ್ಚದ ನೂತನ ವಿದ್ಯುತ್ ಸ್ಥಾವರ ಕೇಂದ್ರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.


ಉದಯವಾಹಿನಿ ಚಿತ್ರ

ಕ್ಷೇತ್ರದಲ್ಲಿ ಅಧಿಕಾರ ಕಳೆದುಕೊಂಡ ನಂತರ ಹತಾಶ ಮನೋಭಾವಕ್ಕೆ ತುತ್ತಾಗಿರುವ ಬಿಜೆಪಿ ನಾಯಕರು ಟೀಕೆ ಟಿಪ್ಪಣಿಗಳ ಮಾಡುತ್ತ ಕಾಲಹರಣ ಮಾಡುತ್ತಿದ್ದಾರೆ. ಇವರ ಟೀಕೆಗಳಿಗೆ ಉತ್ತರಿಸುತ್ತಾ ಕೂರಲು ನಮ್ಮಲ್ಲಿ ಸಮಯವಿಲ್ಲ ಕ್ಷೇತ್ರದ ಜನತೆಯ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುವುದೇ ನನ್ನ ಧ್ಯೇಯ ಎಂದು ನಾಜೂಕಾಗಿ ವಿಪಕ್ಷದವರ ಕಾಲೆಳೆದರು. ಕಳೆದ ಬಾರಿ ಅಧಿಕಾರದಲ್ಲಿದ್ದ ಸಂಧರ್ಭದಲ್ಲಿ ಜನರ ಬೇಕು ಬೇಡಗಳಿಗೆ ಸ್ಪಂದಿಸದೆ ಕ್ಷೇತ್ರವನ್ನ ಅಭಿವೃದ್ಧಿ ಶೂನ್ಯದತ್ತ ಕೊಂಡೊಯ್ದದ್ದಲ್ಲದೆ ಮಹದೇವಪ್ರಸಾದ್ ಮತ್ತು ನಾಗರತ್ನಮ್ಮ ಅವರ ಮಾದರಿಯಲ್ಲಿ ಆಡಳಿತ ನಡೆಸಬಲ್ಲೆ ಎಂಬ ಕಲ್ಪನಾ ಲೋಕದಲ್ಲಿ ಮುಳುಗಿ ಜನತೆಯ ನಂಬಿಕೆ ಉಳಿಸಿಕೊಳ್ಳುವಲ್ಲಿ ವಿಫಲರಾದ ನಿಮಗೆ ಟೀಕಿಸುವ ನೈತಿಕ ಹಕ್ಕಿಲ್ಲ ನಾಣ್ಣುಡಿಯಂತೆ ಟೀಕೆಗಳು ಸಾಯುತ್ತವೆ ಮಾಡಿದ ಕೆಲಸ ಕಾರ್ಯಗಳು ಅಚಲವಾಗಿ ಉಳಿಯುತ್ತವೆ ಎಂದು ವ್ಯಂಗ್ಯವಾಡಿದರು.

**ಯೋಜನೆ ತಂದಿದ್ದು ಎಚ್.ಎಸ್.ಎಂ :** ವಡ್ಡಗೆರೆ ಗ್ರಾಮದಲ್ಲಿ ವಿದ್ಯುತ್ ಉತ್ಪಾದನ ಕೇಂದ್ರ ಸ್ಥಾಪನೆಗೆ ಅಡಿಗಲ್ಲಾಕಿರುವುದು ನಮ್ಮತಂದೆಯವರ ಕಾಲದಲ್ಲಿ ಆದರೆ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದ ವೇಳೆ ಏನು ಕೆಲಸ ಮಾಡದೆ ಪ್ರಸ್ತುತವಾಗಿ ಟೀಕಿಸುತ್ತಿದ್ದಾರೆ, ತಾವು ಶಾಸಕರಾಗಿದ್ದ ವೇಳೆ ನಿಮ್ಮ ಪ್ರೀತಿ ಪಾತ್ರರಾದ ಯಡಿಯೂರಪ್ಪ ಅವರನ್ನ ಅಪ್ಪಾಜಿ ಅಪ್ಪಾಜಿ ಎಂದು ಹಿಂದೆಯೇ ಓಡಾಡುತ್ತಿದ್ದ ನಿಮಗೆ ಕೆಲಸ ಮಾಡಲು ಸಾಧ್ಯವಾಗಲಿಲ್ಲವೇಕೆ ಎಂದು ಪ್ರಶ್ನಿಸಿದರು.

## ಯೋಜನೆ ತಂದಿದ್ದು ಎಚ್.ಎಸ್.ಎಂ



**ವಡ್ಡಗೆರೆ ಗ್ರಾಮದಲ್ಲಿ ವಿದ್ಯುತ್ ಉತ್ಪಾದನ ಕೇಂದ್ರ ಸ್ಥಾಪನೆಗೆ ಅಡಿಗಲ್ಲಾಕಿರುವುದು ನಮ್ಮ ತಂದೆಯವರ ಕಾಲದಲ್ಲಿ ಆದರೆ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದ ವೇಳೆ ಏನು ಕೆಲಸ ಮಾಡದೆ ಪ್ರಸ್ತುತವಾಗಿ ಟೀಕಿಸುತ್ತಿದ್ದಾರೆ. ತಾವು ಶಾಸಕರಾಗಿದ್ದ ವೇಳೆ ನಿಮ್ಮ ಪ್ರೀತಿ ಪಾತ್ರರಾದ ಯಡಿಯೂರಪ್ಪ ಅವರನ್ನ ಅಪ್ಪಾಜಿ ಅಪ್ಪಾಜಿ ಎಂದು ಹಿಂದೆಯೇ ಓಡಾಡುತ್ತಿದ್ದ ನಿಮಗೆ ಕೆಲಸ ಮಾಡಲು ಸಾಧ್ಯವಾಗಲಿಲ್ಲವೇಕೆ ಎಂದು ಪ್ರಶ್ನಿಸಿದರು.**

## ಇಚ್ಛಾಶಕ್ತಿ ಕೊರತೆ

**ಚುನಾವಣೆಯಲ್ಲಿ ಆಯ್ಕೆಯಾದ ಬಳಿಕ ಕ್ಷೇತ್ರದ ಜನತೆಯ ಸೇವೆ ಮಾಡಲೇಬೇಕು ಎಂಬ ಬಯಕೆ ಇಚ್ಛಾಶಕ್ತಿಯಿರಬೇಕು, ಶಾಸಕನಾಗಿ ಆಯ್ಕೆಯಾದೆ ಎಂಬ ಹುರುಪಿನಲ್ಲಿ ಎಚ್.ಎಸ್. ಮಹದೇವಪ್ರಸಾದ್ , ಕೆ.ಎಸ್.ನಾಗರತ್ನಮ್ಮ ಅವರ ಹಾಗೆಯೇ ಆಳ್ವಿಕೆ ನಡೆಸಬಲ್ಲೆ ಎಂಬ ಭ್ರಮೆಯಿಂದ ಹೊರಬಂದು ಮತನೀಡಿದ ಜನತೆಯ ನಂಬಿಕೆ ಉಳಿಸಿಕೊಳ್ಳುವಲ್ಲಿ ವಿಫಲರಾದ ಮಾಜಿ ಶಾಸಕರು ವಿರೋಧ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಲೇವಡಿ ಮಾಡಿದರು.**

## ಗುಣಮಟ್ಟದ ಕಾಮಗಾರಿಗೆ ಸೂಚನೆ

**16 ಕೋಟಿ ವೆಚ್ಚದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಚಾಲನೆ ನೀಡಿದ್ದು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡುವಂತೆ ಗುತ್ತಿಗೆದಾರರಿಗೆ ಸೂಚಿಸಿದರು. ವಡ್ಡಗೆರೆ ಭಾಗದಲ್ಲಿ ಅಭಿವೃದ್ಧಿ ಕೆಲಸಗಳು ಆಗಬೇಕಿದ್ದು ಸರ್ಕಾರದಿಂದ ಅನುದಾನ ಬಂದ ಕೂಡಲೇ ಹಂತಹಂತವಾಗಿ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು. ಪಟ್ಟಣದ ಶಾಸಕರ ಕಚೇರಿ ಆವರಣದಲ್ಲಿ ಸ್ವಾವಲಂಭಿ ಸಾರಥಿ ಯೋಜನೆಯಡಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಆಯ್ಕೆಯಾಗಿದ್ದ ಕೆಂಗಾಕಿ ಗ್ರಾಮದ ಫಲಾನುಭವಿಗೆ ವಾಹನದ ಕೀಲಿ ಹಸ್ತಾಂತರಿಸಿ 2024 – 25 ನೇ ಸಾಲಿನಲ್ಲಿ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನ ವಿತರಿಸಲಾಯಿತು. ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಮಡಿವಾಳಪ್ಪ, ಶ್ರೀನಿವಾಸ್ ಚಿರಕನಹಳ್ಳಿ, ಚನ್ನಬಸಪ್ಪ, ಚಿನ್ನಸ್ವಾಮಿ ಗ್ರಾಮದ ಮುಖಂಡರುಗಳು ಹಿರಿಯರು ಹಾಜರಿದ್ದರು.**

ಅಂತರಾಳದಿಂದ..
EDITORIAL

# ಆಹಾರ ಪೊಟ್ಟಣಗಳ ಮೇಲೆ ವಿವರ ಎಫ್‌ಎಸ್‌ಎಸ್‌ಎಐ ಹೊಣೆ ಹೊರಲಿ




ಸಕ್ಕರೆ, ಉಪ್ಪು ಮತ್ತು ಪರ್ಯಾಪ್ತ ಕೊಬ್ಬು ಹೆಚ್ಚಿನ ಪ್ರಮಾಣದಲ್ಲಿ ಇರುವ ಎಚ್ಚರಿಕೆಯ ಸಂದೇಶವನ್ನು ಪ್ಯಾಕ್ ಆಗಿರುವ ಆಹಾರದ ಪೊಟ್ಟಣದ ಮುಂಭಾಗದಲ್ಲಿಯೇ ಪ್ರಕಟಿಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆಯು ಬಹುವರ್ಷಗಳಿಂದ ಚರ್ಚೆಯಲ್ಲಿದೆ.

ಈ ವಿಚಾರವಾಗಿ ಅಂತಿಮ ತೀರ್ಮಾನ ಕೈಗೊಳ್ಳಬೇಕಿರುವ ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಶೀಘ್ರವೇ ನಿರ್ಧಾರವೊಂದನ್ನು ಕೈಗೊಳ್ಳಲಾಗುತ್ತದೆ ಎಂಬ ಸೂಚನೆಯನ್ನು ಈ ಹಿಂದೆ ನೀಡಿತ್ತು. ವಿಷಯದ ಬಗ್ಗೆ ವರದಿ ಸಿದ್ಧಪಡಿಸುವಂತೆ ಪ್ರಾಧಿಕಾರವು ಅಹಮದಾಬಾದ್‌ನ ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗೆ (ಐಐಎಂ ಎ) ಸೂಚನೆಯನ್ನೂ ನೀಡಿತ್ತು. ಈ ರೀತಿ ಕಡ್ಡಾಯವಾಗಿ ಎಚ್ಚರಿಕೆಯ ಸಂದೇಶ ಪ್ರಕಟಿಸುವುದರಿಂದ ಜನರಲ್ಲಿ ಆರೋಗ್ಯಕರವಾದ ಆಹಾರ ಸೇವನೆಯ ಅಭ್ಯಾಸ ಬೆಳೆಸಲು ನೆರವಾಗುತ್ತದೆ; ಕೆಲವು ಬಗೆಯ ಕಾಯಿಲೆಗಳನ್ನು ತಡೆಯಲು ಕೂಡ ಸಾಧ್ಯವಾಗುತ್ತದೆ ಎಂದು ಹೇಳಿತ್ತು. ಈ ಬಗೆಯ ಸಂದೇಶ ಪ್ರಕಟಿಸುವುದನ್ನು 2023ರಿಂದ ಐಚ್ಛಿಕವಾಗಿಸಲಾಗುತ್ತದೆ. ನಾಲ್ಕು ವರ್ಷಗಳ ನಂತರದಲ್ಲಿ ಅದನ್ನು ಕಡ್ಡಾಯ ಮಾಡಲಾಗುತ್ತದೆ ಎಂಬ ವರದಿಗಳೂ ಇದ್ದವು. ಈ ವ್ಯವಸ್ಥೆಯ ಅಡಿಯಲ್ಲಿ ಪೌಷ್ಟಿಕಾಂಶಗಳ ಮಾಹಿತಿ ನೀಡುವ, ಎಚ್ಚರಿಕೆಯ ಸಂದೇಶವನ್ನು ನೀಡುವ ಪದ್ಧತಿ ಜಾರಿಗೆ ಬರಬೇಕಿತ್ತು. ಪ್ಯಾಕ್ ಮಾಡಲಾಗಿರುವ ಆಹಾರ ವಸ್ತುಗಳಿಗೆ 0.5ರಿಂದ 5ರವರೆಗೆ ಅಂಕ ನೀಡಬೇಕಾಗಿತ್ತು.

**ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳು ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿರುವ ಸಂದರ್ಭದಲ್ಲಿ ಈ ಬಗೆಯಲ್ಲಿ ಆಹಾರದ ಬಗ್ಗೆ ಕೆಲವು ಅಗತ್ಯ ಮಾಹಿತಿಗಳನ್ನು ಒದಗಿಸುವುದು ಮುಖ್ಯವಾಗುತ್ತದೆ.**


ಆಹಾರದ ಪೊಟ್ಟಣದ ಮುಂಭಾಗದಲ್ಲಿಯೇ ಈ ವಿವರಗಳನ್ನು ಪ್ರಕಟಿಸುವಂತೆ ಮಾಡಲು ಕಾನೂನಿನಲ್ಲಿ ಅಗತ್ಯ ಇರುವ ಬದಲಾವಣೆಗಳು ಏನು ಎಂಬುದರ ಬಗ್ಗೆ ತಿಳಿಸಲು ತಜ್ಞರ ಸಮಿತಿಯೊಂದಕ್ಕೆ ಸುಪ್ರೀಂ ಕೋರ್ಟ್ ಕಳೆದ ವರ್ಷ ಸೂಚಿಸಿತ್ತು. ಈಚೆಗೆ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವೊಂದನ್ನು ಸಲ್ಲಿಸಿರುವ ಎಫ್‌ಎಸ್‌ಎಸ್‌ಎಐ, ಪೊಟ್ಟಣದಲ್ಲಿ ಬರುವ ಆಹಾರ ವಸ್ತುಗಳನ್ನು ವ್ಯವಸ್ಥಿತವಾಗಿ ಗುರುತಿಸುವ ವರ್ಗೀಕರಿಸುವ ಉದ್ದೇಶ ತನಗಿದೆ ಎಂದು ಹೇಳಿದೆ.

ಈ ಬಗೆಯ ಮಾಹಿತಿಯನ್ನು ಗ್ರಾಹಕರು ಯಾವ ಬಗೆಯಲ್ಲಿ ಬಳಸುತ್ತಾರೆ ಎಂಬುದನ್ನು ತಿಳಿಯಲು ಸಮೀಕ್ಷೆ ನಡೆಸುವ, ಆ ಮಾಹಿತಿಯನ್ನು ನೀಡುವ ವಿಚಾರವಾಗಿ ಜಾಗತಿಕ ಮಟ್ಟದಲ್ಲಿ ಯಾವ ಕ್ರಮ ಅನುಸರಿಸಲಾಗುತ್ತಿದೆ ಎಂಬುದನ್ನು ತಿಳಿಯುವ, ಎಂಎಸ್‌ಎಂಇ ವಲಯದ ಉದ್ದಿಮೆಗಳ ಜೊತೆ ಸಮಾಲೋಚನೆ ನಡೆಸುವ ಪ್ರಸ್ತಾವವನ್ನೂ ಪ್ರಾಧಿಕಾರ ಮಾಡಿದೆ. ಆದರೆ ಎಫ್‌ಎಸ್‌ಎಸ್‌ಎಐ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ನ್ಯಾಯಮೂರ್ತಿಗಳಾದ ಎ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು 'ಪ್ರಾಧಿಕಾರವು ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ, ದೇಶದ ಜನರ ಆರೋಗ್ಯದ ಹಕ್ಕಿನ ಬಗ್ಗೆ ಆಲೋಚಿಸಬೇಕು' ಎಂದು ಹೇಳಿದೆ. ಸಲಹೆಗಳನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಆಲೋಚಿಸಿ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠವು ಪ್ರಾಧಿಕಾರಕ್ಕೆ ಸೂಚಿಸಿದೆ. ಪೊಟ್ಟಣದಲ್ಲಿ ಇರುವ ಎಲ್ಲಾ ಆಹಾರ ವಸ್ತುಗಳ ವಿಚಾರದಲ್ಲಿ, ಪೊಟ್ಟಣದ ಮುಂಭಾಗದಲ್ಲಿಯೇ ಎಚ್ಚರಿಕೆಯ ಸಂದೇಶವನ್ನು ಪ್ರಕಟಿಸಬೇಕು ಎಂಬ ಮನವಿ ಇರುವ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು ಈ ಸೂಚನೆ ನೀಡಿದೆ. ಪೊಟ್ಟಣದ ಮೇಲೆ ಅಂಕಗಳನ್ನು ಪ್ರಕಟಿಸುವುದನ್ನು ಅರ್ಜಿದಾರರು ವಿರೋಧಿಸಿದ್ದಾರೆ. ಈ ರೀತಿ ಅಂಕಗಳನ್ನು ಪ್ರಕಟಿಸುವುದರಿಂದ ಸಕ್ಕರೆ, ಉಪ್ಪು ಮತ್ತು ಪರ್ಯಾಪ್ತ ಕೊಬ್ಬಿನ ಮಟ್ಟ ಅತಿಯಾಗಿರುವ ವಿಚಾರ ಗ್ರಾಹಕರಿಗೆ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳು ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿರುವ ಸಂದರ್ಭದಲ್ಲಿ ಈ ಬಗೆಯಲ್ಲಿ ಆಹಾರದ ಬಗ್ಗೆ ಕೆಲವು ಅಗತ್ಯ ಮಾಹಿತಿಗಳನ್ನು ಒದಗಿಸುವುದು ಮುಖ್ಯವಾಗುತ್ತದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 11ಕ್ಕೂ ಹೆಚ್ಚಿನವರಿಗೆ ಮಧುಮೇಹದ ಸಮಸ್ಯೆ ಇದೆ. ಜಗತ್ತಿನ ಮಧುಮೇಹದ ರಾಜಧಾನಿ ಎಂಬ ಅಪಖ್ಯಾತಿಗೆ ಭಾರತ ಪಾತ್ರವಾಗಿದೆ. ಅತಿಯಾದ ಉದ್ವೇಗ, ಬೊಜ್ಜು, ಅತಿಯಾದ ಕೊಬ್ಬಿನ ಸಮಸ್ಯೆ ಕೂಡ ವ್ಯಾಪಕವಾಗಿದೆ. ಪ್ಯಾಕ್ ಮಾಡಿರುವ ಆಹಾರದಲ್ಲಿ ಬಳಕೆಯಾಗಿರುವ ಪದಾರ್ಥಗಳ ಬಗ್ಗೆ, ಅತಿಯಾಗಿ ಸಂಸ್ಕರಿಸಲಾಗಿರುವ ಆಹಾರದಲ್ಲಿ ಬಳಸಲಾಗಿರುವ ಪದಾರ್ಥಗಳ ಬಗ್ಗೆ ಜನರಿಗೆ ಸರಿಯಾಗಿ ಮಾಹಿತಿ ಒದಗಿಸಬೇಕು. ಎಚ್ಚರಿಕೆಯ ಸಂದೇಶ ನೀಡಬೇಕು. ಜನರಿಗೆ ಇಂತಹ ಆಹಾರ ವಸ್ತುಗಳ ಬದಲು ಆರೋಗ್ಯಕರವಾದ ಪರ್ಯಾಯ ಆಯ್ಕೆಗಳು ಬೇಕು. ಆಹಾರ ವಸ್ತುಗಳ ಬಗ್ಗೆ ನೀಡುವ ಮಾಹಿತಿಯು ವಿವರವಾಗಿರಬೇಕು, ಎಲ್ಲಾ ಅಂಶಗಳನ್ನೂ ಒಳಗೊಂಡಿರಬೇಕು. ಈ ವಿಚಾರವಾಗಿ ನಿಯಮಗಳನ್ನು ರೂಪಿಸಿ. ಅವುಗಳನ್ನು ಅನುಷ್ಠಾನಕ್ಕೆ ತರುವ ಹೊಣೆಯು ಎಫ್‌ಎಸ್‌ಎಸ್‌ಎಐ ಮೇಲಿದೆ.

---


ಕಲಾ ಸಾಹಿತ್ಯ



**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಸ್ಟೀವ್ ಜಾಬ್ಸ್ ಸಾಧನೆ
## ಯುವ ಪೀಳಿಗೆಗೆ ಪ್ರೇರಣೆ

71 ನೇ ವರ್ಷದ ಜನ್ಮ ದಿನಾಚರಣೆ



ಸ್ಟೀವ್ ಜಾಬ್ಸ್ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋ, ಕ್ಯಾಲಿಫೋರ್ನಿಯದಲ್ಲಿ ಫೆಬ್ರವರಿ 24, 1955 ರಂದು ಜನಿಸುತ್ತಾರೆ. ಬಾಲ್ಯದಿಂದಲೂ ಬಹಳ ಕಷ್ಟದ ದಿನಗಳನ್ನು ಅನುಭವಿಸುತ್ತಾರೆ. ಸ್ಟೀವ್ ಜಾಬ್ಸ್ ಒಬ್ಬ ಅನಾಥ.ಅನಾಥ ಶಿಶುವನ್ನು ಅಮೇರಿಕಾದ ಮಹಿಳಾ ವಕೀಲರೊಬ್ಬರು ಸಾಕಿ-ಸಲಹಿ ವಿದ್ಯಾಭ್ಯಾಸ ನೀಡಿದರು.

ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿದರು. ವಯಸ್ಸಿಗೆ ಬಂದ ನಂತರ ಸ್ಟೀವ್ ಜಾಬ್ಸ್ ಆಗಾಗಲೇ ಎರಡು ಮಕ್ಕಳಿರುವ ಹೆಣ್ಣಿನ ಜೊತೆ ಮದುವೆ ಮಾಡಿಕೊಂಡು ಅನ್ಯೋನ್ಯವಾಗಿದ್ದರು. ನಂತರ ಹೆಚ್ಚು-ಹೆಚ್ಚಿಗೆ ವ್ಯಾಸಂಗ ಮಾಡುವ ಹಠ, ಛಲ ಇಟ್ಟುಕೊಂಡು ಹೊಸ ಹೊಸ ಸಂಶೋಧನೆಗಳನ್ನು ಮಾಡುವ ಹಂಬಲ ಅವರಲ್ಲಿ ಮನೆಮಾಡಿಕೊಂಡಿತ್ತು.

ರಾತ್ರಿ-ಹಗಲು ಕಾಯಕವೇ ಕೈಲಾಸ ಎಂಬ ಅಂಶವನ್ನು ಜೀವಕೋಶದಲ್ಲಿ ಇಟ್ಟುಕೊಂಡಿದ್ದರು. ಇವರಿಗೆ ಜನ್ಮದಾತರು ಯಾರೆಂಬುದೇ ತಿಳಿದಿಲ್ಲ. ಹಣ,ಅಂತಸ್ತು,ಅಧಿಕಾರ, ಸವಲತ್ತು, ಐಶಾರಾಮಿ ಜೀವನ ಎಂದೂ ಬಯಸಿದವರಲ್ಲ. ಅತ್ಯಂತ ಕಠಿಣ ಪರಿಶ್ರಮದಿಂದ ಗಣಕಯಂತ್ರ ಮತ್ತು ತತ್ರಾಂಶ ಉತ್ಪಾದಿಸುವ ಆಪಲ್ ಕಂಪ್ಯೂಟರ್ ಸಂಸ್ಥೆಯ ಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು. ಅತ್ಯಂತ ಸರಳ ಜೀವನದಿಂದ ವಿಜ್ಞಾನ ಎಂಬ ಶ್ರೀಮಂತ ಮಟ್ಟಕ್ಕೇರಿದ ಪೈಕಿ ಇವರು ಕೂಡ ಒಬ್ಬರಾಗಿರುತ್ತಾರೆ. ಇವರಲ್ಲಿ ಸಾಮಾನ್ಯವಾಗಿ ಯಾವುದೇ ಕಳಂಕವಾಗಲೀ,ವೈಮನಸ್ಸಾಗಲೀ, ಅಸೂಯೆಯಾಗಲೀ, ಆಡಂಬರವಾಗಲೀ ಇರಲಿಲ್ಲ. ಚಿಕ್ಕವಯಸ್ಸಿನಿಂದಲೂ ಅತ್ಯಂತ ಶಿಸ್ತು,ನಯಬದ್ಧ ಬದುಕನ್ನು ಕಟ್ಟಿಕೊಂಡು ಒಬ್ಬ ಆದರ್ಶ ವಿಜ್ಞಾನಿ ಎನಿಸಿಕೊಂಡರು. **ಉದಾ:**ಒಬ್ಬ ಮನುಷ್ಯ ಒಂದು ಸಣ್ಣ ಕ್ರಿಮಿಯನ್ನೂ ಸಹ ಸೃಷ್ಟಿ ಮಾಡಲಾರ, ಆದರೆ ಆತ ಅನೇಕ ಸಹಸ್ರ ದೇವರನ್ನ ಸೃಷ್ಟಿಮಾಡಿ ಹೋಗಿದ್ದಾನೆ.

ಸ್ಟೀವ್ ಜಾಬ್ಸ್ ಅತ್ಯಂತ ಪ್ರಮಾಣಿಕ ವಿಜ್ಞಾನಿ, ವಿಜ್ಞಾನ ಲೋಕದ ಬದುಕಿನ ಜೀವನದಲ್ಲಿ ಸುಖವನ್ನೇ ನೋಡಲು ಸಾಧ್ಯವಾಗಲಿಲ್ಲ. ಇವರದೇ ಆದ ಸ್ವಂತ ತಂತ್ರಜ್ಞಾನದಿಂದ ಚಿಕ್ಕ-ಚಿಕ್ಕ ಸಂಶೋಧನೆಯಿಂದ ದೊಡ್ಡಗಾತ್ರದ ಸಂಶೋಧನೆಯತ್ತ ಸಾಗಿ ಸಾಧನೆ ಮಾಡಿದರು. ಬಡತನ ಒಂದು ಕಡೆ, ಅನಾಥ ಒಂದು ಕಡೆ, ಹೆಂಡತಿ ಒಂದು ಕಡೆ, ಮಕ್ಕಳು ಒಂದು ಕಡೆ ಹೀಗೆ ನಾನಾ ರೀತಿ ಚಿಂತನೆಗೆ ಗುರಿಯಾದರು. ಅವರಿಗಿಂತ ತನ್ನ ಸ್ವಂತ ಮಕ್ಕಳಾಗಲಿಲ್ಲ. ಕಾರಣ ವಿಜ್ಞಾನವೇ ನನ್ನ ಉಸಿರು ಮತ್ತು ಜೀವ ಹಾಗೂ ಹೃದಯ ಎಂದು ನಂಬಿದ್ದರು.

ನಾನು ಏನಾದರೂ ಮಾಡಿ ಈ ಜಗತ್ತಿನ ಇತಿಹಾಸ ಪುಟದಲ್ಲಿ ನನ್ನ ಹೆಸರು ಸೇರಬೇಕು. ಆ ನಿಟ್ಟಿನಲ್ಲಿ ನಾನು ಸಂಶೋಧನೆ ಮೂಲಕ ಸಾಧನೆ ಮಾಡಿ ತೋರಿಸುವ ಛಲ ಮತ್ತು ತುಡಿತ ಅವರಲ್ಲಿ ಹುದುಗಿತ್ತು. ಹೀಗಿರುವಲ್ಲಿ ತನ್ನ ಬದುಕನ್ನು ವಿಜ್ಞಾನ ಲೋಕದಲ್ಲಿ ತೊಡಗಿಸಿಕೊಂಡಾಗ ರಾತ್ರಿ- ಹಗಲು ನಿದ್ರೆ ಇಲ್ಲ, ಊಟ ಇಲ್ಲ,ವಿಶ್ರಾಂತಿ ಹಾಗೂ ಉಪಚಾರ ಇರದೇ ಅವುಗಳೆಲ್ಲವನ್ನೂ ಮರೆತೇಬಿಟ್ಟರು. ಅವರಿಗೆ 49 ವರ್ಷ ವಯಸ್ಸಾಗಿದ್ದಾಗ ಕ್ಯಾನ್ಸರ್ ರೋಗ ಇರುವುದು ಪತ್ತೆಯಾಯಿತು.ಆದರೂ ಕೂಡ ಅದನ್ನು ಮರೆತು ತನ್ನ ವಿಜ್ಞಾನ ಲೋಕದಲ್ಲಿ ಐಪ್ಯಾಡ್,ಐಫೋನ್ ಹಾಗೂ ಇನ್ನಿತರ ತರಂಗಗಳನ್ನು ಅತ್ಯಂತ ಯಶಸ್ವಿಯಾಗಿ ಕಂಡುಹಿಡಿದು ಈ ಜಗತ್ತಿಗೆ ಅರ್ಪಿಸಿದರು. ನಂತರ ವಿಜ್ಞಾನ ಲೋಕ ಅವರಿಗೆ ತುಂಬು ಹೃದಯದಿಂದ ಗೌರವಿಸಿತು. ಜಗದ್ವಿಖ್ಯಾತಿಯಾದರು.ಅನೇಕ ವಿಜ್ಞಾನಿಗಳು ಇವರ ಶ್ರಮಕ್ಕೆ ಶ್ಲಾಘಿಸಿದರು. ಕ್ಯಾನ್ಸರ್ ರೋಗ ಇರುವುದನ್ನೇ ಮರೆತು ಯಾರು ನಂಬಲಾರದ ಸಂಶೋಧನೆ, ಪ್ರಯೋಗ ಮಾಡಿ ಈ ತಂತ್ರಜ್ಞಾನವನ್ನು ಕಂಡುಹಿಡಿದು ಪ್ರಸಿದ್ಧರಾದರು. ಸತತ ಏಳು ವರ್ಷಗಳಿಂದ ಅವರಿಗೆ ಕ್ಯಾನ್ಸರ್ ರೋಗ ಕಾಡುತ್ತಿತ್ತು. ನಿರಂತರ ಸಾವನ್ನ ಗೆದ್ದು ಕಡೆಗಾಲಕ್ಕೆ ವಿಧಿ ಬಿಡದೇ ತನ್ನ 56 ನೇ ವಯಸ್ಸಿನಲ್ಲಿ ಅಂದರೆ ಅಕ್ಟೋಬರ್ 05, 2011 ರಂದು ವಿಜ್ಞಾನ ಲೋಕದಿಂದ ಕಣ್ಮರೆಯಾದರು. ಅವರು ಕಣ್ಮರೆಯಾದರೂ ಸಹ ಅವರ ಶ್ರಮ,ಶ್ರದ್ಧೆ,ಶಿಸ್ತು, ಕರ್ತವ್ಯದಿಂದ ಸಾಧಿಸಿದ ಕೊಡುಗೆ ಈ ಜಗತ್ತಿನಲ್ಲಿ ಹಚ್ಚಹಸಿರಾಗಿದೆ.

ಇಂತಹ ಮೇರು ವಿಜ್ಞಾನಿ ಸ್ಟೀವ್ ಜಾಬ್ಸ್ ಸತತ ಏಳು ವರ್ಷ ಕ್ಯಾನ್ಸರ್ ರೋಗ ಕಾಡಿದರೂ ಸಹ ಅದನ್ನ ಮರೆತು ವಿಜ್ಞಾನದಲ್ಲಿ ಕಾಣಿಸಿಕೊಂಡಿದ್ದ ಪೈಕಿ ಜಗತ್ತಿನಲ್ಲಿ ಒಬ್ಬ ರಾಗಿರುತ್ತಾರೆ.

ಇಂತಹ ವಿಜ್ಞಾನಿಯ ಸಾಧನೆ ಇಂದಿನ ಯುವಕ- ಯುವತಿಯರ ಪೀಳಿಗೆಗೆ ಸ್ಪೂರ್ತಿಯಾಗಿ ಪ್ರೇರಣೆಯಾಗಲಿ ಎಂದು ಚಿಂತಿಸಿ ಈ ಲೇಖನವನ್ನು ತಮ್ಮೆಲ್ಲರ ಗಮನಕ್ಕೆ ತಂದಿರುತ್ತೇನೆ.


ಅವರ 71 ನೇ ವರ್ಷದ ಜನ್ಮದಿನಾಚರಣೆ ಸಂಬಂಧ ಅವರ ಆದರ್ಶ, ಕೊಡುಗೆ, ಸಾಧನೆ, ಅಪೇಕ್ಷೆ ರಹಿತ, ಸಮಯ ಸದ್ಬಳಕೆ, ಪ್ರಾಮಾಣಿಕತೆ ಹಾಗೂ ಕಠಿಣಶ್ರಮ, ಗುರಿ ಯೋಜನೆಯನ್ನ ಸ್ಮರಿಸಿ ಇಂದಿನ ಜಗತ್ತಿನ ಯುವ ಪೀಳಿಗೆಗೆ ಹಾಗೂ ವಿಜ್ಞಾನಿಗಳಿಗೆ ದಾರಿದೀಪವಾಗಲಿ. ಅವರು ಕಣ್ಮರೆಯಾದರೂ ಸಹ ಅವರ ಶ್ರಮ,ಶ್ರದ್ಧೆ,ಶಿಸ್ತು, ಕರ್ತವ್ಯದಿಂದ ಸಾಧಿಸಿದ ಕೊಡುಗೆ ಈ ಜಗತ್ತಿನಲ್ಲಿ ಹಚ್ಚಹಸಿರಾಗಿದೆ. ಇಂತಹ ಮೇರು ವಿಜ್ಞಾನಿ ಸ್ಟೀವ್ ಜಾಬ್ಸ್ ಸತತ ಏಳು ವರ್ಷ ಕ್ಯಾನ್ಸರ್ ರೋಗ ಕಾಡಿದರೂ ಸಹ ಅದನ್ನ ಮರೆತು ವಿಜ್ಞಾನದಲ್ಲಿ ಕಾಣಿಸಿಕೊಂಡಿದ್ದ ಪೈಕಿ ಜಗತ್ತಿನಲ್ಲಿ ಒಬ್ಬರಾಗಿರುತ್ತಾರೆ. ಇಂತಹ ವಿಜ್ಞಾನಿಯ ಸಾಧನೆಯನ್ನು ಇಂದಿನ ಯುವಕ-ಯುವತಿಯರ ಪೀಳಿಗೆಗೆ ಸ್ಪೂರ್ತಿಯಾಗಿ ಪ್ರೇರಣೆಯಾಗಲಿ ಎಂದು ಚಿಂತಿಸಿ ಈ ಲೇಖನವನ್ನು ತಮ್ಮೆಲ್ಲರ ಗಮನಕ್ಕೆ ತಂದಿರುತ್ತೇನೆ.

ಅವರ 71 ನೇ ವರ್ಷದ ಜನ್ಮದಿನಾಚರಣೆ ಸಂಬಂಧ ಅವರ ಆದರ್ಶ, ಕೊಡುಗೆ, ಸಾಧನೆ,ಅಪೇಕ್ಷೆ ರಹಿತ, ಸಮಯ ಸದ್ಬಳಕೆ, ಪ್ರಾಮಾಣಿಕತೆ ಹಾಗೂ ಕಠಿಣಶ್ರಮ, ಗುರಿ ಯೋಜನೆಯನ್ನ ಸ್ಮರಿಸಿ ಇಂದಿನ ಜಗತ್ತಿನ ಯುವ ಪೀಳಿಗೆಗೆ ಹಾಗೂ ವಿಜ್ಞಾನಿಗಳಿಗೆ ದಾರಿದೀಪವಾಗಲಿ.

---

*ಇಂದಿನ ಯುವಕರ ಜೀವನವನ್ನು ಹೊರಗಿನಿಂದ ನೋಡಿದರೆ ಅದ್ಭುತವಾಗಿ ಕಾಣುತ್ತದೆ. ಉತ್ತಮ ಶಿಕ್ಷಣ, ತಂತ್ರಜ್ಞಾನ ಸೌಲಭ್ಯಗಳು, ಜಗತ್ತಿನ ಸಂಪರ್ಕ ಎಲ್ಲವೂ ಅವರ ಕೈಯಲ್ಲಿವೆ. ಆದರೆ ಈ ಹೊಳಪಿನ ಒಳಗೆ ಒಂದು ಮೌನ ಹೋರಾಟ ನಡೆಯುತ್ತಿದೆ. ಅದು ಮಾನಸಿಕ ಒತ್ತಡದ ಹೋರಾಟ. ಹಿಂದಿನ ಪೀಳಿಗೆ ಜೀವನದ ಅವಶ್ಯಕತೆಗಳಿಗಾಗಿ ಹೋರಾಡಿದ್ದರೆ, ಇಂದಿನ ಯುವಕರು ನಿರೀಕ್ಷೆಗಳಿಗಾಗಿ ಹೋರಾಡುತ್ತಿದ್ದಾರೆ. ಪ್ರಶ್ನೆ ಈ ಒತ್ತಡಕ್ಕೆ ಕಾರಣ ಯಾರು*

# ಯುವಕರಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ





☛ ವಿಶ್ವಾಸ್.ಡಿ.ಗೌಡ

ಇಂದಿನ ಸಮಾಜದಲ್ಲಿ ಪ್ರತಿಯೊಂದು ಹೆಜ್ಜೆಯೂ ಸ್ಪರ್ಧೆಯಾಗಿದೆ. ಶಾಲೆಯಲ್ಲೇ ''ಮೊದಲ ರ್ಯಾಂಕ್'' ಎಂಬ ಒತ್ತಡ ಆರಂಭವಾಗುತ್ತದೆ. ಕಾಲೇಜು, ಉದ್ಯೋಗ, ಸಂಬಳ ಎಲ್ಲವೂ ಹೋಲಿಕೆಯ ಆಧಾರದಲ್ಲಿ ಅಳೆಯಲಾಗುತ್ತಿದೆ.

''ಅವನು ಐಎಎಸ್ ಆಗಿದ್ದಾನೆ'',
''ಅವಳು ವಿದೇಶಕ್ಕೆ ಹೋಗಿದ್ದಾಳೆ'',
''ಅವರಿಗೆ ದೊಡ್ಡ ಸಂಬಳ''

ಈ ಮಾತುಗಳು ಪ್ರೇರಣೆಯಾಗಬಹುದು, ಆದರೆ ಅನೇಕ ಯುವಕರಿಗೆ ಒತ್ತಡವಾಗುತ್ತಿವೆ.

ಜೀವನವನ್ನು ಓಟವನ್ನಾಗಿ ಮಾಡಿದಾಗ ಪ್ರಯಾಣದ ಸೌಂದರ್ಯ ಕಣ್ಮರೆಯಾಗುತ್ತದೆ. ಪ್ರತಿಯೊಬ್ಬರ ಸಾಮರ್ಥ್ಯ, ಆಸಕ್ತಿ ಮತ್ತು ಗುರಿ ವಿಭಿನ್ನ. ಆದರೆ ಎಲ್ಲರಿಗೂ ಒಂದೇ ಮಾಪಕ ಬಳಸಿದಾಗ ಆತ್ಮವಿಶ್ವಾಸ ಕುಗ್ಗುತ್ತದೆ.

**ಕುಟುಂಬದ ನಿರೀಕ್ಷೆಗಳು ಪ್ರೇರಣೆ ಅಥವಾ ಒತ್ತಡ**

ಕುಟುಂಬವು ಬೆಂಬಲದ ಆಧಾರವಾಗಬೇಕು. ಆದರೆ ಕೆಲವೊಮ್ಮೆ ಅದೇ ಒತ್ತಡದ ಮೂಲವಾಗುತ್ತದೆ.

''ನಮ್ಮ ಮಗ ವೈದ್ಯರಾಗಬೇಕು'',
''ನಮ್ಮ ಮಗಳು ಇಂಜಿನಿಯರ್ ಆಗಬೇಕು''

ಈ ಮಾತುಗಳಲ್ಲಿ ಪ್ರೀತಿ ಇದೆ. ಆದರೆ ಮಗುವಿನ ಆಸೆ ಕೇಳುವ ಮನಸ್ಸು ಇದೆಯೇ. ತಂದೆ-ತಾಯಿಯ ಅಪೂರ್ಣ ಕನಸುಗಳು ಮಕ್ಕಳ ಭುಜದ ಮೇಲೆ ಬಿದ್ದಾಗ, ಅವರ ಮನಸ್ಸು ಕುಗ್ಗುತ್ತದೆ. ಮಕ್ಕಳಿಗೆ ಮಾರ್ಗದರ್ಶನ ಬೇಕು, ನಿರ್ಬಂಧವಲ್ಲ. ಪ್ರೇರಣೆ ಬೇಕು, ಹೋಲಿಕೆ ಬೇಡ. ಬೆಂಬಲ ಬೇಕು, ನಿಯಂತ್ರಣವಲ್ಲ. ಒಬ್ಬ ಯುವಕ ತನ್ನ ಆಸೆಯನ್ನು ಹೇಳಲು ಹೆದರುವ ಪರಿಸ್ಥಿತಿ ಬಂದರೆ, ಅದು ಸಮಾಜದ ಸೋಲಲ್ಲವೇ

**ಸೋಶಿಯಲ್ ಮೀಡಿಯಾ ಹೋಲಿಕೆಯ ಕನ್ನಡಿ**

ಇಂದಿನ ಯುವಕರ ಬದುಕಿನಲ್ಲಿ ಸೋಶಿಯಲ್ ಮೀಡಿಯಾ ಪ್ರಮುಖವಾಗಿದೆ. Instagram, Facebook, YouTube ಎಲ್ಲೆಡೆ ಯಶಸ್ಸಿನ ಚಿತ್ರಗಳು. ಆದರೆ ಕಾಣಿಸುವುದು ''ಹೈಲೈಟ್'' ಮಾತ್ರ; ನಿಜ ಜೀವನದ ಹೋರಾಟ ಕಾಣುವುದಿಲ್ಲ. ಯುವಕರು ಇತರರ ಸಿದ್ಧವಾದ ಫಲಿತಾಂಶವನ್ನು ನೋಡುತ್ತಾ, ತಮ್ಮ ಆರಂಭಿಕ ಹಂತವನ್ನು ಹೋಲಿಸುತ್ತಾರೆ. ಇದರಿಂದ ಆತ್ಮವಿಶ್ವಾಸ ಕುಸಿಯುತ್ತದೆ. ಲೈಕ್ ಮತ್ತು ಕಾಮೆಂಟ್ಸ್‌ಗಳ ಮೇಲೆ ಆತ್ಮಮೌಲ್ಯವನ್ನು ಅಳೆಯುವ ಪರಿಸ್ಥಿತಿ ಮನಸ್ಸನ್ನು ಅಸ್ಥಿರಗೊಳಿಸುತ್ತದೆ. ತಾತ್ಕಾಲಿಕ ಪ್ರಶಂಸೆ ಸಿಕ್ಕರೂ, ಆಂತರಿಕ ಶಾಂತಿ ದೊರೆಯುವುದಿಲ್ಲ.

**ಪರಿಹಾರ ಯಾವುದು:** ಯುವಕರಿಗೆ ಉಪದೇಶ ಕೊಡುವುದು ಸುಲಭ. ಕೇಳುವುದು ಕಷ್ಟ. ನಾವು ಮಕ್ಕಳೊಂದಿಗೆ ಮಾತನಾಡುತ್ತಿದ್ದೇವಾ ಅಥವಾ ಕೇವಲ ಫಲಿತಾಂಶ ಕೇಳುತ್ತಿದ್ದೇವಾ ಮಾನಸಿಕ ಆರೋಗ್ಯದ ಬಗ್ಗೆ ಮುಕ್ತ ಸಂವಾದ ಅಗತ್ಯ. ವಿಫಲತೆ ಜೀವನದ ಒಂದು ಭಾಗ ಎಂಬುದನ್ನು ತಿಳಿಸಬೇಕು.

ಯಶಸ್ಸು ಅಂದರೆ ಕೇವಲ ಹೆಚ್ಚಿನ ಸಂಬಳವಲ್ಲ. ಯಶಸ್ಸು ಅಂದರೆ ಮನಶಾಂತಿ, ಆತ್ಮತೃಪ್ತಿ ಮತ್ತು ಸಂತೋಷ. ಯುವಕರು ದುರ್ಬಲರಾಗಿಲ್ಲ, ಅವರು ಅತಿಯಾದ ನಿರೀಕ್ಷೆಗಳ ಭಾರ ಹೊತ್ತಿದ್ದಾರೆ.


### ಇಂದಿನ ಮುಖ್ಯ ಪ್ರಶ್ನೆ

- **ನಾವು ಮಕ್ಕಳಿಗೆ ಬೆಂಬಲ ಕೊಡುತ್ತಿದ್ದೇವಾ ಅಥವಾ ಒತ್ತಡ**
- **ಯುವಕರಿಗೆ ನೀಡಬಹುದಾದ ಅತ್ಯಂತ ದೊಡ್ಡ ಉಡುಗೊರೆ ಎಂದರೆ ಅವರನ್ನು ಅರ್ಥಮಾಡಿಕೊಳ್ಳುವ ಮನಸ್ಸು,**
- **ಅವರನ್ನು ಕೇಳುವ ಸಮಯ, ಅವರ ಕನಸುಗಳಿಗೆ ಗೌರವ.**
- **ಅವರು ಗೆಲ್ಲಬೇಕು ಎಂದು ಹಾರೈಸುವುದಕ್ಕಿಂತ, ಅವರು ಸಂತೋಷವಾಗಿರಬೇಕು ಎಂದು ಬಯಸೋಣ.**

---


# ದಿನಕ್ಕೊಂದು ಮುಕ್ತಕ: 101

ಸಾಮಾಜಿಕ ಕಳಕಳಿ



**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ


*ಮಾತು ಬರುವುದೆಂದು ಹೇಳುತ ನೀ ನಡೆದರದು*
*ಕಾತುರದಿ ನಾಲಿಗೆಯ ಹರಿಬಿಡುತಲಿ*
*ಕೋತಿಯದು ರೀತಿಯಲಿ ನಡೆದಿರಲು ಬಿಡುವರೆನು*
*ಸೋತಿರಲು ಬಿಡದಿರಲು ಲಕ್ಷ್ಮಿ ದೇವಿ...*



**ಭಾವಾರ್ಥ:** ಮಾತು ಬರುತ್ತದೆ ಎಂದು ಇತರ ನಡೆಗಳನ್ನು ಅಣಕಿಸುತ, ಏಳಿಗೆಯನ್ನು ಸಹಿಸದೆ ಬೇಡವಾದ ವಿಚಾರಗಳನ್ನು ಮಾತನಾಡುವ ನಾಲಿಗೆಗೆ ಏನು ಹೇಳಬೇಕು. ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ ಎಂಬ ನುಡಿಯನ್ನು ಎಲ್ಲರೂ ಹೇಳುತ್ತಾರೆ. ಕೋತಿಯದು ತುಂಟಾಟದ ಕೆಲಸವೇ ಹೆಚ್ಚು. ಹಾಗೆ ಮನುಜನು ಕೆಲವೊಮ್ಮೆ ಮೈಮೇಲೆ ಪ್ರಜ್ಞೆ ಇಲ್ಲದ ರೀತಿ ನಾಲಿಗೆಯನು ಹರಿಬಿಡುವುದೇ ಹೆಚ್ಚು. ಬೇಡವಾದ ವಿಚಾರ, ಬೇಡವಾದ ವಿಷಯದ ಗಮನ ಹರಿಸುತ್ತ ವಿಚಾರವಿಲ್ಲದ ವಿಷಯ ಚರ್ಚಿಸುವುದೇ ಹೆಚ್ಚು. ಹಾಗೆಂದು ತಪ್ಪು ಮಾಡಿದ ನಾಲಿಗೆಯು ತನ್ನ ತಪ್ಪನ್ನು ಒಪ್ಪಿಕೊಂಡರು ಸಹ ಕ್ಷಮೆಯನ್ನು ಒಮ್ಮೊಮ್ಮೆ ನೀಡಬಾರದು. ಕ್ಷಮೆಯನ್ನು ನೀಡಿದರೆ ನಮ್ಮ ಆತ್ಮಸಾಕ್ಷಿಗೆ ವಿರುದ್ಧ ನಡೆದಂತೆ ಅದಕ್ಕೆ ತಕ್ಕ ಶಿಕ್ಷೆ ನೀಡಿದರೆ ಮಾತ್ರ ಅದು ಸರಿಯಾಗಿ ಮುಂದೆ ನಡೆಯುತ್ತದೆ. ಹಾಗೆಂದ ಮೇಲೆ ನಾಲಿಗೆಯನ್ನು ಕಟ್ಟು ಮಾಡಬೇಕೆ? ಅದನ್ನು ಶಿಕ್ಷಿಸಬೇಕೆ? ಏನು ಮಾಡಬೇಕು. ಎಂಬುದು ಅರಿವಿಗೆ ಬರುವುದಿಲ್ಲ ಮತ್ತೊಮ್ಮೆ ಸುಳ್ಳು ನುಡಿಯದಂತೆ ಬುದ್ದಿ ಕಲಿತರೆ ಸಾಕು ಅಷ್ಟೇ. ಯಾರೇ ಆಗಲಿ ಒಟ್ಟಾರೆ ಸುಳ್ಳು ಹೇಳಿ ಇನ್ನೊಬ್ಬರ ಜೀವನ ಹಾಳು ಮಾಡುವ ಹಕ್ಕಿಲ್ಲ ಅರಿತು ಬಾಳಿರಿ. ಮೈ ಮರೆತು ಬಾಳದಿರಿ. ಆದರೆ ಒಳ್ಳೆ ಕೆಲಸ ಮಾಡಿ ಇಲ್ಲ ದಿದ್ದರೆ ಸುಮ್ಮನಿರಿ ಸಾಕು. ಈ ಮುಕ್ತಕ ವು ಕೆಲವರ ಬೇಡಿಕೆ ಗೆ ಉದಿಸಿ ಬಂದಂತಹದಾಗಿದೆ.

---

# ರಾಮಾಯಣ



ಹನುಮಂತನು ಸುಗ್ರೀವನಿಗೆ ಹೇಳಿದ ನೀತಿ

• ಹಿಂದಿನ ಸಂಚಿಕೆಯಿಂದ

## 121 ನೆಯ ಅಧ್ಯಾಯ

ಆತನಿಗೆ ಮತ್ತಾವ ದ್ರೋಹವನ್ನಾದರೂ ಮಾಡಿದವನಲ್ಲ. ಲಕ್ಷ್ಮಣನು ಯಾವ ಕಾರಣ ಕೋಪ ಮಾಡಿಕೊಂಡಿದ್ದಾನೋ ಅದನ್ನು ತಿಳಿದು ಹೇಳಿ. ಯಾವಾಗಲೂ ನನ್ನ ಮರ್ಮವನ್ನು ತಿಳಿಯುತ್ತ ಸಮಯಬಂದಾಗ ನನ್ನನ್ನು ಕೆಡಿಸಬೇಕೆಂದಿರುವ ಶತ್ರುಗಳು ಈಗ ಭೇದವನ್ನುಂಟುಮಾಡಿದಹಾಗಿದೆ. ಇನ್ನು ನಾವು ಮುಂದೆ ಮಾಡಬೇಕಾದ ಕಾರ್ಯವೇನು? ಲಕ್ಷ್ಮಣನ ಅಭಿಪ್ರಾಯವೇನು? ಇವುಗಳನ್ನು ವಿಚಾರಿಸಿರಿ'' ಎಂದು ಹೇಳಿದನು. ಅದನ್ನು ಕೇಳಿ ಆ ಪ್ರಧಾನರಲ್ಲಿ ಮುಖ್ಯನಾದ ಹನುಮಂತನು ಒಂದು ಮುಹೂರ್ತಮಾತ್ರ ಯೋಚನೆಮಾಡಿ ಕಾರ್ಯವನ್ನು ನಿಶ್ಚಯಿಸಿ ಸಮಸ್ತ ಮಂತ್ರಿಗಳ ಮಧ್ಯದಲ್ಲಿದ್ದ ಸುಗ್ರೀವನನ್ನು ಕುರಿತು ಹೀಗೆಂದನು : ಸುಗ್ರೀವ, ಸರ್ವಥಾ ಶ್ರೀರಾಮನು ನಿನಗೆ ಮಾಡಿದ ಉಪಕಾರವನ್ನು ನೀನು ಮರತೆ. ಆತನು ಮಹಾಪರಾಕ್ರಮಿ.

ಭಯಪಟ್ಟಿದ್ದ ನಿನಗೆ ಪ್ರಿಯವನ್ನು ಮಾಡಬೇಕೆಂದು ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾಲಿಯನ್ನು ಕೊಂದನು. ಮಳೆಗಾಲ ಹೋಗಿ ಶರತ್ಕಾಲವು ಬಂದರೂ ನೀನು ಆತನ ಬಳಿಗೆ ಹೋಗದುದರಿಂದ ನಿನ್ನ ಮೇಲಿನ ಸ್ನೇಹಾತಿಶಯ ದಿಂದಲೇ ಕೋಪಮಾಡಿಕೊಂಡು ಕಳುಹಿಸಿದ್ದಾನೆ. ನೀನು ಗರ್ವದಿಂದ ಕಾಲವನ್ನರಿಯದೆ ಹೋದೆ. ಎಲ್ಲಿ ನೋಡಿದರೂ ಸಪ್ತಚ್ಛದಗಳು ಪುಷ್ಪಿತವಾಗಿವೆ. ಚಂದ್ರಸೂರ್ಯನಕ್ಷತ್ರಗಳೂ ಆಕಾಶವೂ ಮೇಘಗಳಿಂದ ಬಿಡಲ್ಪಟ್ಟು ಶುಭ್ರವಾಗಿ ಹೊಳೆಯುತ್ತಿವೆ. ನದಿಗಳೂ ಕೊಳಗಳೂ ಪ್ರವಾಹ ತಗ್ಗಿ ನಿರ್ಮಲೋದಕದಿಂದ ರಮಣೀಯವಾಗಿವೆ. ಈ ಶರತ್ಕಾಲವು ಅರಸರಿಗೆ ಶತ್ರುಗಳಮೇಲೆ ದಂಡೆತ್ತಿ ಹೋಗಲು ಯೋಗ್ಯವಾದ ಕಾಲ. ನೀನು ಸ್ತ್ರೀಲೋಲನಾಗಿ ಮದಿಸಿ ಕಾಲವನ್ನರಿಯದೆ ಹೋದೆ. ಆದಕಾರಣ ಲಕ್ಷ್ಮಣನು ಕೋಪಿಸಿಕೊಂಡು ಬಂದಿದ್ದಾನೆ. ಸ್ತ್ರೀವಿಯೋಗದಿಂದ ನೊಂದ ಮಹಾತ್ಮನಾದ ಶ್ರೀರಾಮನು ನಿಟ್ಟುಸಿರುಬಿಡುತ್ತ ನಿಷ್ಠುರವಾಗಿ ನುಡಿದನೆಂದು ಕಪಿನಾಯಕರು ಇಲ್ಲಿಗೆ ಬಂದು ಹೇಳಿದರೆ ಆದಕ್ಕಾಗಿ ಕೋಪಿಸುವುದು ನಿನಗೆ ಉಚಿತವಲ್ಲ. ಅಪರಾಧವನ್ನು ಮಾಡಿದ ನೀನು ಲಕ್ಷ್ಮಣನಿಗೆ ಕೈಮುಗಿದು ವಿನಯವಚನಗಳನ್ನು ನುಡಿಯುವುದೇ ಶ್ರೇಯಸ್ಕರ. ಲೋಕದಲ್ಲಿ ಅರಸರು ಮಂತ್ರಿಗಳನ್ನು ಕರೆದು ಕಾರ್ಯಸ್ಥಿತಿಯನ್ನು ಕೇಳಿದರೆ ತತ್ಕಾಲಕ್ಕೆ ನಿಷ್ಠುರ ವಾಗಿದ್ದರೂ ಮುಂದಕ್ಕೆ ಹಿತವಾದ ಕಾರ್ಯಸ್ಥಿತಿಯನ್ನೇ ಹೇಳಬೇಕು. ಆದಕಾರಣ ನಾನು ಭಯವಿಲ್ಲದೆ ಇಂಥ ಮಾತನ್ನು ಬಿನ್ನಹಮಾಡಿದೆನು. ಶ್ರೀರಾಮನು ಕೋಪಕೆರಳಿ ಬಿಲುಬಾಣಗಳನ್ನು ತೆಗೆದುಕೊಂಡನಾದರೆ ದೇವಾಸುರ ಗಂಧರ್ವಸಹಿತವಾದ ಸಮಸ್ತ ಜಗತ್ತನ್ನೂ ಒಂದು ಕ್ಷಣದೊಳಗೆ ಕೈ ವಶಮಾಡಿಕೊಳ್ಳಬಲ್ಲನು. ಮೊದಲು ನಿನಗೆ ಶ್ರೀರಾಮನು ಮಾಡಿದ ಉಪಕಾರವನ್ನು ಬಲ್ಲ ನೀನು ನಿನ್ನ ಸ್ತ್ರೀ ಪುತ್ರ ಜ್ಞಾತಿ ದಾಯಾದಿ ಸಹಿತನಾಗಿ ಆತನಿಗೆ ಸಾಷ್ಟಾಂಗವೆರಗಿ ಕೈಮುಗಿದು ಸಂತವಿಡುತ್ತಿರುವುದೇ ಯೋಗ್ಯ. ಪ್ರತಿಯಾಗಿ ಕೋಪವನ್ನು ಮಾಡುವುದು ನೀತಿಯಲ್ಲ. ಪತಿವ್ರತಾ ಸ್ತ್ರೀಯು ತನ್ನ ಪತಿ ಹೇಳಿದಂತೆ ಕೇಳಿಕೊಂಡು ಆತನ ವಶವಾಗಿರುವಂತೆ ನೀನು ಶ್ರೀರಾಮನ ಆಜ್ಞೆಯನ್ನು ಮೀರದೆ ಅವನು ಹೇಳಿದಂತೆ ನಡೆದುಕೊ. ದೇವೇಂದ್ರನ ಪರಾಕ್ರಮಕ್ಕೆ ಸರಿಮಿಗಿಲೆನಿಪ ಶ್ರೀರಾಮನ ಬಲವನ್ನು ನಿನ್ನ ಮನಸ್ಸೇ ಬಲ್ಲದು'' ಎಂದು ಹಿತೋಪದೇಶಮಾಡಿದನಾ?.

ಮುಂದುವರಿಯುವುದು...

---

# ಒಲೆಕ್ಟ್ರಾಗೆ ಟಿಜಿಎಸ್‌ಆರ್‌ಟಿಸಿಯಿಂದ 1,085 ಎಲೆಕ್ಟ್ರಿಕ್ ಬಸ್‌ಗಳ ಎಲ್‌ಒಐ

ಭಾರತದ ಅತಿದೊಡ್ಡ ಎಲೆಕ್ಟ್ರಿಕ್ ವಾಣಿಜ್ಯ ವಾಹನ ತಯಾರಿಕಾ ಸಂಸ್ಥೆಯಾಗಿರುವ ಒಲೆಕ್ಟ್ರಾ ಗ್ರೀನ್ ಟೆಕ್ ಲಿಮಿಟೆಡ್‌ಗೆ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಟಿಜಿಎಸ್‌ಆರ್‌ಟಿಸಿ) 1,085 ಎಲೆಕ್ಟ್ರಿಕ್ ಬಸ್‌ಗಳ ಸೇವೆಗಾಗಿ (ಎಲ್‌ಒಐ) ಒಪ್ಪಂದ ಮಾಡಿಕೊಂಡಿದೆ.

ಪಿಎಂ ಇ-ಡ್ರೈವ್ ಯೋಜನೆಯಡಿ ಈ ಆದೇಶವನ್ನು ಕನ್ವರ್ಜೆನ್ಸ್ ಎನರ್ಜಿ ಸರ್ವೀಸಸ್ ಲಿಮಿಟೆಡ್ (ಸಿಇಎಸ್ ಎಲ್) ಮೂಲಕ ಇವೇ ಟ್ರಾನ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಈ ಮಹತ್ವದ ಒಪ್ಪಂದವನ್ನು ಹಸ್ತಾಂತರ ಮಾಡಲಾಗಿದೆ.

ದೇಶದ ವಿವಿಧ ನಗರಗಳಲ್ಲಿ ಎಲೆಕ್ಟ್ರಿಕ್ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸುವುದು ಮತ್ತು ತ್ವರಿತಗೊಳಿಸುವುದು ಈ ಯೋಜನೆಯ ಉದ್ದೇಶವಾಗಿದೆ.ಈ ಬಸ್‌ಗಳನ್ನು ಹೈದರಾಬಾದ್‌ನಲ್ಲಿ ಹಂತ ಹಂತವಾಗಿ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದ್ದು, ಇದರಿಂದ ನಗರದ ಸ್ವಚ್ಛ, ದಕ್ಷ ಹಾಗೂ ಶಾಶ್ವತ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಮತ್ತಷ್ಟು ಬಲ ನೀಡಲಿವೆ.

ಹೈದರಾಬಾದ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಮತ್ತು ಎಂ.ಇ.ಐ.ಎಲ್ ಅಂಗ ಸಂಸ್ಥೆಯಾಗಿರುವ ಒಲೆಕ್ಟ್ರಾ, ದೇಶದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ವಿಭಾಗದಲ್ಲಿ ನಿರಂತರವಾಗಿ ಅಗ್ರ ಸ್ಥಾನ ಕಾಯ್ದುಕೊಂಡಿದೆ. ಕಳೆದ ಹಣಕಾಸು ವರ್ಷ ಹಾಗೂ ಇತ್ತೀಚಿನ ಅವಧಿಯಲ್ಲಿ ಮಾರುಕಟ್ಟೆ ಹಂಚಿಕೆಯಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ದೇಶಾದ್ಯಂತ 3,600ಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳನ್ನು ಈಗಾಗಲೇ ಸಂಚಾರಕ್ಕೆ ಇಳಿಸಿರುವ ಸಂಸ್ಥೆಗೆ 10,000ಕ್ಕೂ ಅಧಿಕ ವಾಹನಗಳ ಸರಬರಾಜು ಆದೇಶ ಹೊಂದಿದೆ. ಮತ್ತು 500 ಮಿಲಿಯನ್ ಹಸಿರು ಕಿಲೋ ಮೀಟರ್‌ಗಳಿಗಿಂತ ಹೆಚ್ಚು ಸಂಚಾರ ಸಾಧಿಸಿರುವುದು ಸಂಸ್ಥೆಯ ಪ್ರಮುಖ ಸಾಧನೆಯಾಗಿದೆ.

''ಪಿಎಂ ಇ-ಡ್ರೈವ್ ಯೋಜನೆಯಡಿ ದೊರೆತಿರುವ ಈ ಆದೇಶ ನಮ್ಮ ಸಂಸ್ಥೆಗೆ ಮಹತ್ವದ ಘಟ್ಟವಾಗಿದೆ. 'ಮೇಕ್ ಇನ್ ಇಂಡಿಯಾ' ದೃಷ್ಟಿಕೋನಕ್ಕೆ ನಮ್ಮ ಬದ್ಧತೆ ಹಾಗೂ ವಿಶ್ವಮಟ್ಟದ ಎಲೆಕ್ಟ್ರಿಕ್ ಬಸ್ ನಿರ್ಮಾಣದ ಸಂಕಲ್ಪಕ್ಕೆ ಇದು ಬಲ ತುಂಬಿದೆ. ತೆಲಂಗಾಣದಲ್ಲಿ ಸುಧಾರಿತ, ವಿಶ್ವಾಸಾರ್ಹ ಹಾಗೂ ಸ್ವದೇಶಿ ತಂತ್ರಜ್ಞಾನಾಧಾರಿತ ಸಾರಿಗೆ ಪರಿಹಾರಗಳನ್ನು ಒದಗಿಸಲು ನಾವು ಹೆಮ್ಮೆಪಡುತ್ತೇವೆ. ಟಿಜಿಎಸ್‌ಆರ್‌ಟಿಸಿಯೊಂದಿಗೆ ಕೈಜೋಡಿಸಿ ನಾಗರಿಕರ ನಿರೀಕ್ಷೆಗೆ ತಕ್ಕಂತೆ ಆರಾಮದಾಯಕ ಹಾಗೂ ಪರಿಸರ ಸ್ನೇಹಿ ಸಾರ್ವಜನಿಕ ಸಾರಿಗೆ ಒದಗಿಸುವೆವು ಎಂದು ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ವಿ. ಮಹೇಶ್ ಬಾಬು ಅವರು ಈ ಒಪ್ಪಂದದ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಆದೇಶದಡಿಯಲ್ಲಿ 12 ಮೀಟರ್ ಲೋ-ಫ್ಲೋರ್ ವಿನ್ಯಾಸದ ಎಸಿ ಮತ್ತು ನಾನ್-ಎಸಿ ಮಾದರಿಯ ಬಸ್‌ಗಳನ್ನು ಪೂರೈಸಲಾಗುತ್ತದೆ.

ಭಾರತೀಯ ರಸ್ತೆ ಪರಿಸ್ಥಿತಿಗೆ ಹೊಂದುವಂತೆ ವಿನ್ಯಾಸಗೊಳಿಸಲಾದ ಈ ಬಸ್‌ಗಳಲ್ಲಿ ಮುಂಭಾಗ ಹಾಗೂ ಹಿಂಭಾಗ ಏರ್ ಸಸ್ಪೆನ್ಷನ್ ವ್ಯವಸ್ಥೆ ಇರಲಿದೆ.

ಪ್ರತಿ ಬಸ್‌ನಲ್ಲಿ 250 ಕಿಮೀಕ್ಕೂ ಅಧಿಕ ಓಟದ ಸಾಮರ್ಥ್ಯ ಹೊಂದಿರುವ ಲಿಥಿಯಂ-ಐಯಾನ್ ಬ್ಯಾಟರಿ ಅಳವಡಿಸಲಾಗುತ್ತದೆ. ಸುಮಾರು 45 ನಿಮಿಷಗಳಲ್ಲಿ ಅವಕಾಶ ಚಾರ್ಜಿಂಗ್ ಸೌಲಭ್ಯ ಇರುವುದರಿಂದ ಕಾರ್ಯಾಚರಣಾ ದಕ್ಷತೆ ಹೆಚ್ಚಲಿದೆ. ವ್ಹೀಲ್‌ಚೇರ್ ಸೌಲಭ್ಯ ಕೂಡ ಒದಗಿಸಲಾಗುತ್ತದೆ.




---



# ಸಿಸೇರಿಯನ್ ಎದೆಹಾಲು ಉತ್ಪತ್ತಿ ತಡವಾಗುತ್ತಾ?

ತಾಯಿಯಾಗುವುದು ಪ್ರತಿಯೊಬ್ಬ ಮಹಿಳೆಯ ಜೀವನದಲ್ಲಿ ಒಂದು ವಿಶೇಷ ಕ್ಷಣವಾಗಿದೆ, ಆದರೆ ಹೆರಿಗೆಯ ವಿಧಾನವು ಆಗಾಗ್ಗೆ ಹೊಸ ಕಳವಳಗಳನ್ನು ಹುಟ್ಟುಹಾಕುತ್ತದೆ.

ವಿಶೇಷವಾಗಿ ಸಿಸೇರಿಯನ್ ಹೆರಿಗೆಯ ಸಂದರ್ಭಗಳಲ್ಲಿ, ಹೆಚ್ಚಿನ ತಾಯಂದಿರು ಶಸ್ತ್ರಚಿಕಿತ್ಸೆಯ ನಂತರ ತಕ್ಷಣವೇಎದೆ ಹಾಲು ಉತ್ಪತ್ತಿಯಾಗುತ್ತದೆಯೇ ಅಥವಾ ಅದು ವಿಳಂಬವಾಗುತ್ತದೆಯೇ ಎಂದು ಚಿಂತಿತರಾಗುತ್ತಾರೆ. ಆರಂಭಿಕ ದಿನಗಳಲ್ಲಿ ಮಗುವಿಗೆ ಸಾಕಷ್ಟು ಹಾಲುಣಿಸಲು ಸಾಧ್ಯವಾಗದೇ ಇರಬಹುದೇ ಎಂದು ಕಳವಳಗೊಳ್ಳುತ್ತಾರೆ. ಸಿಸೇರಿಯನ್ ಹೆರಿಗೆಯ ನಂತರವೂ ಹಾಲುಣಿಸುವುದು ಸಂಪೂರ್ಣವಾಗಿ ಸಾಧ್ಯ ಎಂದು ತಜ್ಞರು ಹೇಳುತ್ತಾರೆ. ಕೆಲವು ಸಂದರ್ಭಗಳಲ್ಲಿ, ಎದೆ ಹಾಲು ಉತ್ಪಾದನೆಯಲ್ಲಿ ಸ್ವಲ್ಪ ವಿಳಂಬವಾಗಬಹುದು. ಇದು ಸಾಮಾನ್ಯವಾಗಿದ್ದು, ವೈದ್ಯರ ಮಾರ್ಗದರ್ಶನದೊಂದಿಗೆ ಇದನ್ನು ಸರಿಪಡಿಸಬಹುದು.

**ಸಿಸೇರಿಯನ್ ನಂತರ ತಕ್ಷಣವೇ ಹಾಲುಣಿಸುವಿಕೆಯನ್ನು ಪ್ರಾರಂಭಿಸಬಹುದೇ?**

ತಾಯಿ ಮತ್ತು ಮಗು ಇಬ್ಬರೂ ಸ್ಥಿರವಾಗಿದ್ದರೆ, ಶಸ್ತ್ರಚಿಕಿತ್ಸೆಯ ನಂತರ ತಕ್ಷಣವೇ ಹಾಲುಣಿಸುವಿಕೆಯನ್ನು ಪ್ರಾರಂಭಿಸಬಹುದು ಎಂದು ವೈದ್ಯರು ಹೇಳುತ್ತಾರೆ.

ಅನೇಕ ಆಸ್ಪತ್ರೆಗಳು ಹೆರಿಗೆಯ ನಂತರ ತಾಯಿ ಮತ್ತು ಮಗುವಿನ ನಡುವೆ ಚರ್ಮದಿಂದ ಚರ್ಮಕ್ಕೆ ಸಂಪರ್ಕವನ್ನು ಅನುಮತಿಸುತ್ತವೆ, ಇದರಿಂದಾಗಿ ಮಗುವನ್ನು ತಾಯಿಯ ಎದೆಯ ವಿರುದ್ಧ ಹಿಡಿದು ಹಾಲುಣಿಸಲು ಪ್ರಾರಂಭಿಸಬಹುದು. ತಾಯಿಗೆ ಸಾಮಾನ್ಯ ಅರಿವಳಿಕೆ ನೀಡಿದ್ದರೆ, ಪ್ರಜ್ಞೆ ಮರಳಿದ ನಂತರ ಹಾಲುಣಿಸುವಿಕೆಯನ್ನು ಪ್ರಾರಂಭಿಸಬಹುದು.

**ಹಾಲಿನ ಪೂರೈಕೆ ಹೆಚ್ಚಿಸಲು**

ಹಾಲು ಪೂರೈಕೆಗೆ ಹೆಚ್ಚುವರಿ ಬೆಂಬಲ ಅಗತ್ಯವಿರುವ ಕೆಲವು ಸಂದರ್ಭಗಳಲ್ಲಿ, ಗ್ಯಾಲಕ್ಟಾಗೋಗ್ ಗಳನ್ನು ಪರಿಗಣಿಸಬಹುದು. ಇವುಗಳಲ್ಲಿ ಮೆಂತ್ಯ, ಫೆನ್ನೆಲ್ ಮತ್ತು ಇತರ ಸಾಂಪ್ರದಾಯಿಕ ಹಾಲುಣಿಸುವಿಕೆಯನ್ನು ಬೆಂಬಲಿಸುವ ಆಹಾರಗಳಂತಹ ನೈಸರ್ಗಿಕ ಆಹಾರ ಆಯ್ಕೆಗಳು ಮತ್ತು ವೈದ್ಯಕೀಯವಾಗಿ ಸೂಚಿಸಲಾದ ಔಷಧಿಗಳು ಸೇರಿವೆ. ಆದಾಗ್ಯೂ, ಗ್ಯಾಲಕ್ಟಾಗೋಗ್‌ಗಳು ಆಗಾಗ್ಗೆ ಹಾಲುಣಿಸುವಿಕೆ ಮತ್ತು ಸರಿಯಾದ ಹಾಲುಣಿಸುವಿಕೆಯನ್ನು ಎಂದಿಗೂ ಬದಲಾಯಿಸಬಾರದು, ಇವು ಹಾಲು ಉತ್ಪಾದನೆಯ ಅತ್ಯಂತ ಪರಿಣಾಮಕಾರಿ ಉತ್ತೇಜಕಗಳಾಗಿವೆ.

ಕೆಲವು ಸಂಶೋಧನೆಯ ಪ್ರಕಾರ,ಸಿಸೇರಿಯನ್ ನಂತರ ಹಾಲುಣಿಸುವಿಕೆಯು ವಿಳಂಬವಾಗಬಹುದು. ಇದು ಹಾರ್ಮೋನುಗಳ ಬದಲಾವಣೆಗಳಲ್ಲಿ ಸ್ವಲ್ಪ ಅಡಚಣೆ, ಶಸ್ತ್ರಚಿಕಿತ್ಸೆಯ ನಂತರದ ನೋವು, ಔಷಧಿಗಳ ಪರಿಣಾಮಗಳು ಅಥವಾ ತಾಯಿ ಮತ್ತು ಮಗುವನ್ನು ಸ್ವಲ್ಪ ಸಮಯದವರೆಗೆ ಬೇರ್ಪಡಿಸುವುದರಿಂದಾಗಿರಬಹುದು.

# ಜಿಲ್ಲೆಯ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಪರಂಪರೆ ಸಾರಿದ ಫಲಪುಷ್ಪ ಪ್ರದರ್ಶನ

## ಭದ್ರಾ ಯೋಜನೆಯಿಂದ ಕೆರೆಗಳಿಗೆ ನೀರು ಹರಿಯುವುದರಿಂದ ರೈತರಿಗೆ ಉತ್ತಮ ಬೆಳೆ ಬೆಳೆಯಲು ಸಹಕಾರಿ

• **ಉದಯವಾಹಿನಿ, ಚಿತ್ರದುರ್ಗ**

ಜಿಲ್ಲೆಯ ಇತಿಹಾಸ, ಸಂಸ್ಕೃತಿ ಹಾಗೂ ಸಾಹಿತ್ಯ ಪರಂಪರೆಯನ್ನು ಸಾರುವಲ್ಲಿ 33ನೇ ಫಲಪುಷ್ಪ ಪ್ರದರ್ಶನ ಯಶಸ್ವಿಯಾಗಿದೆ ಎಂದು ಎಂದು ಸಣ್ಣಕೈಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಹೇಳಿದರು. ನಗರದ ವಿ.ಪಿ. ಬಡಾವಣೆಯ ಜಿಲ್ಲಾ ತೋಟಗಾರಿಕೆ ಕಚೇರಿ ಆವರಣದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಫಲ-ಪುಷ್ಪ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಫಲಪುಷ್ಪ ಪ್ರದರ್ಶನದಲ್ಲಿ ರಾಜ್ಯದ ಮತ್ತು ಜಿಲ್ಲೆಯ ಸಾಧಕರ ಪರಿಚಯವನ್ನು ಸಾರ್ವಜನಿಕರಿಗೆ ಮಾಡಿಕೊಡಲಾಗುತ್ತಿದೆ. ಜಿಲ್ಲೆಯ, ನಾಡಿನ ಹೆಸರಾಂತ ಸಾಹಿತಿ ಬಿ.ಎಲ್.ವೇಣು ಅವರ ಪ್ರತಿಮೆ, ಅವರ ಕಾದಂಬರಿ, ಕೃತಿಗಳು, ಕೊಡುಗೆಗಳನ್ನು ಕಲ್ಲಿನಲ್ಲಿ ಚಿತ್ರಿಸಿರುವುದು ಆಕರ್ಷಣೀಯವಾಗಿದೆ. ಹೂವಿನಿಂದಲ್ಲಿ ನಾಯಕನಹಟ್ಟಿ ಶ್ರೀ ಕ್ಷೇತ್ರದ ಶ್ರೀ ತಿಪ್ಪೇರುದ್ರಸ್ವಾಮಿ ಹೊರ ಮಠ, ಒಳ ಮಠ ಸುಂದರವಾಗಿದೆ. ಇನ್ನೂ ಐತಿಹಾಸಿಕ ಒನಕೆ ಓಬವ್ವ, ಸಾಲುಮರದ ತಿಮ್ಮಕ್ಕನ ಚಿತ್ರಗಳು ಗಿಡ ಮರಗಳನ್ನು ಪ್ರೀತಿಯನ್ನು ತೋರಿಸುತ್ತಿದೆ ಎಂದರು. ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನಕ್ಕೆ ಸಿಎಂ, ಡಿಸಿಎಂ ಅವರಿಗೆ ಮನವಿ ಮಾಡಲಾಗಿದೆ. ಭದ್ರಾ ಯೋಜನೆಯಿಂದ ಕೆರೆಗಳಿಗೆ ನೀರು ಹರಿಯುವುದರಿಂದ ರೈತರಿಗೆ ಉತ್ತಮ ಬೆಳೆ ಬೆಳೆಯಲು ಸಹಕಾರಿಯಾಗಲಿದೆ. ಜಿಲ್ಲೆಯ ಜನರ ಕನಸಾಗಿರುವ ಭದ್ರಾ ನೀರನ್ನು ಮಾರ್ಚ್ ಅಂತ್ಯದೊಳಗೆ ಪ್ರಾಯೋಗಿಕವಾಗಿ ಹರಿಸಲಾಗುವುದು ಎಂದು ಶಾಸಕ ಟಿ.ರಘುಮೂರ್ತಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ, ತೋಟಗಾರಿಕೆ ಜಂಟಿ ನಿರ್ದೇಶಕಿ ಜಿ.ಸವಿತಾ, ತೋಟಗಾರಿಕೆ ಜಂಟಿ ಕಾರ್ಯದರ್ಶಿ ಗಿರೀಶ್, ಹಿರಿಯ ಸಹಾಯಕ ನಿರ್ದೇಶಕ ತೋಟಯ್ಯ, ಜಿ.ಪಂ. ಮಾಜಿ ಸದಸ್ಯರಾದ ತಿಪ್ಪೇಸ್ವಾಮಿ, ಬಾಬುರೆಡ್ಡಿ, ತೋಟಗಾರಿಕೆ ಸಂಘದ ರೀನಾ ವೀರಭದ್ರಪ್ಪ, ಸುಮನ ಅಂಗಡಿ, ಸುಮನ ತಿಮ್ಮಾರೆಡ್ಡಿ, ಶ್ವೇತಾ, ಸೇರಿದಂತೆ ಮತ್ತಿತರರು ಇದ್ದರು




ಉದಯವಾಹಿನಿ ಚಿತ್ರ

> ರೈತರು ಬೆಳೆದಿರುವ ಬೆಳೆಗಳಲ್ಲಿ ಉತ್ತಮವಾಗಿ ಬೆಳೆದಿರುವ ಆಯ್ದ ಬೆಳೆಗಳ ಪ್ರದರ್ಶನದಿಂದ ರೈತರಿಗೆ ಪ್ರೇರಣೆಯಾಗಲಿದೆ. ಇಂತಹ ಮೇಳಗಳಿಂದ ರೈತರಿಗೆ ಹೊಸ ಪ್ರಯೋಗ ಮಾಡಲು ಅನುಕೂಲವಾಗಲಿದೆ. ಫಲಪುಷ್ಪ ಜೊತೆಗೆ ವಿವಿಧ ಜಾತಿಯ ಹೂ, ಹಣ್ಣು, ಅಲಂಕಾರಿಕ ಗಿಡಗಳನ್ನು ನೋಡಬಹುದಾಗಿದೆ. ಮೂರು ದಿನವು ಸಹ ಜಿಲ್ಲೆಯ ವಿವಿಧ ಭಾಗಗಳಿಂದ ರೈತರು, ಮಹಿಳೆಯರು, ಮಕ್ಕಳು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಫಲ ಪುಷ್ಪ ಪ್ರದರ್ಶನ ಕಣ್ತುಂಬಿಕೊಂಡಿದ್ದಾರೆ.
> – ಟಿ.ರಘುಮೂರ್ತಿ , ಶಾಸಕ

> ಒತ್ತಡದ ಬದುಕಿನಲ್ಲಿ ಇಂತಹ ಫಲಪುಷ್ಪ ಪ್ರದರ್ಶನ ಜನರ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ. ಮದಕರಿ ನಾಯಕ, ಒನಕೆ ಓಬವ್ವ ನಾಡಿನಲ್ಲಿ ಈ ಮೇಳದಲ್ಲಿ ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ ಕಲಾಕೃತಿಯ ಒಳಮಠ, ಹೊರ ಮಠ ಇತಿಹಾಸ ಸಾರುತ್ತಿದೆ. ಸಾರ್ವಜನಿಕರಲ್ಲಿ ಫಲಪುಷ್ಪ ಪ್ರದರ್ಶನ ಸಂತಸವನ್ನು ಉಂಟು ಮಾಡಿದೆ.
> -ಕೆ.ಎಸ್.ನವೀನ್, ವಿಧಾನ ಪರಿಷತ್ ಸದಸ್ಯ

# ಶಿಕ್ಷಣದ ಮಾರ್ಗ ತೋರಿದ ಸಂತ ಸೇವಾಲಾಲ್

• **ಉದಯವಾಹಿನಿ, ಯಲಬುರ್ಗಾ**



ಉದಯವಾಹಿನಿ ಚಿತ್ರ

ಸಂತ ಸೇವಾಲಾಲ್ ಅವರು ತಮ್ಮ ಪವಾಡಗಳ ಮೂಲಕ ಜನ ಮನದಲ್ಲಿ ಗುರುವಿನ ಸ್ಥಾನ ಪಡೆದವರು ಬಂಜಾರ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಶಿಕ್ಷಣದ ಮಾರ್ಗ ತೋರಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಮಾಜಿ ತಾಪಂ. ಉಪಾಧ್ಯಕ್ಷರು ಕಳಕಪ್ಪ ಕಂಬ್ಳಿ ಹೇಳಿದರು.

ಪಟ್ಟಣದ ಬಯಲು ರಂಗ ಮಂದಿರ ಆಭರಣದಲ್ಲಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘ, ತಾಲ್ಲೂಕ ಗೊರಸೇನಾ ಸಂಘ ಯಲಬುರ್ಗಾ ತಾಲ್ಲೂಕ ಬಂಜಾರ ನೌಕರರ ಸಂಘ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶ್ರೀಸಂತ ಸೇವಾಲಾಲ್ ಮಹಾರಾಜರ 287ನೇ ಜಯಂತೋತ್ಸವ, ಭೋಗ ಪೂಜಾ ಜಾಗೃತಿ ಸಭೆ, ಬಂಜಾರ ಸಂಸ್ಕೃತಿಕ ಮೆರವಣಿಗೆ ಸಂತ ಸೇವಾಲಾಲ್ ಜಯಂತಿ ಹಮ್ಮಿಕೊಳ್ಳಲಾಗಿತ್ತು.

ಕೊಟ್ಟೂರ ಶಿವಪ್ರಕಾಶ್ ಮಹಾರಾಜರು ಮಾತನಾಡಿ ಬಂಜಾರರ ಆರಾಧ್ಯ ದೈವ, ಕುಲಗುರು, ನಮ್ಮ ಭಾಷೆಯ ನೆರಳು, ಕ್ರಾಂತಿಕಾರಿ ಆದಂತಹ 287ನೇ ಸಂತ ಸೇವಾಲಾಲ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. 11ನೇ ಶತಮಾನದ ಕಾಲಘಟ್ಟದಲ್ಲಿ ಅಂಧಕಾರದಲ್ಲಿದ್ದ ಬಂಜಾರ ಸಮಾಜಕ್ಕೆ ಮಾರ್ಗದರ್ಶಕರು ಇಲ್ಲದಂತಹ ವೇಳೆಯಲ್ಲಿ ಹುಣ್ಣಿಮೆ ಚಂದ್ರನಂತೆ ಜನಾಂಗಕ್ಕೆ ದಾರಿ ದೀಪವಾಗಿ ಬಂಜಾರ ಜನಾಂಗದ ಆಶಾಕಿರಣವಾಗಿ ಜನ್ಮ ತಾಳಿದವರು ಸಂತ ಸೇವಾಲಾಲ್. ಅವರು ಒಬ್ಬ ಆರ್ಥಿಕ ತಜ್ಞ, ಎಂದು ಹೇಳಿದರು.

ಬಂಜಾರ ಧರ್ಮದ ಗುರುಗಳು ಕೊಪ್ಪಳ ಹೇಮಗಿರಿ ಗೋಸಾವಿ ಬುವನವರು ಮಾತನಾಡಿದರು. ಹಿಂದುಳಿದ ವಿದ್ಯವಂತರು ಇದ್ದಾರೆ ಆದರೆ ಈ ಸಮಾಜ ಯಾರಿಗೂ ನೌಕರಿ ಇಲ್ಲಾ ಬಂಜಾರ ಸಮಾಜ ಬಂಗಾರ ಸಮಾಜ ಇದು ಇದೆ ರೀತಿಯ ಎಲ್ಲರೂ ಸಹಕಾರ ಬೇಕು ಸಾಕ್ಷಿ ರೂಪಾಯಿ ಇದೆ ವರದಕ್ಷಿಣೆ ಕೊಡುವುದಿಲ್ಲ ಈಸಿಕೊಳ್ಳುದಿಲ್ಲ ಈ ಸಮಾಜ ಎಂದರು.

ಸಂತ ಸೇವಾಲಾಲ್ ಅವರ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಸ್ತಹಿಕವಾಗಿ ಮಾತನಾಡಿದ ಸುರೇಶ್ ಬಳೂಟಗಿ ಗೋರ್ ಸೇನಾ ಅವರು ಮಾತನಾಡಿ ವೈವಿಧ್ಯಯ ಏಕತೆ ಸಾರಿದ ಮಹನೀಯರಲ್ಲಿ ಸಂತ ಸೇವಾಲಾಲ್ ಪ್ರಮುಖರು. ಬಂಜಾರ ಸಮುದಾಯದಲ್ಲಿ ಹುಟ್ಟಿ ಸಂತರಾಗಿ ತಮ್ಮ ಸಮುದಾಯದ ಪ್ರಗತಿಗೆ ಶ್ರಮಿಸಿದವರು. ಸಮುದಾಯದಲ್ಲಿ ದುಡಿಮೆ, ಜ್ಞಾನಾರ್ಜನೆ, ಸ್ವಾಭಿಮಾನ, ಸ್ವಾವಲಂಭನೆ ಭಿತ್ತಿದ ಮಹಾನ್ ಸಂತ. ಅಂತಹ ಮಹಾನ್ ಸಂತರ ತತ್ವ ಸಿದ್ಧಾಂತವನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

# ಕನ್ನಡಿಗರು ನಾಡು-ನುಡಿಯ ಹಿರಿಮೆ ಎತ್ತಿ ಹಿಡಿಬೇಕು


• **ಉದಯವಾಹಿನಿ, ಯಡ್ರಾಮಿ**

ನೆಲ-ಜಲ, ಭಾಷೆ, ಸಾಹಿತ್ಯ, ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹಿಡಿಯುವುದು ಕನ್ನಡಿಗ ಆದ್ಯ ಕರ್ತವ್ಯವಾಗಿದೆ ಎಂದು ಯಡ್ರಾಮಿ ತಾಲ್ಲೂಕು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಅಮೃತ ಡಿ.ದೊಡ್ಡನಿ ಅಭಿಪ್ರಾಯಪಟ್ಟರು. ಪಟ್ಟಣದ ಪಬ್ಲಿಕ್ ಶಾಲೆ ಆವರಣದಲ್ಲಿ ಏರ್ಪಡಿಸಿದ್ದ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಅವರು, ನಾಡು-ನುಡಿ, ಸಾಹಿತ್ಯ ಉಳಿಸಲು ಪ್ರತಿಯೊಬ್ಬರು ಶ್ರಮ ವಹಿಸಬೇಕಾಗುತ್ತದೆ. ಕನ್ನಡ ಸಾಹಿತ್ಯ ಕ್ಷೇತ್ರದ ಬೆಳವಣಿಗೆ, ಪರಿಷತ್ತಿನಿ ಕಾರ್ಯ ಚಟುವಟಿಕಗಳಿಗಾಗಿ ತಾಲ್ಲೂಕು, ಜಿಲ್ಲಾ ಘಟಕಕ್ಕೆ ಸರ್ಕಾರ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು. ಪಟ್ಟಣದ ಪ್ರಮುಖ ರಸ್ತೆಗಳಿಗೆ ಸಾಹಿತಿಗಳು, ಸಂಗೀತಗಾರರು, ಹೋರಾಟಗಾರರ ಹೆಸರಿಡಬೇಕು, ಪಟ್ಟಣದಲ್ಲಿ ಬಸ್ ಡಿಪೋ, ಪ್ರಜಾಸೌಧ ಸೇರಿದಂತೆ ತಾಲ್ಲೂಕಿನ ಬಹುತೇಕ ಕಡೆ ಮರಿಚೀಕೆಯಾಗಿರುವ ಸೌಕರ್ಯಗಳು ಒದಗಿಸಬೇಕು. ಮಲ್ಲಾಬಾದ್ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಬೇಕು. ಕನ್ನಡ ಭವನ, ಕಡಕೋಳ ಮಡಿವಾಳಪ್ಪನವರ ಹೆಸರಿನಲ್ಲಿ ಸೂಫಿ ಸಾಹಿತ್ಯ ಅಧ್ಯಯನ, ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕು ಎದು ಆಗ್ರಹಿಸಿದರು. ನಂತರ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಮಾತನಾಡಿ, ಜೀವನಕ್ಕೆ ಇಂಗ್ಲಿಷ್ ಭಾಷೆ ಅಗತ್ಯವಿರಬಹುದು.

ಆದರೆ, ನಮ್ಮ ಮಾತೃಭಾಷೆ ಕನ್ನಡ ಮರೆಯಬಾರದು. ಆಧುನಿಕತೆಯ ಪರಿಣಾಮದಿಂದ ಕನ್ನಡ ಭಾಷೆ ಬಳಕೆ ಕಡಿಮೆಯಾಗುತ್ತಿದೆ. ತಂದೆ ತಾಯಿಗಳು ಮನೆಯಲ್ಲೇ ಮಕ್ಕಳಿಗೆ ಕನ್ನಡ ಬಳಸಲು ಪ್ರೇರೆಪಿಸಬೇಕು, ಜತೆಗೆ ಎಲ್ಲರೂ ಕನ್ನಡ ಉಳಿಸಿ ಬೆಳೆಸಬೇಕು ಎಂದು ಹೇಳಿದರು.

### ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು

- ಎಲ್‌ಬಿಕೆ ಅಲ್ಲಾಳ ಕವಿ ಹೆಸರಿನಿಂದ ಗ್ರಂಥಾಲಯ ನಿರ್ಮಾಣ
- ರಾಮತೀರ್ಥವನ್ನು ಪ್ರಾಚ್ಯ ವಸ್ತು ಇಲಾಖೆಯಿಂದ ಕಾಯಕಲ್ಪ ಕಲ್ಪಿಸಬೇಕು
- ಮಲ್ಲಾಬಾದ್ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಬೇಕು
- ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸರ್ದಾರ ಶರಣಗೌಡ ವೃತ್ತದ ವರೆಗಿನ ರಸ್ತೆಗೆ ಮಡಿವಾಳೇಶ್ವರ ಮಾರ್ಗವೆಂದು ನಾಮಕರಣ ಮಾಡಬೇಕು.



ಉದಯವಾಹಿನಿ ಚಿತ್ರ

# ಗೋವಾಕ್ಕೆ ಸಾಗಿಸುತ್ತಿದ್ದ 50 ಸಾವಿರ ಲೀಟರ್ ಸ್ಪಿರಿಟ್ ಎರಡು ಲಾರಿ ವಶ

• **ಉದಯವಾಹಿನಿ, ಕಾರವಾರ**

ಕಾರವಾರ ಮತ್ತು ದಾಂಡೇಲಿ ಅಬಕಾರಿ ಇಲಾಖೆ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ದಾವಣಗೆರೆಯಿಂದ ಗೋವಾಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ ಬರೋಬ್ಬರಿ 50 ಸಾವಿರ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ತುಂಬಿದ್ದ ಎರಡು ಟ್ಯಾಂಕರ್ ಲಾರಿಗಳನ್ನು ವಶಪಡಿಸಿಕೊಂಡಿದ್ದಾರೆ.

ಜೋಯಿಡಾ ತಾಲ್ಲೂಕಿನ ಅನಮೋಡ್‌ಚೆಕ್‌ಪೋಸ್ಟ್ ಬಳಿ ಖಚಿತ ಮಾಹಿತಿ ಮೇರೆಗೆ ಈ ದಾಳಿ ನಡೆದಿದ್ದು, ವಶಪಡಿಸಿಕೊಂಡ ಸ್ಪಿರಿಟ್ ಮೌಲ್ಯ ಸುಮಾರು 35 ರಿಂದ 40 ಲಕ್ಷ ರೂಪಾಯಿ ಎಂದು ಅಂದಾಜಿಸಲಾಗಿದೆ.

ಟ್ಯಾಂಕರ್ ಲಾರಿಗಳು ಸೇರಿದಂತೆ ಒಟ್ಟು 90 ಲಕ್ಷ ರೂ. ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಲಾಗಿದ್ದು, ಪ್ರಕರಣದ ಇಬ್ಬರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕೈಗಾರಿಕಾ ಉದ್ದೇಶದ ನೆಪದಲ್ಲಿ ದಾವಣಗೆರೆಯ ಡಿಸ್ಟಿಲರಿಯಿಂದ ಗೋವಾಕ್ಕೆ ಸಾಗಿಸಲಾಗುತ್ತಿದ್ದ ಈ ಸ್ಪಿರಿಟ್ ಬಳಸಿ, ನಕಲಿ ಮದ್ಯ ತಯಾರಿಸುವ ಬೃಹತ್ ಜಾಲವೊಂದು ಕಾರ್ಯಾಚರಿಸುತ್ತಿತ್ತು ಎನ್ನುವುದು ತನಿಖೆಯಿಂದ ಬಯಲಾಗಿದೆ.

# ಜನವಿರೋಧಿ ಸಮಾವೇಶ ಮಾರ್ಚ್ 1ರಂದು

• **ಉದಯವಾಹಿನಿ, ಹಗರಿಬೊಮ್ಮನಹಳ್ಳಿ**



ಪಟ್ಟಣದಲ್ಲಿ ಮಾರ್ಚ್ 1ರಂದು ಜೆಡಿಎಸ್ ಪಕ್ಷದಿಂದ ಬೃಹತ್ ಜನ ವಿರೋಧಿ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಜೆಡಿಎಸ್ ಶಾಸಕ ಕೆ.ನೇಮರಾಜನಾಯ್ಕ ಹೇಳಿದರು. ಪಟ್ಟಣದ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ನಿಖಿಲ್ ಕುಮಾರಸ್ವಾಮಿ ಭಾಗವಹಿಸಲಿದ್ದಾರೆ.

ರಾಜ್ಯ ಸರ್ಕಾರ ಮೂಲಸೌಲಭ್ಯ ಕಲ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಅಭಿವೃದ್ಧಿ ಶೂನ್ಯ ವಿಫಲತೆಯನ್ನು ಮುಚ್ಚಿಕೊಳ್ಳಲು ಸಮಾವೇಶಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಾರಿಗೆ ತಂದಿರುವ ಐದು ಗ್ಯಾರಂಟಿಗಳು ಸರಿಯಾಗಿ ನಿರ್ವಹಿಸುತ್ತಿಲ್ಲ, ವಿಧಾನಸಭಾ ಕ್ಷೇತ್ರದಲ್ಲಿ 17 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಅನುದಾನ ನೀಡುವಲ್ಲಿ ಮೀನಾಮೇಷ ಎಣಿಸುತ್ತಿದ್ದಾರೆ. ರೈತರ ಕೃಷಿ ಉಪಕರಣಗಳು ದುಬಾರಿಯಾಗಿವೆ. ಬಡ ರೈತರಿಗೆ ಶಾಶ್ವತ ಪರಿಹಾರ ಕಲ್ಪಿಸುವಂತ ಯೋಜನೆ ಜಾರಿಯಾಗಬೇಕು ಎಂದರು.

ವಿಜಯನಗರ ಜಿಲ್ಲಾ ಜೆಡಿಎಸ್ ಪಕ್ಷದ ನೂತನ ಅಧ್ಯಕ್ಷರ ಪದಗ್ರಹಣ ಹಮ್ಮಿಕೊಳ್ಳಲಾಗಿದೆ ಎಂದೂ ತಿಳಿಸಿದರು. ರಾಜ್ಯದಲ್ಲಿ ಗೂಂಡಾ ಸಂಸ್ಕೃತಿ ಹೆಚ್ಚಾಗಿದೆ. ಬಾಗಲಕೋಟೆಯಲ್ಲಿ ನಡೆದ ಶಿವಾಜಿ ಜಯಂತಿ ಶೋಭಾಯಾತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್‌ಅಧಿಕಾರಿಗಳ ಮೇಲೆ ಕಲ್ಲು ತೂರಿದ್ದು ಖಂಡನೀಯ.

ಗೃಹ ಸಚಿವರು ಯಾವುದೇ ಒತ್ತಡಕ್ಕೆ ಒಳಗಾಗದೇ ಆರೋಪಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಕೆಕೆಆರ್ ಡಿಬಿಗೆ 5 ಸಾವಿರ ಕೋಟಿ ರೂಪಾಯಿ ಅನುದಾನ ಒದಗಿಸುವ ಆಶ್ವಾಸನೆ ಕೇವಲ ಹಾಳೆ ಅಲ್ಲಿದೆ, ಅದು ಕಾರ್ಯಗತವಾಗಿಲ್ಲ ಎಂದು ನೇಮರಾಜನಾಯ್ಕ ಲೇವಡಿ ಮಾಡಿದರು.

ಕೆಕೆಆರ್‌ಡಿಬಿ ಸಮಿತಿಯಲ್ಲಿ ವಿರೋಧ ಪಕ್ಷದ ಒಬ್ಬೇ ಒಬ್ಬ ಜನಪ್ರತಿನಿಧಿ ಇಲ್ಲ, ಕೇವಲ ಆಡಳಿತ ಪಕ್ಷದ ಶಾಸಕರನ್ನು ಇರಿಸಿಕೊಂಡು ಹಗಲು ದರೋಡೆ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.


# ಪೊಲೀಸ್ ದೌರ್ಜನ್ಯ: ಕೊಪ್ಪ, ಬಾಳೆಹೊನ್ನೂರು ಜಯಪುರದಲ್ಲಿ ಅಂಗಡಿ ಮುಂಗಟ್ಟು ಬಂದ್

• **ಉದಯವಾಹಿನಿ, ಚಿಕ್ಕಮಗಳೂರು**

ಆನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಮತ್ತು ನಡೆದ ಪ್ರತಿಭಟನೆ ವೇಳೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಮಲೆನಾಡಿನ ಹಲವೆಡೆ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸ್ಥಳೀಯರು ಬಂದ್ ನಡೆಸಿದರು.

ಬಾಳೆಹೊನ್ನೂರು, ಜಯಪುರ, ಕಡಬಗೆರೆ, ಕೊಪ್ಪದಲ್ಲಿ ಅಂಗಡಿ ಮುಂಗಟ್ಟುಗಳು ಸೋಮವಾರ ಬೆಳಿಗ್ಗೆಯಿಂದ ಸಂಜೆ ತನಕ ಮುಚ್ಚಿದ್ದವು. ಶೃಂಗೇರಿ ಮತ್ತು ಎನ್.ಆರ್.ಪುರ ಪಟ್ಟಣದಲ್ಲೂ ಬೆಳಿಗ್ಗೆ ಬಂದ್ ವಾತಾವರಣ ಇತ್ತು. ಮಧ್ಯಾಹ್ನದ ನಂತರ ಕೆಲ ಅಂಗಡಿಗಳು ತೆರೆದುಕೊಂಡವು.

ಬಾಳೆಹೊನ್ನೂರಿನಲ್ಲಿ ನೂರಾರು ರೈತರು ಮೌನ ಮೆರವಣಿಗೆ ನಡೆಸಿದರು. ನಂತರ ಸಭೆ ನಡೆಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ವೃತ್ತದಲ್ಲಿ ನಿಂತಿದ್ದ ಪೊಲೀಸ್ ಬಸ್ಸಿಗೆ ಹೂವು ಚೆಲ್ಲಿ ವಿಶಿಷ್ಟವಾಗಿ ಪ್ರತಿಭಟನೆ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ತಲಾ 50 ಲಕ್ಷ ಪರಿಹಾರ ನೀಡಬೇಕು. ಎಲ್ಲಾ ಆನೆಗಳನ್ನು ಹಿಡಿದು ಸ್ಥಳಾಂತರ ಮಾಡಬೇಕು. ಭಾನುವಾರ ನಡೆದ ಪ್ರತಿಭಟನೆ ವೇಳೆ ಅಮಾಯಕರ ಮೇಲೆ ಪೊಲೀಸರು ಲಾಠಿ ಬೀಸಿದ್ದಾರೆ ಅಲ್ಲದೇ ಹಲವರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿದ್ದಾರೆ. ಎಫ್‌ಐಆರ್ ರದ್ದುಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಪ್ರತಿಭಟನಾಕಾರರ ಮೇಲೆ ಹಾಕಿರುವ ಎಫ್‌ಐಆರ್ ಸಂಬಂಧ ನ್ಯಾಯಾಲಯಕ್ಕೆ ಬಿ ವರದಿ ಸಲ್ಲಿಸಬೇಕು. 9 ಜನರ ಹೆಸರು ಮತ್ತು 20 ಇತರರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಸಿಕ್ಕ ಸಿಕ್ಕವರನ್ನು ಕರೆತಂದು ಹಿಂಸೆ ನೀಡಿದರೆ ಠಾಣೆ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

# ತುಂಗಭದ್ರಾ ಎಡದಂಡೆ ಮುಖ್ಯನಾಲೆ: ಒಳಮೈ ಭಾರಿ ಬಿರುಕು

• **ಉದಯವಾಹಿನಿ, ಕಾರಟಗಿ**

ತುಂಗಭದ್ರಾ ಎಡದಂಡೆ ಮುಖ್ಯನಾಲೆಯ ಬಲ ಭಾಗದ ಒಳಮೈ ಮೇಲಿನಿಂದ ತಳದವರೆಗೆ ಭಾರಿ ಪ್ರಮಾಣದಲ್ಲಿ ಬಿರುಕು ಬಿಟ್ಟಿದೆ. ತಾಲ್ಲೂಕಿನ ಮೈಲಾಪುರ ಗ್ರಾಮದ ಬಳಿಯ ಮೈಲ್ 46ರ ಚೈನ್ 2411ರ ಬಳಿ ಮುಖ್ಯನಾಲೆ ಬಿರುಕು ಬಿಟ್ಟಿದೆ.

ಕ್ರಸ್ಟ್‌ಗೇಟ್ ಅಳವಡಿಕೆ ಹಿನ್ನೆಲೆಯಲ್ಲಿ ಮುಖ್ಯನಾಲೆಯಲ್ಲಿ ನೀರು ಹರಿಯುವಿಕೆಯನ್ನು ಸ್ಥಗಿತಗೊಳಿಸಲಾಗಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಕೆರೆಯಲ್ಲಿ ಸಂಗ್ರಹಿಸಲು ಮಾರ್ಚ್ ಮೊದಲ ಅಥವಾ ನಂತರದ ವಾರದಲ್ಲಿ ಮುಖ್ಯನಾಲೆಗೆ ನೀರು ಬಿಡುವ ನಿರ್ಧಾರ ಕೈಗೊಳ್ಳಲಾಗಿದೆ. ಮುಖ್ಯನಾಲೆಯ ಒಳಮೈ ದುರಸ್ತಿ ಮಾಡದೇ ನೀರು ಹರಿಸಿದರೆ ಮತ್ತಷ್ಟು ಅಪಾಯ ಎದುರಾಗಲಿದೆ ಎಂಬುದು ರೈತರ ಆತಂಕವಾಗಿದೆ.

ಸಹಾಯಕ ಇಂಜಿನಿಯರ್ ವಿರೂಪಾಕ್ಷ ಗುಡೂರು, ಮಾರ್ಚ್ 19ರಂದು ನಾಲೆ ಬಿರುಕು ಬಿಟ್ಟ ವಿಷಯ ಗಮನಕ್ಕೆ ಬಂದಿದೆ. ಮರುದಿನ ಮುಖ್ಯನಾಲೆಗೆ ಭೇಟಿ ನೀಡಿ ಪರಿಶೀಲಿಸಿ, ಹಿರಿಯ ಅಧಿಕಾರಿಗಳ ಗಮನಕ್ಕೆ ವರದಿ ಸಲ್ಲಿಸಿರುವೆ. ನಾಲೆಗೆ ನೀರು ಬಿಡುವುದರೊಳಗೆ ತುರ್ತು ದುರಸ್ತಿ ಕೈಗೊಳ್ಳಬೇಕಿದೆ. ಹಿರಿಯ ಅಧಿಕಾರಿಗಳು ಮೇಲ್ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ಇಂಜಿನಿಯರ್ ನಾಗಪ್ಪ ಪ್ರತಿಕ್ರಿಯಿಸಿ. ನಾಲೆಯ ಸ್ಥಳ ನಂ.2 ಕಾಲುವೆ ಉಪ ವಿಭಾಗ ಕಚೇರಿ ವ್ಯಾಪ್ತಿಗೆ ಬರುವುದು. ಬಿರುಕು ಬಿಟ್ಟ ವಿಷಯ ಗಮನಕ್ಕೆ ಬಂದಿದ್ದು, ಹಿರಿಯ ಅಧಿಕಾರಿಗಳು ಕೈಗೊಳ್ಳುವ ತೀರ್ಮಾನದಂತೆ ಅವರೊಂದಿಗೆ ಬೆರೆತು ಕೆಲಸ ಮಾಡುವೆ ಎಂದರು.

# ಹಿರಿಯ ನಾಗರಿಕರಿಗೆ ಸುರಕ್ಷತೆಗೆ ಪೊಲೀಸ್ ಬದ್ಧ

• **ಉದಯವಾಹಿನಿ, ಅಫಜಲಪುರ**

ಒಂಟಿಯಾಗಿ ವಾಸಿಸುತ್ತಿರುವ ಮಹಿಳೆಯರಿಗೆ ಮತ್ತು ವಯೋವೃದ್ಧ ಹಿರಿಯ ನಾಗರಿಕರಿಗೆ ಅವರ ಜೀವನದಲ್ಲಿ ಒಂಟಿತನದ ಅಸುರಕ್ಷತೆ, ಅಭದ್ರತೆ ಹಾಗೂ ಕಾಳಜಿ ವಹಿಸುವ ವಿಶ್ವಾಸದ ಕೊರತೆಯನ್ನು ನೀಗಿಸಿ, ಸಮುದಾಯ ಪೊಲೀಸ್ ಪರಿಕಲ್ಪನೆಯಡಿಯಲ್ಲಿ ಅವರೊಂದಿಗೆ ಪೊಲೀಸ್ ಇಲಾಖೆ ಮತ್ತು ಸರ್ಕಾರವಿದೆ ಎಂಬ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ 'ಆಸರೆ' ಯೋಜನೆಯನ್ನು ಜಾರಿಗೆ ತರಲಾಗಿದೆ' ಎಂದು ಪಿಎಸ್‌ಐ ಸಂಗೀತ ತಿಳಿಸಿದರು.

'ಆಸರೆ' ಯೋಜನೆ ಅಡಿಯಲ್ಲಿ ಒದಗಿಸುವ ಅಗತ್ಯ ನೆರವು ಕಾರ್ಯಕ್ರಮದ ಅಂಗವಾಗಿ ತಾಲ್ಲೂಕಿನ ದೇವಲ ಗಾಣಗಾಪುರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂಟಿಯಾಗಿ ವಾಸಿಸುತ್ತಿರುವವರನ್ನು ಸಂಪರ್ಕಿಸಿ ಅವರ ಕುಂದು ಕೊರತೆಯನ್ನು ಆಲಿಸಿ, ಆಸರೆ ಯೋಜನೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಒಂಟಿಯಾಗಿ ವಾಸ ಮಾಡುವ ಮಹಿಳೆ ಮನೆಗೆ ಭೇಟಿ ನೀಡಿ, ಮಾಹಿತಿ ಪಡೆದರು. ಗಂಡನ ನಿಧನದ ಬಳಿಕ ಏಕಾಂಗಿಯಾಗಿ ವಾಸ ಮಾಡುತ್ತಿರುವುದಾಗಿ ತಿಳಿಸಿದ ಮಹಿಳೆಗೆ ಪಿಎಸ್‌ಐ ಅವರು ಸಹಾಯ ಬೇಕಾದಲ್ಲಿ ಕರೆ ಮಾಡಬಹುದು ಎಂದು ದೂರವಾಣಿ ಸಂಖ್ಯೆ ನೀಡಿ ಧೈರ್ಯ ಹೇಳಿದರು.




ಉದಯವಾಹಿನಿ ಚಿತ್ರ

ಸಮಾಜದಲ್ಲಿ ಅನೇಕ ಕಾರಣಗಳಿಂದಾಗಿ ಒಂಟಿಯಾಗಿ ವಾಸಿಸುತ್ತಿರುವ ಹಿರಿಯ ನಾಗರಿಕರು ಅದರಲ್ಲೂ ಒಂಟಿ ಮಹಿಳೆಯರ ಸ್ವತ್ತು ಹಾಗೂ ಜೀವಗಳಿಗೆ ಅನೇಕ ಸಂದರ್ಭಗಳಲ್ಲಿ ತೊಂದರೆಗೀಡಾದ ಪ್ರಕರಣಗಳನ್ನು ನೋಡುತ್ತೇವೆ. ಇವರುಗಳನ್ನು ಹಾಗೂ ಅವರ ಪ್ರಾಣ, ಸ್ವತ್ತುಗಳ ಸುರಕ್ಷತೆ ಕುರಿತಂತೆ ನಮ್ಮ ದೇವಲ ಗಾಣಗಾಪುರ ಪೊಲೀಸ್ ಠಾಣೆ ಕಟಿಬದ್ಧವಾಗಿದೆ' ಎಂದು ತಿಳಿಸಿದರು.

## ಬೇಕಿದ್ದರೆ ಸಭೆಯಿಂದ ಹೊರನಡೆಯಿರಿ; ಕಾಂಗ್ರೆಸ್ ಶಾಸಕನ ವಿರುದ್ಧವೇ ಸಚಿವ ಸಂತೋಷ್ ಲಾಡ್ ಗರಂ: ಜಟಾಪಟಿ


# ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಒಂದೇ ಪಕ್ಷದ ಇಬ್ಬರ ನಡುವೆ ಟಾಕ್‌ವಾರ್

• **ಉದಯವಾಹಿನಿ, ಧಾರವಾಡ**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅನುದಾನ ಬಳಕೆ ಹಾಗೂ ಸೌಲಭ್ಯ ಹಂಚಿಕೆ ವಿಚಾರವಾಗಿ ಜಿಲ್ಲಾ ಪಂಚಾಯಿತಿ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಉಸ್ತುವಾರಿ ಸಚಿವ ಸಂತೋಷ ಲಾಡ್, ವಿಧಾನ ಪರಿಷತ್ ಸದಸ್ಯ ಎಫ್.ಎಚ್‌ಜಕ್ಕಪ್ಪನವರ ಮಧ್ಯೆ ಜಟಾಪಟಿ ನಡೆಯಿತು. ಸಭೆಯಿಂದ ಹೊರನಡೆಯಿರಿ ಎಂದು ಸಚಿವರು ಹೇಳಿರುವ ವಿಡಿಯೋ ವೈರಲ್ ಆಗಿದೆ.

ಈ ವೇಳೆ ಇಬ್ಬರೂ ಸಭೆಯಿಂದ ಹೊರನಡೆಯಲೂ ಮುಂದಾಗುವ ಜತೆಗೆ ಪರಸ್ಪರ ವಾಗ್ವಾದಕ್ಕಿಳಿದರು. ಹೀಗೆ ಪರಸ್ಪರ ಕಿತ್ತಾಡಿದ ಉಭಯ ನಾಯಕರು ಕಾಂಗ್ರೆಸ್ ಪ್ರತಿನಿಧಿಗಳು ಎಂಬುದು ಮತ್ತೊಂದು ಅಚ್ಚರಿ. ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸಚಿವ ಲಾಡ್ ಒಂದೊಂದೇ ಇಲಾಖೆ ಪ್ರಗತಿ ಪರಿಶೀಲಿಸುತ್ತಿದ್ದರು. ಆಗ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಜಕ್ಕಪ್ಪನವರ ಏರು ಧ್ವನಿಯಲ್ಲಿ ಮಾತು ಆರಂಭಿಸಿದರು. ಆಗ ನಿಧಾನವಾಗಿ ಮಾತನಾಡಿ ಎಂದು ಸಚಿವ ಲಾಡ್ ಹೇಳುತ್ತಿದ್ದಂತೆಯೇ ಸಹನೆ ಕಳೆದುಕೊಂಡ ಶಾಸಕ ಜಕ್ಕಪ್ಪನವರ, ಧಾರವಾಡ ಜಿಲ್ಲಾಡಳಿತ ಎಸ್‌ಸಿ, ಎಸ್‌ಟಿ ಬಗ್ಗೆ ನಿಷ್ಕಾಳಜಿ ತೋರುತ್ತಿದೆ. ಈ ಬಗ್ಗೆ ನಾನು ಉಪವಾಸ ಸತ್ಯಾಗ್ರಹಕ್ಕೆ ಇಳಿಯಬೇಕಾಗಲಿದೆ' ಎಂದು ಕಿಡಿ ಕಾರಿದರು.

**ಒಬ್ಬ ಶಾಸಕನಿಗೆ ಸಚಿವರು ಹೀಗೆ ಹೇಳುವುದು ಸರಿಯಲ್ಲ:** ಪರಿಸ್ಥಿತಿ ಕೈಮೀರುವ ಹಂತ ತಲುಪುತ್ತಿದ್ದಂತೆಯೇ ಸ್ಥಳದಲ್ಲಿದ್ದ ಬಿಜೆಪಿ ಶಾಸಕ ಎಂ.ಆರ್.ಪಾಟೀಲ, ಪ್ರದೀಪ ಶೆಟ್ಟರ್ ಅವರು ಶಾಸಕ ಜಕ್ಕಪ್ಪನವರ ಅವರನ್ನು ಕುಳ್ಳಿರಿಸಲು ಮುಂದಾದರು. ಹಿರಿಯ ಪೊಲೀಸ್ ಅಧಿಕಾರಿಗಳೂ ಎದ್ದು ಬಂದು ತಡೆದರು. ಮಾತು ಮುಂದುವರಿಸಿದ ಜಕ್ಕಪ್ಪನವರ, ಒಬ್ಬ ಶಾಸಕನಿಗೆ ಸಚಿವರು ಹೀಗೆ ಹೇಳುವುದು ಸರಿಯಲ್ಲ. ಸಮಾಜ ಕಲ್ಯಾಣ ಇಲಾಖೆ ಆದಿಯಾಗಿ ಜಿಲ್ಲಾಡಳಿತ ನಮಗೆ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.



**ಗೌಳಿಗಳಿಗೆ ಸಾಗುವಳಿ ಚೀಟಿ ನೀಡಿಲ್ಲ:** ಸಭೆ ಮುಂದುವರಿಯುತ್ತಿದ್ದಂತೆಯೇ ಮಾತು ಪುನಾರಂಭಿಸಿದ ಶಾಸಕ ಎಫ್.ಎಚ್.ಜಕ್ಕಪ್ಪನವರ, ಬಾಯಿ ಇಲ್ಲದವರ ಪರವಾಗಿ ಇಂತಹ ಸಭೆಯಲ್ಲಿ ಮಾತನಾಡಬೇಕು. ಗೌಳಿ ಸಮುದಾಯದ ಅನೇಕರಿಗೆ ಸಾಗುವಳಿ ಚೀಟಿ ನೀಡುತ್ತಿಲ್ಲ. ಅದೇ ಪ್ರದೇಶದಲ್ಲಿ ಮಾಜಿ ಪೊಲೀಸ್ ಅಧಿಕಾರಿ ಜ್ಯೋತಿಪ್ರಕಾಶ ಮಿರ್ಜಿ ಅವರಿಗೆ 120 ಎಕರೆ ಜಮೀನಿಗೆ ಸಾಗುವಳಿ ಚೀಟಿ ನೀಡಲಾಗಿದೆ. ಹೀಗಾಗಿ ನಿಯಮಾವಳಿ ಪ್ರಕಾರ ಎಲ್ಲಾ ಬಡವರಿಗೂ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು. ಆಗ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವ ಸಂತೋಷ ಲಾಡ್, ಅರಣ್ಯ ಕಾಯ್ದೆಯಡಿ ಸಾಗುವಳಿ ಚೀಟಿ ನೀಡಲು ಕೆಲ ದಾಖಲೆಗಳು ಬೇಕು. ಆದರೆ, ಹಲವರಲ್ಲಿ ಅವು ಇಲ್ಲ. ಅವರೆಲ್ಲರಿಗೂ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸುತ್ತಿದ್ದೇವೆ. ಜ್ಯೋತಿಪ್ರಕಾಶ ಮಿರ್ಜಿ ಅವರಿಗೆ ನೀಡಲಾದ ಜಮೀನು ಯಾವ ರೀತಿಯ ಜಮೀನು ಎಂಬುದನ್ನು ಪರಿಶೀಲಿಸಲಾಗುವುದು ಎಂದರು.

> ಮಧ್ಯೆ ಪ್ರವೇಶಿಸಿದ ಸಚಿವ ಲಾಡ್, ನಾನು ಎದ್ದು ಹೋಗಿ ಅಂದಿಲ್ಲ. ಬೇಕಿದ್ದರೆ ನಾನು ಸಭೆಯಿಂದ ಹೊರನಡೆಯುತ್ತೇನೆ. ಸುಮ್ಮನೆ ಆರೋಪ ಮಾಡಬೇಡಿ. ನಿಮಗೆ ಮಾತನಾಡಲೂ ಅವಕಾಶ ನೀಡಲಾಗಿದೆ ಎಂದಾಗ ಸಭೆಯಲ್ಲಿದ್ದ ಜನಪ್ರತಿನಿಧಿಗಳು, ಅಧಿಕಾರಿಗಳು ಮಧ್ಯಸ್ಥಿಕೆ ವಹಿಸಿ ಇಬ್ಬರನ್ನೂ ಸಮಾಧಾನಪಡಿಸಿದರು. ನನ್ನ ಧ್ವನಿ ದಪ್ಪ ಇದ್ದರೆ ಕ್ಷಮೆ ಕೇಳುವೆ.
> -ಜಕ್ಕಪ್ಪನವರ

### ನನಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ

ಅಧಿಕಾರಿಗಳ ಮಾತನ್ನು ತಾಳ್ಮೆಯಿಂದ ಕೇಳಿ. ಈ ರೀತಿ ಸುಮ್ಮನೆ ಆರೋಪ ಮಾಡಬೇಡಿ' ಎಂದು ಲಾಡ್ ಸಮಜಾಯಿಷಿ ನೀಡಿದರು. ಆಗ ಮತ್ತಷ್ಟು ಕೆಂಡಾಮಂಡಲವಾದ ಶಾಸಕ ಜಕ್ಕಪ್ಪನವರ, ನನ್ನ ಧ್ವನಿಯೇ ಹೀಗಿದೆ. ನೀವು ನನಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ. ನಾನು ಹೇಳುವುದನ್ನೂ ಕೇಳುತ್ತಿಲ್ಲ. ನಾವು ಎಸ್‌ಸಿ, ಎಸ್‌ಟಿ ಆಗಿ ಹುಟ್ಟಿದ್ದೇ ತಪ್ಪಾ? ಹೀಗಾದಲ್ಲಿ ನಾನು ಸಭೆಯಿಂದ ಹೋಗುತ್ತೇನೆ' ಎಂದರು. ಆಗ ಸಚಿವರು 'ನಾನು ನಿಮಗೆ ಹೊರಗೆ ಹೋಗಿ ಅನ್ನುತ್ತಿಲ್ಲ. ನೀವು ಹೋಗುವುದಾದರೆ ಹೋಗಿ' ಎನ್ನುತ್ತಿದ್ದಂತೆ ಜಕ್ಕಪ್ಪನವರ ಸಭೆಯಿಂದ ಎದ್ದು ಹೋಗಲು ಮುಂದಾದರು.

## ಮಿನಿ ನ್ಯೂಸ್

### ಅಸ್ಪೃಶ್ಯತಾ ನಿವಾರಣೆ ಕುರಿತು ಬೀದಿ ನಾಟಕ ವಿಚಾರ ಗೋಷ್ಠಿ ಕಾರ್ಯಕ್ರಮ

• **ಉದಯವಾಹಿನಿ, ಚಿಂಚೋಳಿ**

ಪಟ್ಟಣದ ಬಸ್ ನಿಲ್ದಾಣದ ಎದುರು ಮಂಗಳವಾರ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಹಾಗೂ ಅನುಗ್ರಹ ಸಮಗ್ರ ಗ್ರಾಮೀಣ ಮಹಿಳಾ ಅಭಿವೃದ್ಧಿ ಸೇವಾ ಸಂಸ್ಥೆ ಕಮಲಾಪೂರ ಸಂಯುಕ್ತ ಆಶ್ರಯದಲ್ಲಿ ಅಸ್ಪೃಶ್ಯತಾ ನಿವಾರಣೆ ಕುರಿತು ಬೀದಿ ನಾಟಕ ಮತ್ತು ವಿಚಾರ ಗೋಷ್ಠಿ ಕಾರ್ಯಕ್ರಮ ನಡೆಯಲಿದೆ ಎಂದು ಅನುಗ್ರಹ ಸಮಗ್ರ ಗ್ರಾಮೀಣ ಮಹಿಳಾ ಅಭಿವೃದ್ಧಿ ಸೇವಾಸಂಸ್ಥೆಯ ಅಧ್ಯಕ್ಷ ರವೀಂದ್ರ ಬಿ.ಕೆ ತಿಳಿಸಿದ್ದಾರೆ.

ಕಾರ್ಯಕ್ರಮವನ್ನು ಶಾಸಕ ಡಾ.ಅವಿನಾಶ ಜಾಧವ ಉಧ್ಘಾಟನೆ ಮಾಡಲಿದ್ದಾರೆ, ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ,ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರೀತಿ ಚಂದ್ರಶೇಖರ,ತಾಪಂ. ಇಓ ಸಂತೋಷ ಚವ್ಹಾಣ, ಸಮಾಜ ಕಲ್ಯಾಣ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಡಾ.ಶೃತಿ ಸೇರಿದಂತೆ ಜಿಲ್ಲಾ, ತಾಲ್ಲೂಕಾ ಮಟ್ಟದ ಅಧಿಕಾರಿಗಳು ವಿವಿಧ ಸಂಘಟನೆಗಳು ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

### ಮಾಧ್ಯಮದವರು ಘನತೆ, ಗಾಂಭೀರ್ಯದಿಂದ ವರ್ತಿಸಲಿ

• **ಉದಯವಾಹಿನಿ, ಬೀದರ್**

ಮಾಧ್ಯಮದವರು ಘನತೆ, ಗಾಂಭೀರ್ಯದಿಂದ ಇರಬೇಕು. ಉತ್ತಮ ರೀತಿಯಲ್ಲಿ ವರ್ತಿಸಬೇಕು. ವಿಧಾನಸೌಧ ಮೊಗಸಾಲೆಯಲ್ಲಿ ಬೇಕಾಬಿಟ್ಟಿ ಓಡಾಡಬಾರದು. ಮಾಧ್ಯಮದವರಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಈ ಕುರಿತು ಸಿಎಂ. ಜೊತೆಗೆ ಮಾತನಾಡುತ್ತೇನೆ ಎಂದು ವಿಧಾನ ಪರಿಷತ್ತಿನ ಸ್ಪೀಕರ್ ಬಸವರಾಜ ಹೊರಟ್ಟಿ ಹೇಳಿದರು. ಮಾಧ್ಯಮದವರು ಬಹಳ ಪ್ರಮುಖರು. ಕೆಲವರು ತಪ್ಪು ಮಾಡಿದರೆ ಎಲ್ಲರಿಗೂ ಅನ್ವಯಿಸಬಾರದು. ಹಿಂದಿನಂತೆ ರಾಜಕಾರಣ, ಮಾಧ್ಯಮ ರಂಗ ಸೇರಿದಂತೆ ಯಾವುದೂ ಇಲ್ಲ. ಆದರೆ, ಮಾಧ್ಯಮದವರು ಹೇಗೆ ಬೇಕೆನಿಸಿದ ರೀತಿಯಲ್ಲಿ ಇರಬಾರದು ಎಂದು ಇಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡುತ್ತ ಹೇಳಿದರು.

### ಬಿಲ್ ಕಲೆಕ್ಟರ್ ಬಸವರಾಜ, ಎಸ್‌ಡಿಎ ಅನ್ನಪೂರ್ಣ ಅಮಾನತು

• **ಉದಯವಾಹಿನಿ, ಧಾರವಾಡ**

ಚುನಾವಣೆ ಕಾರ್ಯದಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಹು-ಧಾ ಮಹಾನಗರ ಪಾಲಿಕೆ ಬಿಲ್ ಕಲೆಕ್ಟರ್ ಬಸವರಾಜ ನಿಗದಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಎಸ್‌ಡಿಎ ಅನ್ನಪೂರ್ಣ ಎಸ್.ಸವದಿ ಅವರನ್ನು ಸೋಮವಾರ ಅಮಾನತುಗೊಳಿಸಲಾಗಿದೆ. ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಸೂಚನೆ ನೀಡಿದರೂ ಮತಗಟ್ಟೆ ಅಧಿಕಾರಿಗಳಾದ ಬಸವರಾಜ ನಿಗದಿ ಮತ್ತು ಅನ್ನಪೂರ್ಣ ಎಸ್. ಸವದಿ ಅವರು ಪ್ರೊಜನಿ ಮ್ಯಾಪಿಂಗ್ ಕಾರ್ಯ ಆರಂಭಿಸಿಲ್ಲ. ಇಬ್ಬರೂ ವಹಿಸಿದ ಕಾರ್ಯನಿರ್ವಹಿಸದಿರುವುದು, ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

### ಭಾರತ ಇಬ್ಭಾಗ ಮಾಡಲು ಷಡ್ಯಂತ್ರ

• **ಉದಯವಾಹಿನಿ, ಹುಬ್ಬಳ್ಳಿ**

ಭಾರತವನ್ನು ಇಬ್ಭಾಗ ಮಾಡಲು ಸಾಕಷ್ಟು ಕ್ಷುದ್ರ ಶಕ್ತಿಗಳು ಪ್ರಯತ್ನಿಸುತ್ತಿವೆ. ಹಿಂದೂಗಳು ಒಗ್ಗಟ್ಟಾಗಿ ಅದನ್ನು ತಡೆಯಲು ಮುಂದಾಗಬೇಕು ಎಂದು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು. ಇಲ್ಲಿನ ನವನಗರದ ಹಳೇ ಕೆಎಚ್ ಬಿ ಕಾಲೊನಿಯ ಬಜರಂಗಿ ಮೈದಾನದಲ್ಲಿ ನವನಗರ, ಗಾಮನಗಟ್ಟಿ, ಅಮರಗೋಳ, ಸುತಗಟ್ಟಿ, ರಾಯಾಪುರ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಹಿಂದೂ ಸಮಾವೇಶದಲ್ಲಿ ಅವರು ಮಾತನಾಡಿದರು. ಈ ಹಿಂದೆ ಕುತಂತ್ರದಿಂದ ಬ್ರಿಟಿಷರು ಸೇರಿದಂತೆ ಅನೇಕರು ದೇಶವನ್ನು ಆಳಿದ್ದಾರೆ. ಮತ್ತೀಗ ಅಂತಹದ್ದೇ ಕುತಂತ್ರ ನಡೆಯುತ್ತಿದೆ. ಹೀಗಾಗಿ ಹಿಂದೂಗಳೆಲ್ಲ ಒಂದಾಗಬೇಕು ಎಂದರು. ಸಮಸ್ತ ಜಗತ್ತು ಸುಖದಿಂದ ಇರಬೇಕು ಎಂದು ಹಿಂದೂಗಳು ಬಯಸುತ್ತಾರೆ. ಸಂಸ್ಕೃತ, ಜ್ಞಾನವನ್ನು ಜಗತ್ತಿಗೆ ನೀಡಿದವರು ನಾವು. ಇಂಥ ಪವಿತ್ರ ರಾಷ್ಟ್ರ ಉಳಿಸಲು ಜಾತಿ-ಭೇದ ಮರೆತು ಹೋರಾಡಬೇಕು ಎಂದರು.

### ತಿಕೋಟಾದಲ್ಲಿ ಗುಡುಗು ಸಹಿತ ಮಳೆ: ದ್ರಾಕ್ಷಿ ಬೆಳೆಗಾರರಲ್ಲಿ ಆತಂಕ

• **ಉದಯವಾಹಿನಿ, ವಿಜಯಪುರ**

ವಿಜಯಪುರ ನಗರ, ತಿಕೋಟಾ ತಾಲ್ಲೂಕು ವ್ಯಾಪ್ತಿಯಲ್ಲಿ ಸೋಮವಾರ ಸಂಜೆ ಗುಡುಗು, ಸಿಡಿಲಿನೊಂದಿಗೆ ವರ್ಷದ ಪ್ರಥಮ ಮಳೆಯಾಗಿದೆ. ಬೇಸಿಗೆ ಆರಂಭದಲ್ಲೇ ಬಿಸಿಲಿನಿಂದ ಬಸವಳಿದಿದ್ದ ಜಿಲ್ಲೆಗೆ ಮಳೆ ತಂಪು ನೀಡಿದೆ. ಎರಡು ದಿನಗಳಿಂದ ದಟ್ಟವಾದ ಮೋಡ ಕವಿದ ವಾತಾವರಣ ಇತ್ತು. ಇದೀಗ ಮಳೆಯಾಗಿರುವುದು ಖುಷಿಯ ಸಂಗತಿಯಾದರೂ ಅಕಾಲಿಕ ಮಳೆಯಿಂದ ಪ್ರಮುಖವಾಗಿ ಜಿಲ್ಲೆಯ ದ್ರಾಕ್ಷಿ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು – ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ. ಕಳೆದ ದಿನಗಳನ್ನು ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ ಮತ್ತು ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ.

**ವೃಷಭ** ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಈಗ ತಾನೇ ಪರಿಚಯವಾದವರ ಜೊತೆ ನಿಮ್ಮ ವೈಯಕ್ತಿಕ ವಿಷಯಗಳನ್ನು ಹಂಚಿಕೊಳ್ಳಬೇಡಿ.

**ಮಿಥುನ** ಒಂದು ಲಾಭಕರ ದಿನ, ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನೀವು ಮನೆಯಿಂದ ಹೊರ ಇದ್ದು ಉದ್ಯೋಗ, ಅಧ್ಯಯನ ಮಾಡುತ್ತಿದ್ದರೆ, ನಿಮ್ಮ ಹಣ, ಸಮಯವನ್ನು ವ್ಯರ್ಥ ಮಾಡುವಂತಹ ಜನರಿಂದ ದೂರವಿರುವುದು ಕಲಿತುಕೊಳ್ಳಬೇಕು.

**ಕರ್ಕಾಟಕ** ನಿಮ್ಮ ಆರೋಗ್ಯದ ಬಗ್ಗೆ ವಿಶೇಷವಾಗಿ ರಕ್ತದೊತ್ತಡ ರೋಗಿಗಳ ಬಗ್ಗೆ ಸ್ವಲ್ಪ ಜಾಗ್ರತೆಯಿಂದಿರಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ಯಾರಾದರೂ ನಿಮಗೆ ಹಾನಿ ಮಾಡಲು ಪ್ರಯತ್ನಿಸಬಹುದು ಬಲವಾದ ಶಕ್ತಿಗಳು ನಿಮ್ಮ ವಿರುದ್ಧ ಕೆಲಸ ಮಾಡುತ್ತಿರುತ್ತವೆ.

**ಸಿಂಹ** ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ದೂರದ ಸ್ಥಳದ ಸಂಬಂಧಿಗಳು ಇಂದು ನಿಮ್ಮನ್ನು ಸಂಪರ್ಕಿಸಬಹುದು. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು.

**ಕನ್ಯಾ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.

**ತುಲಾ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ, ಕೆಟ್ಟದ್ದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ.

**ವೃಶ್ಚಿಕ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ. ನಿಮ್ಮ ಹೆಂಡತಿಯ ಜೊತೆ ಪ್ರವಾಸಕ್ಕೆ ಹೋಗಲು ಒಳ್ಳೆಯ ದಿನ.

**ಧನಸ್ಸು** ನೀವು ವ್ಯಾಯಾಮದ ಮೂಲಕ ನಿಮ್ಮ ತೂಕವನ್ನು ನಿಯಂತ್ರಿಸಬಹುದು. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ನಿಮ್ಮ ವಿಪರೀತ ಶಕ್ತಿ ಮತ್ತು ಪ್ರಚಂಡ ಉತ್ಸಾಹ ಅನುಕೂಲಕರ ಫಲಿತಾಂಶಗಳನ್ನು ತರುತ್ತದೆ.

**ಮಕರ** ಪತ್ನಿ ನೀವು ಹುರಿದುಂಬಿಸಬಹುದು. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ. ಮನೆ ಅಥವಾ ಸಾಮಾಜಿಕ ಸಮಾರಂಭಗಳಲ್ಲಿನ ಒಂದು ದುರಸ್ತಿ ಕೆಲಸ ನಿಮ್ಮನ್ನು ವ್ಯಸ್ತವಾಗಿರಿಸುವ ಸಾಧ್ಯತೆಯಿದೆ.

**ಕುಂಭ** ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು.

**ಮೀನ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ, ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಪತ್ನಿಯೊಂದಿಗೆ ಜಗಳ ಮಾನಸಿಕ ಒತ್ತಡಕ್ಕೆ ಕಾರಣವಾಗಬಹುದು. ಅನವಶ್ಯಕ ಒತ್ತಡ ತೆಗೆದುಕೊಳ್ಳುವ ಅಗತ್ಯವಿಲ್ಲ.

### ದೇಶದಲ್ಲಿ 15ಕೋಟಿ ಜನಸಂಖ್ಯೆವುಳ್ಳ ಬಂಜಾರ ಸಮಾಜ,ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಮೀಸಲಾತಿ ಪಡೆಯುತ್ತಿದ್ದು ದೇಶದಲ್ಲಿ ಒಂದೇ ಎಸ್‌ಸಿ ಮೀಸಲಾತಿ ಜಾರಿ ಮಾಡಿ: ಪೌರಾದೇವಿ ಪೀಠಾಧಿಪತಿ ಬಾಬುಸಿಂಗ್ ಮಹಾರಾಜರು ಕಳವಳ

# ಬಂಜಾರ ಸಮಾಜವು ದುಶ್ಚಟಗಳಿಂದ ದೂರವಿರಬೇಕು

• ಉದಯವಾಹಿನಿಚಿಂಚೋಳಿ

ಭಾರತ ದೇಶದಲ್ಲಿ ಬಂಜಾರ ಸಮಾಜವು 15ಕೋಟಿ ಜನಸಂಖ್ಯೆವಿದ್ದು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಮೀಸಲಾತಿ ಪಡೆಯಲಾಗುತ್ತಿದೆ ಬಂಜಾರ ಸಮಾಜದ ಕಾಯಕ ಒಂದೆವಿದ್ದು ರೋಟಿ ಕಪಡಾ ಮಕಾನ್ ಅಡಿಯಲ್ಲಿ ಕೆಲಸ ಮಾಡುತ್ತೇವೆ ದೇಶದಲ್ಲಿ ಬಂಜಾರ ಸಮಾಜಕ್ಕೆ ಒಂದೇ ಎಸ್‌ಸಿ.ಜಾತಿಯಲ್ಲಿ ಮೀಸಲಾತಿಯಲ್ಲಿ ಸೇರಿಸಬೇಕು ಎಂದು ಪೌರಾದೇವಿ ಪೀಠಾಧಿಪತಿ, ಮಹಾರಾಷ್ಟ್ರ ಸರ್ಕಾರದ ಎಂಎಲ್ಸಿ ಬಾಬುಸಿಂಗ್ ಮಹಾರಾಜರು ಹೇಳಿದರು.

ತಾಲ್ಲೂಕಿನ ರಾಣಾಪೂರ ತಾಂಡಾದಲ್ಲಿ ಬಂಜಾರ ಸಮಾಜದ ಧರ್ಮಗುರು ಸಂತ ಮಹಾನ ತಪಸ್ವಿ ಡಾ.ರಾಮರಾವ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆ, ಧರ್ಮಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು,ರಾಮರಾವ ಮಹಾರಾಜರ ಆಶಯದಂತೆ ನಮ್ಮ ಬಂಜಾರ ಸಮಾಜವು ದುಶ್ಚಟಗಳಿಂದ ದೂರವಿರಬೇಕು.

ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆದರೆ ಜೀವನ ಪಾವನವಾಗುತ್ತದೆ,ಕೆಲವೇ ದಿನಗಳಲ್ಲಿ ದೇಶದ್ಯಾಂತ ಬಂಜಾರ ಜೋಡೊ ಅಭಿಯಾನ ಪ್ರಾರಂಭ ಮಾಡಲಾಗುತ್ತದೆ,ಸಮಾಜದ ಜಾಗೃತಿ ಮೂಡಿಸಲು ಸಮಾಜವು ಒಗ್ಗಟ್ಟು ಮಾಡಲು ಕಾರ್ಯಕ್ರಮವು ದೇಶದ್ಯಾಂತ ಹಮ್ಮಿಕೊಳ್ಳುತ್ತಿದ್ದೇವೆ ಎಂದರು. ಮಾಜಿ ಸಂಸದ ಡಾ.ಉಮೇಶ ಜಾಧವ,ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ ಮಾತನಾಡಿದರು. ಪವನ ರಾಠೋಡ ಸ್ವಾಗತಿಸಿದರು, ಪ್ರಕಾಶ ರಾಠೋಡ ನಿರೂಪಿಸಿದರು, ಗುರುನಾಥ ರಾಠೋಡ ಮಾಸ್ಟರ್ ವಂದಿಸಿದರು.

ಪೂಜ್ಯ ಬಳಿರಾಮ ಮಹಾರಾಜರು, ಪೂಜ್ಯ ಪರ್ವಲಿಂಗ ಪರಮೇಶ್ವರ ಮಹಾರಾಜರು,ಪೂಜ್ಯ ಶಿವಕುಮಾರ ಶಿವಾಚಾರ್ಯರು,ಪೂಜ್ಯ ವಿಠ್ಠಲ ಮಹಾರಾಜರು,ರಾಜು ಮಾಹಾರಾಜರು,ಸಾನಿಧ್ಯ ವಹಿಸಿದ್ದರು.

**ಪ್ರಮುಖರು:** ಸೀಮಾ ಕಮಲದಾಸ, ಪ್ರೀತಿಬಾಯಿ, ಶರಣುಪಾಟೀಲ, ಪ್ರೇಮಸಿಂಗ್ ಜಾಧವ, ರಾಜು ಪವ್ವಾರ, ಅಶೋಕ ಚವ್ಹಾಣ, ಸತೀಶರೆಡ್ಡಿ, ಕೆಎಂಬಾರಿ, ಎಇಇ ಉಮೇಶ ರಾಠೋಡ, ಜೆಇ ಯುವರಾಜ ರಾಠೋಡ, ರಾಮಶೆಟ್ಟಿ ಪವ್ವಾರ, ನಟರಾಜ, ಮಂಜುನಾಥ, ಪಾಂಡು, ಮೇಘರಾಜ ರಾಠೋಡ, ರಾಮರಾವ ಪಾಟೀಲ, ವಿಠಲ ಕಾರಬಾರಿ, ರಮೇಶ ರಾಠೋಡ, ಡಾ.ಮಂಜುನಾಥ, ರಾಮಶೇಟ್ಟಿ ರಾಠೋಡ, ದೇವಿದಾಸ ದಳಪತಿ, ರಾಮಶೇಟ್ಟಿ ರೇವು, ರವಿಬಾನು, ಚರಣಸಿಂಗ್ ರಾಠೋಡ, ರಾಮು ನೀಲಕಂಠ, ಕಾನು ಚವ್ಹಾಣ, ಯಂಕು ರಾಠೋಡ, ಗೌಸೋದ್ದೀನ್ ಸೇರಿದಂತೆ ಅನೇಕ ಸುತ್ತಮುತ್ತಲಿನ ತಾಂಡಾ ಗ್ರಾಮಗಳ ಮುಖಂಡರು ಭಾಗವಹಿಸಿದರು.





ಉದಯವಾಹಿನಿ ಚಿತ್ರ

> ಬಂಜಾರ ಸಮಾಜವು ಒಗ್ಗಟ್ಟು ಪ್ರದರ್ಶಿಸಬೇಕು,ಸಮಾಜದ ವಿಷಯ ಬಂದಾಗ ನಾವೆಲ್ಲರೂ ಒಂದಾಗಬೇಕು, ಬಿಜೆಪಿ ಕಾಂಗ್ರೇಸ್ ಜೆಡಿಎಸ್ ಯಾವುದೇ ಪಕ್ಷಗಳು ಅಧಿಕಾರಕ್ಕೆ ಬರಲಿ ಅವುಗಳು ಸಮಾಜಿಕ ನ್ಯಾಯ ಕೊಡುವುದು ಅವರ ಕರ್ತವ್ಯವಾಗಿದೆ, ಚಿಂಚೋಳಿಯಲ್ಲಿ ಅರಣ್ಯ ಕಾಲೇಜು, ಚಂದ್ರಂಪಳ್ಳಿ ಅಭಿವೃದ್ಧಿ ಸೇರಿದಂತೆ ಅರಣ್ಯ ಪ್ರದೇಶದ ಅಭಿವೃದ್ಧಿ ಆಗಬೇಕು ಸಚಿವರ ಗಮನಕ್ಕೆ ತರಬೇಕು.
>
> -ಡಾ.ಅವಿನಾಶ ಜಾಧವ, ಶಾಸಕ

> ಬಂಜಾರ ಸಮಾಜಕ್ಕೆ ರಾಮರಾವ ಮಹಾರಾಜರ ಕೊಡುಗೆ ಅಪಾರ ಆಗಿದೆ, ರಾಮರಾವ ಮಹಾರಾಜರ ಆಶೆಯದಂತೆ ವ್ಯಸನ ಮುಕ್ತ ಸಮಾಜ ಆಗಬೇಕು ಪಾಲಕರು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು.
>
> - ಸಾಗರ್ ಖಂಡ್ರೆ, ಬೀದರ ಸಂಸದ

## ಮೊಬೈಲ್ ಕ್ಯಾಂಟಿನ್ ಸಹಾಯಧನಕ್ಕಾಗಿ ಅರ್ಜಿ

• ಉದಯವಾಹಿನಿ, ಚಿತ್ರದುರ್ಗ

ಪ್ರವಾಸೋದ್ಯಮ ಇಲಾಖೆ ವತಿಯಿಂದ 2025-26ನೇ ಸಾಲಿನ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾರ್ಚ್ 13 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ಯೋಜನೆಯಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಒಂದು ತಿಂಗಳ ಕಾಲ ಉದ್ಯಮಶೀಲತೆ ವಿಷಯದ ಬಗ್ಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುವುದು. ತರಬೇತಿ ಪಡೆದ ಅರ್ಹ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ಖರೀದಿಸಲು ರೂ.5 ಲಕ್ಷ ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿದ್ದು, 20 ರಿಂದ 55 ವರ್ಷ ವಯೋಮಿತಿಯೊಳಗಿರಬೇಕು. ಅಲ್ಲದೆ, ಅರ್ಜಿದಾರರು ಚಾಲ್ತಿಯಲ್ಲಿರುವ ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಒಟ್ಟು 10 ಅಭ್ಯರ್ಥಿಗಳ ಗುರಿ ನಿಗದಿಪಡಿಸಲಾಗಿದ್ದು, ಇದರಲ್ಲಿ ಪರಿಶಿಷ್ಟ ಜಾತಿಯ 6 ಹಾಗೂ ಪರಿಶಿಷ್ಟ ಪಂಗಡದ 4 ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ.

ಆಸಕ್ತರು ಇದೇ ಫೆಬ್ರವರಿ 23 ರಿಂದ ಮಾರ್ಚ್ 13ರ ವರೆಗೆ ಅರ್ಜಿಗಳನ್ನು ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಮಾರ್ಚ್ 13ರ ಸಂಜೆ 4.30ರ ಒಳಗೆ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕಾಮನಭಾವಿ ಬಡಾವಣೆ, ಚಿತ್ರದುರ್ಗ ಇವರ ಕಚೇರಿಗೆ ದ್ವಿ-ಪ್ರತಿಯಲ್ಲಿ ಸಲ್ಲಿಸಬೇಕು. ನಿಗದಿತ ಅವಧಿಯ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ವಿದ್ಯಾವಂತ ಎಂಬ ಕಾರಣಕ್ಕೆ ಚಂದ್ರು ಲಮಾಣಿ ವಿರುದ್ಧ ಪಿತೂರಿ

• ಉದಯವಾಹಿನಿ, ಬೆಳಗಾವಿ



ವಿದ್ಯಾವಂತ ಎಂಬ ಕಾರಣಕ್ಕೆ ಪರಿಶಿಷ್ಟ ಸಮುದಾಯದ ಶಾಸಕ ಡಾ.ಚಂದ್ರು ಲಮಾಣಿ ವಿರುದ್ಧ ಪಿತೂರಿ ಮಾಡಿ, ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿಸಲಾಗಿದೆ.

ಈ ಕುತಂತ್ರಕ್ಕೆ ಅದೇ ಸಮುದಾಯದ ವ್ಯಕ್ತಿ ಬಳಸಿಕೊಳ್ಳಲಾಗಿದೆ. ಈ ಅನ್ಯಾಯದ ವಿರುದ್ಧ ನಾನೂ ಧ್ವನಿ ಎತ್ತುತ್ತೇನೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಶಾಸಕರನ್ನು ತುಳಿಯುವ ಕೆಲಸ ಇಂದು, ನಿನ್ನೆಯಿಂದ ಅಲ್ಲ 20 ವರ್ಷಗಳಿಂದಲೂ ನಡೆಯುತ್ತ ಬಂದಿದೆ. ಶೇ 74ರಷ್ಟು ಮತದಾರರನ್ನು ಹೊಂದಿದ ಸಮುದಾಯ ತುಳಿಯುವ ಪ್ರಯತ್ನ ನಡೆದಿದೆ. ಅಹಿಂದ ನಾಯಕರೆಂದು ಎಂದು ಹೇಳಿಕೊಳ್ಳುವ ನಾವೆಲ್ಲರೂ ಇದರ ವಿರುದ್ಧ ಹೋರಾಟ ಮಾಡುವ ಅಗತ್ಯವಿದೆ ಎಂದರು. ಚಂದ್ರು ಲಮಾಣಿ ಅವರಿಗೆ ನ್ಯಾಯ ಕೋರಿ, ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚಿಸುತ್ತೇವೆ. ಪಾರದರ್ಶಕ ತನಿಖೆಗೆ ಒತ್ತಾಯಿಸುತ್ತೇವೆ' ಎಂದರು. ನಾನು ಭ್ರಷ್ಟಾಚಾರದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಆದರೆ, ವ್ಯವಸ್ಥೆ ಬಗ್ಗೆ ಪ್ರಶ್ನಿಸುತ್ತೇವೆ. ನಮ್ಮದು ಪರಿಶಿಷ್ಟರ ಪರ ಸರ್ಕಾರ ಎನ್ನುವವರು ಅಧಿಕಾರಕ್ಕೆ ಇರುವಾಗಲೇ, ಇಂಥ ಘಟನೆ ನಡೆಯುತ್ತಿವೆ. ವೈ.ಸಂಪಂಗಿ ಅವರನ್ನು ಇದೇ ರೀತಿಯಾಗಿ ಪ್ರಕರಣದಲ್ಲಿ ಸಿಲುಕಿಸಿದರು ಎಂದು ಆರೋಪಿಸಿದರು. ಪರಿಶಿಷ್ಟ ಸಮುದಾಯದ ಮತ್ತು ಅಹಿಂದ ಶಾಸಕರೇ ಏಕೆ ಇಂಥ ಬಲೆಗೆ ಬೀಳುತ್ತಾರೆ ಎಂಬುದು ನನ್ನ ಪ್ರಶ್ನೆ. ಚಂದ್ರು ಲಮಾಣಿ ಅವರ ಭ್ರಷ್ಟಾಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ, ಒಬ್ಬ ಸ್ವಾಮೀಜಿ ಪರಿಶಿಷ್ಟ ಸಮುದಾಯದ ವ್ಯಕ್ತಿಯನ್ನು ಬಳಸಿ ಈ ಕೃತ್ಯ ಮಾಡಿಸಿದ್ದಾರೆ. ಈ ಹಿಂದೆ ನನ್ನ ಮೇಲೆಯೂ ಏನು ಮಾಡಿದ್ದಾರೆ ಗೊತ್ತಲ್ಲವೇ. ನಾನೂ ಸಂತ್ರಸ್ತನೇ. ಆದರೆ, ಆ ಪ್ರಕರಣವೀಗ ನ್ಯಾಯಾಲಯದಲ್ಲಿದೆ. ಹಾಗಾಗಿ ಹೆಚ್ಚು ಪ್ರತಿಕ್ರಿಯಿಸಲಾರೆ ಎಂದರು. ಭ್ರಷ್ಟಾಚಾರ ಆರೋಪ ಬಂದಾಗ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡುವುದು ಕಷ್ಟ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಿಜೆಪಿಯಲ್ಲಿ ಇರುವ ಗೊಂದಲವನ್ನು ಬಗೆಹರಿಸಬೇಕು ಇಲ್ಲದಿದ್ದರೆ ಪಕ್ಷಕ್ಕೆ ಹಾನಿಯಾಗಲಿದೆ ಎಂದರು.

ಸಿದ್ದರಾಮಯ್ಯ ಈಗಲೂ ನಮ್ಮ ನಾಯಕ. ಈ ಹಿಂದೆ ಅವರ ಸಂಪುಟದಲ್ಲಿ ಕೆಲಸ ಮಾಡಿದ್ದೇನೆ. ಆದರೆ, ಅವರು ಈ ಹಿಂದಿನ ಮುಖ್ಯಮಂತ್ರಿಯಾಗಿ ಈಗ ಉಳಿದಿಲ್ಲ. ಸಿದ್ದರಾಮಯ್ಯ ಕುರುಬ ನಾಯಕರಲ್ಲ. ಅಹಿಂದ ವರ್ಗದ ನಾಯಕ ಎಂಬುದು ನನ್ನ ಅಭಿಮತ ಎಂದರು.

# ಸಂಡೂರು ಗುಹೆಗೆ ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ

• ಉದಯವಾಹಿನಿ, ಬಳ್ಳಾರಿ

ಆದಿಮಾನವರು ನೆಲೆಸಿದ್ದರು ಎನ್ನಲಾದ, ಸಂಡೂರು ತಾಲ್ಲೂಕಿನ ರಣಜಿತ್‌ಪುರ ಸಮೀಪದ ಗುಹೆಗೆ ಬಳ್ಳಾರಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಮತ್ತು ಸಂಶೋಧಕ ರವಿ ಕೋರಿಶೆಟ್ಟರ್ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇವರ ಜತೆಗೆ, ಜಿಲ್ಲಾ ಪಂಚಾಯಿತಿ ಸಿಇಒ ಮೊಹಮದ್ ಹ್ಯಾರಿಸ್ ಸುಮೇರ್, ಹೆಚ್ಚುವರಿ ಜಿಲ್ಲಾಧಿಕಾರಿ ಮೊಹಮದ್ ಝುಬೇರ್, ಪರಿಸರ ತಜ್ಞ ಸಮದ್ ಕೊಟ್ಟೂರು, ತಹಶೀಲ್ದಾರ್ ಅನಿಲ್ ಕುಮಾರ್ ಸೇರಿದಂತೆ ಇತರ ಅಧಿಕಾರಿಗಳೂ ಇದ್ದರು.

ಗುಹೆಯಲ್ಲಿ ಲಭ್ಯವಾಗುತ್ತಿರುವ ಆದಿಮಾನವರ ಪಳೆಯುಳಿಕೆ, ಪರಿಕರಗಳ ಕಾರ್ಬನ್ ಡೇಟಿಂಗ್ ನಡೆಸಲು ಉದ್ದೇಶಿಸಿರುವ ಪ್ರೊ.ರವಿ ಕೋರಿಶೆಟ್ಟರ್ ಅವರು ತಮ್ಮ ತಂಡದೊಂದಿಗೆ ಬಂದಿದ್ದರು ಎನ್ನಲಾಗಿದ್ದು, ಇವರಿಗೆ ಜಿಲ್ಲಾಡಳಿತವೂ ಜತೆಯಾಗಿದೆ. ಗುಹೆಗೆ ಭೇಟಿ ನೀಡಿದಾಗ ಅಲ್ಲಿ ಬಿಳಿ ಸ್ಪಟಿಕ ಶಿಲೆ, ಬೂದಿ, ಸೂಕ್ಷ್ಮ ಶಿಲಾಯುಗ, ನವಶಿಲಾಯುಗಕ್ಕೆ ಸೇರಿದ ಪರಿಕರಗಳು, ಮಾನವ, ಪ್ರಾಣಿಯ ಮೂಳೆಗಳು ಗೋಚರಿಸಿದವು ಎಂದು ಹೇಳಲಾಗಿದೆ. ಕೋರಿಶೆಟ್ಟರ್ ಅವರ ತಂಡ ಇದರ ಮಾದರಿಗಳನ್ನು ಸಂಗ್ರಹಿಸಿದೆ ಎನ್ನಲಾಗಿದ್ದು.

ಅಧ್ಯಯನಕ್ಕಾಗಿ ಅಹಮದಾಬಾದ್‌ಗೆ ಕಳುಹಿಸುವ ಸಾಧ್ಯತೆಗಳಿವೆ. ಭೇಟಿ ಕುರಿತು ಜತೆಗೆ ಮಾತನಾಡಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್, ಬಳ್ಳಾರಿಯೂ ಸೇರಿದಂತೆ ಅದರ ಸುತ್ತಮುತ್ತಲ ಜಿಲ್ಲೆಗಳಲ್ಲಿ ಆದಿ ಮಾನವರ ನೆಲೆಗಳಿವೆ ಅವುಗಳ ರಕ್ಷಣೆ ಆಗಬೇಕಾಗಿದೆ. ಸಂಡೂರು ಗುಹೆ ಭೇಟಿಯು ಅತ್ಯಂತ ವಿಶೇಷವಾಗಿತ್ತು. ಅಲ್ಲಿ ಇನ್ನೂ ಅಧ್ಯಯನಗಳು ನಡೆಯಬೇಕಾಗಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

## 7ನೇ ವೇತನ ಆಯೋಗದ ಹೆಚ್ಚುವರಿ ಹಣ ಜಮೆ ಆಗುತ್ತಿಲ್ಲ: ನಿವೃತ್ತ ಶಿಕ್ಷಕಿ ಅಲೆದಾಟ

• ಉದಯವಾಹಿನಿ, ಬೈಲಹೊಂಗಲ

ಏಳನೇ ವೇತನ ಆಯೋಗದ ಹೆಚ್ಚುವರಿ ಹಣ ಮಂಜೂರಾದರೂ, ಕೆನರಾ ಬ್ಯಾಂಕ್‌ನ ಬೈಲಹೊಂಗಲ ಶಾಖೆಯವರು ನನ್ನ ಖಾತೆಗೆ ಜಮೆ ಮಾಡುತ್ತಿಲ್ಲ ಎಂದು ಪ್ರಭುನಗರದ ನಿವೃತ್ತ ಶಿಕ್ಷಕಿ ಅಕ್ಕುತಾಯಿ ಕೋರಿ ಆಪಾದಿಸಿದ್ದಾರೆ. 2025ರ ಮೇ 13ರಂದು ಬೆಂಗಳೂರಿನ ಕಚೇರಿಯಿಂದ ಅಕ್ಕುತಾಯಿ ಅವರಿಗೆ ಏಳನೇ ವೇತನ ಆಯೋಗದ ಹಣ ಮಂಜೂರಾಗಿದೆ. ಆದರೆ, ಬ್ಯಾಂಕ್‌ನವರು ದಾಖಲೆಗಳ ಸಮಸ್ಯೆಯಿಂದ ನಿಮಗೆ ಹಣ ಸಂದಾಯವಾಗಿಲ್ಲ ಎನ್ನುತ್ತಿದ್ದಾರೆ.

ಇದರಿಂದಾಗಿ ಗೊಂದಲಕ್ಕೆ ಒಳಗಾದ ನಿವೃತ್ತ ಶಿಕ್ಷಕಿ, ನ್ಯಾಯ ಕೋರಿ ಸ್ಥಳೀಯ ಶಾಸಕ ಮಹಾಂತೇಶ ಕೌಜಲಗಿ ಅವರಿಗೆ ಮನವಿ ಸಲ್ಲಿಸಿದರು. ಬ್ಯಾಂಕ್ ವ್ಯವಸ್ಥಾಪಕರು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ. ಇಲಾಖೆಯಿಂದ ಎಲ್ಲಾ ದಾಖಲೆ ನೀಡಿದರೂ ಬ್ಯಾಂಕ್‌ನವರು ಅಲೆದಾಡಿಸುತ್ತಿದ್ದಾರೆ. ನನಗೆ ಹೆಚ್ಚುವರಿ ಹಣ ಕೊಡಿಸಬೇಕು ಎಂದು ಕೋರಿದರು. ಬ್ಯಾಂಕ್ ವ್ಯವಸ್ಥಾಪಕರ ಜತೆಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಶಾಸಕರು ಭರವಸೆ ನೀಡಿದರು.

## ಪ್ರಕೃತಿ ಸಹಜ ಜೀವನ ಶೈಲಿಯಿಂದ ಆರೋಗ್ಯ

• ಉದಯವಾಹಿನಿ, ಹಾವೇರಿ

ಮನುಷ್ಯ ಪ್ರಕೃತಿಯ ಒಂದು ಭಾಗ. ಪ್ರಕೃತಿ ಸಹಜ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಯುತ ಜೀವನ ಸಾಗಿಸಬಹುದು ಎಂದು ಜನನಿ ಯೋಗ, ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ರಾಜೇಶ್ ಪಾದೇಕಲ್ ಹೇಳಿದರು. ನಗರದ ಹುಕ್ಕೇರಿಮಠ ಹಾಗೂ ಲಯನ್ಸ್ ಕ್ಲಬ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಭಾರತದ ಸನಾತನ ಋಷಿ ಪರಂಪರೆಯು ನಮಗೆ ಯೋಗ, ಪ್ರಾಣಾಯಾಮ ವಿದ್ಯೆಯನ್ನು ಬಳುವಳಿಯಾಗಿ ನೀಡಿದೆ. ಔಷಧ ರಹಿತವಾಗಿ, ಸನಾತನ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ರೋಗಗಳು ಬರದಂತೆ ಮಾಡಬಹುದು ಎಂದರು.

ಉದಯಶಂಕರ ಭಟ್ ಮಾತನಾಡಿ, ಯೋಗ ನಮ್ಮ ಜೀವನ ಕ್ರಮ ಆಗಬೇಕು. ಆಗ ಯಾವುದೇ ರೋಗ ನಮ್ಮನ್ನು ಬಾಧಿಸುವುದಿಲ್ಲ ಇದರ ಜತೆಗೆ ನಮ್ಮ ಆಚಾರ, ವಿಚಾರ, ಆಹಾರ, ವಿಹಾರ, ಜೀವನಶೈಲಿಯಲ್ಲಿ ಶಿಸ್ತು ಅಳವಡಿಸಿಕೊಳ್ಳುವ ಮೂಲಕ ರೋಗ ಬಾರದಂತೆ ತಡೆಯಬಹುದು ಎಂದರು.

## ರಾಜ್ಯ ಸರ್ಕಾರದ ವಿರುದ್ಧ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ವಾಗ್ದಾಳಿ

• ಉದಯವಾಹಿನಿ, ಹುನಗುಂದ

ಕಾಂಗ್ರೇಸ್ ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುವುದನ್ನು ಬಿಡಬೇಕು. ರಾಜ್ಯದಲ್ಲಿ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಈ ರೀತಿ ಘಟನೆಗಳು ನಡೆಯುತ್ತಿವೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಕಾಂಗ್ರೇಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಚೆಗೆ ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಅಂಗವಾಗಿ ನಡೆದ ಮೆರವಣಿಗೆ ವೇಳೆ ಕಿಡಿಗೇಡಿಗಳು ಕಲ್ಲು ತೂರಾಟ ಮತ್ತು ಚಪ್ಪಲಿ ಎಸೆದಿರುವುದು ಖಂಡನೀಯ. ಈ ಘಟನೆಯಲ್ಲಿ ಎಸ್ಪಿ ಹಾಗೂ ಪೊಲೀಸ್ ಸಿಬ್ಬಂದಿಗೆ ಗಾಯವಾಗಿದೆ. ಸಮಾಜ ಘಾತುಕ ಶಕ್ತಿಗಳು ಈ ಕೃತ್ಯದಲ್ಲಿ ಭಾಗಿಯಾಗಿದ್ದು, ಅವರೆಲ್ಲರನ್ನು ಕೂಡಲೇ ಬಂಧಿಸಬೇಕು. ಇಂತಹ ಕೃತ್ಯಗಳಿಂದ ಹಿಂದೂ ಸಮಾಜವನ್ನು ಹೆದರಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರು ಈ ದೇಶದ ಕಾನೂನು ಪಾಲಿಸಬೇಕು ಜೊತಗೆ ಗೌರವಿಸಬೇಕು ಎಂದರು.

## ಮಧ್ಯಪ್ರವೇಶಿಸದಿದ್ದರೆ ಪಕ್ಷಕ್ಕೆ ತೊಂದರೆ

• ಉದಯವಾಹಿನಿ, ಬಾಗಲಕೋಟೆ

ಸಿಎಂ ಬದಲಾವಣೆ ಕುರಿತು ರಾಜ್ಯದಲ್ಲಿರುವ ಗೊಂದಲವನ್ನು ಬಗೆಹರಿಸಲು ನೀವು ಮಧ್ಯಪ್ರವೇಶಿಸಬೇಕು. ಇಲ್ಲದಿದ್ದರೆ ಪಕ್ಷಕ್ಕೆ ತೊಂದರೆಯಾಗುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದೇವೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೊಂದಲ ಮುಂದುವರೆದರೆ ಕಾರ್ಯಕರ್ತರು, ಸರ್ಕಾರಕ್ಕೆ ತೊಂದರೆ ಎಂದು ತಿಳಿಸಿದ್ದೇವೆ.ಆದಷ್ಟು ಬೇಗ ಮಾಡುತ್ತೇವೆ ಎಂದಿದ್ದಾರೆ ಎಂದು ತಿಳಿಸಿದರು. ರಾಜ್ಯ ಬಜೆಟ್ ಬಳಿಕ ಮಹತ್ತರ ಬದಲಾವಣೆಯಾಗುವ ಬಗ್ಗೆ ಗೊತ್ತಿಲ್ಲ. ಗೊಂದಲ ನಿಲ್ಲಲಿ ಎನ್ನುವುದಷ್ಟೇ ನಮ್ಮ ವಿಚಾರ. ಎರಡೂವರೆ ವರ್ಷ ಎಂಬುದನ್ನು ನಾವು ಕೇಳಿಲ್ಲ. ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ. ಉಳಿದದ್ದು ಹೈಕಮಾಂಡ್‌ಗೆ ಬಿಟ್ಟದ್ದು ಎಂದರು.



**ಮುಂದಿನ ಸಿಎಂ ಸತೀಶಣ್ಣಾ**

ತಾಲ್ಲೂಕಿನ ಅಂಬಡಗಟ್ಟಿ ಕ್ರಾಸ್‌ನ ಖಾಸಗಿ ಕಾರ್ಯಕ್ರಮಕ್ಕಾಗಿ ಭಾನುವಾರ ಆಗಮಿಸಿದ್ದ ಸಚಿವ ಸತೀಶ ಜಾರಕಿಹೊಳಿ ಅವರನ್ನು ಕಂಡ ಅಭಿಮಾನಿಗಳು, ಮುಂದಿನ ಸಿ.ಎಂ ಎಂದು ಘೋಷಣೆ ಕೂಗಿ ಹರ್ಷ ವ್ಯಕ್ತಪಡಿಸಿದರು. ಕಲ್ಯಾಣ ಮಂಟಪದ ಆವರಣದಲ್ಲಿ ಮುಂದಿನ ಮುಖ್ಯಮಂತ್ರಿ ಸತೀಶಣ್ಣಾ ಜಾರಕಿಹೊಳಿ ಎಂಬ ನಾಮಫಲಕಗಳು ರಾರಾಜಿಸಿದವು.

## ತುಂಗಭದ್ರಾ ಅಣೆಕಟ್ಟೆ ಸಮೀಪಕ್ಕೆ ರೈತರ ಭೇಟಿ

• ಉದಯವಾಹಿನಿ, ಹೊಸಪೇಟೆ



ಉದಯವಾಹಿನಿ ಚಿತ್ರ

**ಕ್ರೆಸ್ಟ್‌ಗೇಟ್ ಅಳವಡಿಕೆ ಪರಿಶೀಲನೆ**

ಇಲ್ಲಿಗೆ ಸಮೀಪದ ತುಂಗಭದ್ರಾ ಅಣೆಕಟ್ಟೆಯಲ್ಲಿ ಹೊಸ ಕ್ರೆಸ್ಟ್‌ಗೇಟ್ ಅಳವಡಿಕೆ ಕೆಲಸ ಇದೀಗ ನಡೆಯುತ್ತಿದ್ದು, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಹಾಗೂ ಇತರರು ಸೋಮವಾರ ಅಣೆಕಟ್ಟೆ ಸಮೀಪಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಆದರೆ ರೈತ ಮುಖಂಡರಿಗೆ ಅಣೆಕಟ್ಟೆಯ ಒಳಗೆ ತೆರಳಿ ಪ್ರತಿಯೊಂದು ಕ್ರೆಸ್ಟ್ ಗೇಟ್ ಸಮೀಪ ನಡೆಯುತ್ತಿರುವ ಅಳವಡಿಕೆ ಕಾಮಗಾರಿ ಪರಿಶೀಲಿಸಲು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ಅವಕಾಶ ನೀಡಲಿಲ್ಲ. ಸದ್ಯ ಬೃಹತ್ ಯಂತ್ರಗಳ ಮೂಲಕ ವಿವಿಧ ಗೇಟ್‌ಗಳ ಸಮೀಪ ಅಳವಡಿಕೆ ಕೆಲಸ ನಡೆಯುತ್ತಿದೆ.

ಈ ಹಂತದಲ್ಲಿ ಅಲ್ಲಿಗೆ ತೆರಳುವುದು ಅಪಾಯಕಾರಿ ಎಂಬ ಕಾರಣಕ್ಕೆ ಅಣೆಕಟ್ಟೆಯ ಒಳಗಡೆ ಯಾರನ್ನೂ ಬಿಟ್ಟಿಲ್ಲ. ರೈತ ಮುಖಂಡರಿಗೆ ಪಕ್ಕದಲ್ಲಿ ನಡೆಯುತ್ತಿರುವ ಗೇಟ್‌ಗಳ ರಚನೆ, ಸಿದ್ಧತಾ ಕೆಲಸಗಳನ್ನು, ತುಂಗಭದ್ರಾ ಮಂಡಳಿ ಕಚೇರಿ ಸಮೀಪದ ಗೇಟ್ ರಚನೆ ಕೆಲಸ ನೋಡಿಕೊಂಡು ಬರಲು ಅವಕಾಶ ನೀಡಲಾಗಿದೆ ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

33 ಗೇಟ್‌ಗಳ ಪೈಕಿ ಸದ್ಯ 11 ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ. ಮಂಗಳವಾರ 12ನೇ ಗೇಟ್‌ನಲ್ಲಿ ಸಹ ಅಳವಡಿಕೆ ಪೂರ್ಣಗೊಳ್ಳಲಿದೆ. ಕೆಲಸ ಭರದಿಂದ ಸಾಗಿದೆ. ನಿಗದಿತ ಸಮಯದೊಗೆ ಕಾಮಗಾರಿ ಮುಕ್ತಾಯಗೊಳ್ಳುವ ವಿಶ್ವಾಸ ಇದೆ ಎಂದು ಅವರು ಹೇಳಿದರು.

# ಚಂದಾ ಹಣದಿಂದ ರಸ್ತೆ ನಿರ್ಮಿಸಿಕೊಂಡ ರೈತರು

• ಉದಯವಾಹಿನಿ, ಔರಾದ್

ತಾಲ್ಲೂಕಿನ ತೇಗಂಪುರ ರೈತರು ತಮ್ಮ ಹೊಲಗಳಿಗೆ ತೆರಳಲು, ನಮ್ಮ ಹೊಲ, ನಮ್ಮ ರಸ್ತೆ ಯೋಜನೆ ನೆರವಿಗೆ ಬರಲಿಲ್ಲ. ಹೀಗಾಗಿ ರೈತರು ತಾವೇ ಸೇರಿಕೊಂಡು, ತಮ್ಮ ಹೊಲಗಳಿಗೆ ಹೋಗಿ ಬರಲು ರಸ್ತೆ ನಿರ್ಮಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಅರ್ಧ ರಸ್ತೆ ನಿರ್ಮಿಸಿಕೊಂಡಿದ್ದು, ಇನ್ನರ್ಧ ರಸ್ತೆ ಕೆಲಸ ಚಾಲನೆಯಲ್ಲಿದೆ.

ಸುಮಾರು 80ಕ್ಕೂ ಹೆಚ್ಚು ರೈತರು ತಮ್ಮ ಹೊಲಗಳಿಗೆ ಹೋಗಿ ಬರಲು ಹಾಗೂ ತಾವು ಬೆಳೆಸಿದ ಕೃಷಿ ಉತ್ಪನ್ನ ಸಾಗಿಸಲು ತೊಂದರೆ ಆಗುತ್ತಿರುವ ಹಿನ್ನೆಲೆಯಲ್ಲಿ ಚಂದಾ ಸಂಗ್ರಹಿಸಿ, ಕಚ್ಚಾ ರಸ್ತೆ ಕಾಮಗಾರಿ ಕೈಗೊಂಡಿದ್ದಾರೆ. ಸುಮಾರು 1 ಕಿ.ಮೀ. ಕಚ್ಚಾ ರಸ್ತೆ ನಿರ್ಮಿಸಲು ಅಗತ್ಯವಿರುವ ಮರಬ್ ತಂದು ಹಾಕಿದ್ದಾರೆ. ಇದಕ್ಕಾಗಿ ಸದ್ಯ 3 ಲಕ್ಷ ಚಂದಾ ಮಾಡಿದ್ದಾರೆ. ಕೆಲ ರೈತರು ತಮ್ಮಲ್ಲಿರುವ ಟ್ರಾಕ್ಟರ್ ರಸ್ತೆ ಕೆಲಸಕ್ಕೆ ಬಳಸಿಕೊಳ್ಳಲು ಉಚಿತವಾಗಿ ನೀಡಿದ್ದಾರೆ. ಈ ರಸ್ತೆ ನಿರ್ಮಿಸಲು ರೈತರು ಸ್ವಯಂ ಪ್ರೇರಣೆಯಿಂದ ಮುಂದೆ ಬಂದಿದ್ದಾರೆ. ಮೊದಲೇ ಇಲ್ಲಿ ಕಾಲು ದಾರಿಯಿದೆ. ಈಗ 12 ಅಡಿಯಷ್ಟು ಅಗಲ ಪ್ರದೇಶದಲ್ಲಿ ಕಲ್ಲು ಮುಳ್ಳು ತೆರವುಗೊಳಿಸಲಾಗಿದೆ. ಮರಬ್ ಹಾಕುವ ಕೆಲಸ ನಡೆಸಿದ್ದು, ವಾರದಲ್ಲಿ ಕಚ್ಚಾ ರಸ್ತೆ ಆಗಲಿದೆ ಎಂದು ತೇಗಂಪುರ ರೈತ ಶಿವಕಾಂತ ಮಜಗೆ ತಿಳಿಸಿದ್ದಾರೆ.

ಸುಮಾರು 200 ಎಕರೆ ಪ್ರದೇಶಕ್ಕೆ ಹೋಗುವ ರೈತರಿಗೆ ದಾರಿಯಿಲ್ಲ. ಮಳೆಗಾಲದಲ್ಲಿ ಹೊಲಕ್ಕೆ ಹೋಗಲು ಹರಸಹಾಸ ಪಡೆಬೇಕಾಗುತ್ತದೆ. ಊರಲ್ಲಿ ಯಾರಾದರೂ ನಿಧನರಾದರೆ ಅಷ್ಟು ದೂರ ಶವ ಸಾಗಿಸಲು ರೈತರು, ಸಂಕಟ ಪಡುವುದನ್ನು ನಾನು ಕಣ್ಣಾರೇ ನೋಡಿದ್ದೇನೆ. ಈ ಕಾರಣಕ್ಕಾಗಿಯೇ ಚಂದಾ ಸಂಗ್ರಹಿಸಿ, ಕಚ್ಚಾ ರಸ್ತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಶರಣಪ್ಪ ಚಿಟ್ಟೆ ಹೇಳಿದರು.

ನಾಲ್ಕೈದು ವರ್ಷಗಳಿಂದ ನಮ್ಮ ಹೊಲ ನಮ್ಮ ರಸ್ತೆ ಯೋಜನೆಯಡಿ ರಸ್ತೆ ಮಾಡಿಕೊಡುವಂತೆ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದ್ದೇವೆ. ಸ್ಥಳೀಯ ಜನಪ್ರತಿನಿಧಿಗಳು ನಮ್ಮ ಬೇಡಿಕೆಗೆ ಸ್ಪಂದಿಸದ ಕಾರಣ ಚಂದಾ ವಸೂಲಿ ಮಾಡಿ ರಸ್ತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

### ಧೃತಿಗೆಡಿಸಿವೆ ಹೊಲದ ಕೂಗುಮಾರಿಗಳು; ಶಬ್ದ ಮಾಲಿನ್ಯ ವಿರುದ್ಧ ಬೇಕಿದೆ ಜಾಗೃತಿ, ಬೆಳೆ ರಕ್ಷಣೆಗೆ ತಾಂತ್ರಿಕ ಹಿಂಸೆ

# ಕೂಗುಮಾರಿಗಳಿಂದ ಪಟ್ಟಣ, ಗ್ರಾಮಗಳ ಜನತೆ ಹೈರಾಣ

• ಉದಯವಾಹಿನಿ, ಬೀದರ್

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಬ್ರಿಟಿಷರು ರಾಜಕೀಯ ಕೈದಿಗಳನ್ನು ಕೂಡಿಹಾಕುತ್ತಿದ್ದ ಜೈಲು ಕೋಣೆಯಲ್ಲಿ ಕಬ್ಬಿಣದ ಮೇಜೊಂದನ್ನು ಇಟ್ಟು ಅದಕ್ಕೆ ಕಬ್ಬಿಣದ ಸರಳಿನಿಂದ ನಿರಂತರ ಹೊಡೆಯುವುದರ ಮೂಲಕ ಕರ್ಕಶ ಶಬ್ದ ಹೊಮ್ಮಿಸಿ, ಬಂದಿಗಳ ನಿದ್ರೆಗೆಡಿಸುತ್ತಿದ್ದರಂತೆ. ಇದರಿಂದ ಕೈದಿಗಳ ದೈಹಿಕ, ಮಾನಸಿಕ ಆರೋಗ್ಯ ಕಳೆಯುವುದು ಅಂದಿನ ಆಡಳಿತದ ಲೆಕ್ಕಾಚಾರ ವಾಗಿತ್ತು. ಅಂತಹದೇ ಶಿಕ್ಷೆಯನ್ನು ನೆನಪಿಸುವಂತಹ ಸನ್ನಿವೇಶ ಇತ್ತೀಚಿನ ದಿನಗಳಲ್ಲಿ ಪಟ್ಟಣ ಮತ್ತು ಗ್ರಾಮಗಳ ಸುತ್ತ ನಿರ್ಮಾಣವಾಗಿದೆ.

ಇದು ಯಾವುದೋ ನ್ಯಾಯಾಲಯ ನೀಡಿರುವ ಶಿಕ್ಷೆಯಲ್ಲಿ, ಪ್ರಾಣಿಪಕ್ಷಿಗಳಿಂದ ಬೆಳೆ ರಕ್ಷಣೆಗಾಗಿ ಹೊಲಗದ್ದೆಗಳಲ್ಲಿ ರೈತರು ಧ್ವನಿವರ್ಧಕಗಳನ್ನು ಅಳವಡಿಸಿ ಕರ್ಕಶ ಶಬ್ದಗಳನ್ನು ಹೊರ ಹೊಮ್ಮಿಸುತ್ತಿದ್ದು, ಇಂತಹ ಕೂಗುಮಾರಿಗಳಿಂದ ಪಟ್ಟಣ, ಗ್ರಾಮಗಳ ಜನತೆ ಹೈರಾಣಾಗುತ್ತಿದ್ದಾರೆ. ಬೆಳ್ಳಂಬೆಳಗ್ಗೆ ಹಕ್ಕಿಗಳು ಚಿಲಿಪಿಲಿ ಗುಟ್ಟಲು ಆರಂಭಿಸುತ್ತಿದ್ದಂತೆ ಶುರುವಾಗುವ ಕರ್ಕಶ ಶಬ್ದವು ಬೆಳಗ್ಗೆ 10 ಗಂಟೆಯವರೆಗೂ ತಡೆ ಇಲ್ಲದೆ ಕೇಳುತ್ತಿರುತ್ತದೆ. ಮತ್ತೆ ಸಂಜೆ 5 ಗಂಟೆಗೆ ಶುರುವಾಗುವ ಶಬ್ದ ನಿಲ್ಲುವುದು ರಾತ್ರಿ 11 ಗಂಟೆ ಹೊತ್ತಿಗೆ. ಇಷ್ಟೂ ಅವಧಿಯಲ್ಲಿ ಆ ಶಬ್ದವು ವ್ಯಾಪಿಸುವ ಸುಮಾರು ಎರಡು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ನಿವಾಸಿಗಳು ವಿಚಿತ್ರ, ಅವ್ಯಕ್ತ ಹಿಂಸೆಯನ್ನು ಅನುಭವಿಸುವಂತಾಗಿದೆ. ಇದು ಒಂದು ರೀತಿಯಲ್ಲಿ ಹೇಳಿಕೊಳ್ಳುವಷ್ಟು ದೊಡ್ಡದಲ್ಲದೆ, ನಿರ್ಲಕ್ಷಿಸುವಷ್ಟು ಚಿಕ್ಕದಲ್ಲದೆ ಸಮಸ್ಯೆಯಾಗಿದ್ದರೂ ಜನರನ್ನು ನಿತ್ಯ ತಳಮಳಕ್ಕೆ ತಳ್ಳುತ್ತಿದೆ. ಜನರು ತಮ್ಮಲ್ಲೇ ತಾವೇ ನಿಂದಿಸಿಕೊಳ್ಳುತ್ತಾ, ಕೀಟಲೆ ಅನುಭವಿಸುತ್ತಿದ್ದಾರೆ ಹಿಂದಿನ ಕಾಲದಿಂದಲೂ ಪ್ರಾಣಿ, ಪಕ್ಷಿಗಳಿಂದ ಬೆಳೆಗಳನ್ನು ರಕ್ಷಿಸಿಕೊಳ್ಳಲು ರೈತರು ಹಲವು ತಂತ್ರಗಳನ್ನು ಬಳಸುತ್ತಿದ್ದರು, ಕಬ್ಬಿಣದ ತಗಡನ್ನು ಹಿಡಿದುಕೊಂಡು ಕೋಲಿಂದ ಶಬ್ದ ಮಾಡುವುದು, ಕಟ್ಟಿಗೆಗೆ ಪ್ಲಾಸ್ಟಿಕ್ ಪೇಪರ್ ಸುತ್ತಿ ಗಾಳಿಗೆ ಶಬ್ದ ಉಂಟಾಗುವಂತೆ ಮಾಡುವುದು, ಕವಣೆಯಿಂದ ಕಲ್ಲು ಬೀಸುವುದು ಮುಂತಾದ ಕ್ರಮಗಳನ್ನು ಅನುಸರಿಸುತ್ತಿದ್ದರು ಆದರೆ, ತಾಂತ್ರಿಕತೆ ಮುಂದುವರಿದಂತೆ ಪಾರಂಪರಿಕ ವಿಧಾನಗಳನ್ನು ಕೈಬಿಟ್ಟು, ವಿದ್ಯುತ್ ಬಳಸಿಕೊಂಡು ಸ್ವಯಂ ಶಬ್ದ ಮಾಡುವ ಸ್ಪೀಕರ್‌ಗಳನ್ನು ಹೊಲಗಳಲ್ಲಿ ಅಳವಡಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಸ್ಪೀಕರ್‌ಗಳಲ್ಲಿ ಕರ್ಕಶ ಧ್ವನಿಯನ್ನು ಅಳವಡಿಸಿರುವುದರಿಂದ ಪಕ್ಷಿಗಳಿಗೆ ಭಯ ಉಂಟುಮಾಡಿ ಅವುಗಳಿಂದ ಬೆಳೆಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಆದರೆ ಈ ಪ್ರಕ್ರಿಯೆ ಸುತ್ತಲ ನಿವಾಸಿಗಳಲ್ಲಿ, ಸ್ವತಃ ಮುಗ್ಧ ಪ್ರಾಣಿ, ಪಕ್ಷಿಗಳಲ್ಲಿ ಹೇಳಿಕೊಳ್ಳಲಾಗದ ಆತಂಕಕ್ಕೆ ಕಾರಣವಾಗುವಂತಿದೆ. ಈ ನಿಟ್ಟಿನಲ್ಲಿ ಕೃಷಿ, ಪರಿಸರ ಮತ್ತು ಪೊಲೀಸ್ ಇಲಾಖೆಯವರು ತಾಂತ್ರಿಕ ಹಿಂಸೆಗೆ ಇಳಿದ ರೈತರಿಗೆ ಸರಿಯಾದ ಜಾಗೃತಿ ಮೂಡಿಸಬೇಕಿದೆ, ಮತ್ತೊಬ್ಬರಿಗೆ ತೊಂದರೆಯಾಗದ ರೀತಿಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟವರು ಕ್ರಮ ವಹಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ.




ಉದಯವಾಹಿನಿ ಚಿತ್ರ

> ಬೆಳೆ ರಕ್ಷಣೆಗೆ ಸ್ಪೀಕರ್ ಅಳವಡಿಸಿದ ಹೊಲದ ಆಸುಪಾಸಿನ ಮನೆಗಳ ವೃದ್ದರು. ಮಕ್ಕಳು, ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಹಲವು ಕಾಯಿಲೆಗಳಿಂದ ಬಳಲುತ್ತಿರುವ ಹಿರಿಯ ನಾಗರಿಕರು ಕರ್ಕಶ ಶಬ್ದದಿಂದ ಕಿರಿಕಿರಿ ಅನುಭವಿಸುತ್ತಿದ್ದು, ವಿವಿಧ ದೈಹಿಕ, ಮಾನಸಿಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಬೆಳೆಗಾರರು ಈ ಸಮಸ್ಯೆಯನ್ನು ಅರಿಯಬೇಕಿದೆ.
>
> -ಬಾಲಾಜಿ ಮಾನೆ, ಯುವ ರೈತ ಸಂತಪೂರ

**ರೈತನ ಮಿತ್ರ ಹಕ್ಕಿ**

ಬೆಳೆ ಕಾಪಾಡಿಕೊಳ್ಳಲು ಸ್ಪೀಕರ್ ಅಳವಡಿಕೆಯಿಂದ ಪ್ರಯೋಜನ ಇಲ್ಲ, ಪಕ್ಷಿಗಳು ತೆನೆ, ಕಾಳು ತಿನ್ನಲಷ್ಟೇ ಹೊಲಗಳಿಗೆ ಬರುವುದಿಲ್ಲ. ಹೊಲಗಳಲ್ಲಿ ಬೆಳೆಗಳಿಗೆ ಮಾರಕನಾಗುವ ಕ್ರಿಮಿಕೀಟಗಳನ್ನೂ ತಿನ್ನುವ ಹಕ್ಕಿಗಳಿದ್ದು ಅವು ನಿಜಕ್ಕೂ ರೈತ ಮಿತ್ರರಾಗಿವೆ, ಕರ್ಕಶ ಶಬ್ದದಿಂದ ರೈತೋಪಯೋಗಿ ಪಕ್ಷಿಗಳು ಹೊಲದತ್ತ ಸುಳಿಯದಂತಾಗಿ ಬೆಳೆಗಳು ನಾನಾ ರೋಗಗಳಿಗೆ ತುತ್ತಾಗುವ ಆಪಾಯವಿರುತ್ತದೆ.

# ಯಶ್ 'ಟಿಕೆಟ್' ಲುಕ್ ಎಐ ಎಂದವರಿಗೆ ಸಿಕ್ತು ಉತ್ತರ



ಯಶ್ ಅವರ 'ಟಾಕ್ಸಿಕ್' ಚಿತ್ರದ 'ಟಿಕೆಟ್' ಲುಕ್ ಎಐ ಸೃಷ್ಟಿ ಎಂಬ ವದಂತಿಗಳಿಗೆ ತೆರೆ ಬಿದ್ದಿದೆ.

ಸೆಲೆಬ್ರಿಟಿ ಹೇರ್‌ಸ್ಟೈಲಿಸ್ಟ್ ಅಲೆಕ್ಸ್ ವಿಜಯ್ ಕಾಂತ್ ಹಂಚಿಕೊಂಡ ವಿಡಿಯೋದಲ್ಲಿ, ಯಶ್ ಅವರ ನಿಜವಾದ ಮೇಕೋವರ್ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಪರ್ಫೆಕ್ಷನಿಸ್ಟ್ ಯಶ್ ತಮ್ಮ ಪಾತ್ರಕ್ಕಾಗಿ ವಹಿಸಿದ ಕಾಳಜಿ ಮತ್ತು ಶ್ರಮದಿಂದ ಈ ಯಂಗ್ ಲುಕ್ ಪಡೆದಿರುವುದು ದೃಢಪಟ್ಟಿದೆ. 'ಟಾಕ್ಸಿಕ್' ಚಿತ್ರದ ಮೂಲಕ ಯಶ್ ಅವರು ಜನರ ಎದುರು ಬರಲು ರೆಡಿ ಆಗಿದ್ದಾರೆ. ಈ ಚಿತ್ರದ ಟೀಸರ್ ಗಮನ ಸೆಳೆದಿದೆ.

ಈ ಸಿನಿಮಾದಲ್ಲಿ ಯಶ್ ಅವರು ಎರಡು ಲುಕ್ ಅಲ್ಲಿ ಕಾಣಿಸಿಕೊಂಡಿದ್ದಾರೆ. ಒಂದು ರಾಯ ಮತ್ತೊಂದು ಟಿಕೆಟ್. ಈ ಲುಕ್ ಅಲ್ಲಿ ಯಶ್ ಯಂಗ್ ಆಗಿ ಕಾಣಿಸಿಕೊಂಡಿದ್ದಾರೆ.

ಈ ಲುಕ್ ಗಮನ ಸೆಳೆಯೋ ರೀತಿಯಲ್ಲಿ ಇದೆ. ಇದನ್ನು ಎಐ ಮೂಲಕ ಮಾಡಲಾಗಿದೆ ಎಂದು ಹೇಳಲಾಗಿತ್ತು. ಇದಕ್ಕೆ ಉತ್ತರ ಸಿಕ್ಕಿದೆ.

ಯಶ್ ಅವರು ಪರ್ಫೆಕ್ಷನಿಸ್ಟ್. ಏನೇ ಮಾಡಿದರೂ ಪರ್ಫೆಕ್ಟ್ ಆಗಿ ಮಾಡಬೇಕು ಎಂದು ಬಯಸುತ್ತಾರೆ. 'ಕೆಜಿಎಫ್', 'ಕೆಜಿಎಫ್ 2' ಚಿತ್ರಗಳಲ್ಲಿ ಇದು ಕಾಣಿಸಿದೆ. 'ಟಾಕ್ಸಿಕ್' ಸಿನಿಮಾದಲ್ಲಿ ಅವ ಜವಾಬ್ದಾರಿ ಹೆಚ್ಚಿದೆ. ಅವರು ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ನಿರ್ಮಾಪಕರಲ್ಲಿ ಅವರೂ ಒಬ್ಬರು. ಹೀಗಾಗಿ, ಸಿನಿಮಾ ಮೇಕಿಂಗ್ ವಿಷಯದಲ್ಲಿ ಅವರೂ ಜವಾಬ್ದಾರಿ ವಹಿಸಿಕೊಂಡಿದ್ದಾರೆ. 'ಟಾಕ್ಸಿಕ್' ಚಿತ್ರದಲ್ಲಿ ಬರೋ ಟಿಕೆಟ್ ಪಾತ್ರವನ್ನು ಅವರೇ ನಿಂತು ಮಾಡಿಸಿದ್ದಾರೆ ಎನ್ನಲಾಗುತ್ತಿದೆ. ಯಶ್ ಅವರ ಲುಕ್‌ನ ಹೇಗೆ ಬದಲಾಯಿಸಲಾಯಿತು ಎಂಬುದಕ್ಕೆ ಸೆಲೆಬ್ರಿಟಿ ಹೇರ್‌ಸ್ಟೈಲಿಸ್ಟ್ ಅಲೆಕ್ಸ್ ವಿಜಯ್ ಕಾಂತ್ ವಿಡಿಯೋ ಹಂಚಿಕೊಂಡಿದ್ದಾರೆ. ಈ ವಿಡಿಯೋದಲ್ಲಿ ಯಶ್ ಮೇಕೋವರ್ ತೋರಿಸಲಾಗಿದೆ.

ಹೇರ್ ಕಟಿಂಗ್, ಗಡ್ಡ ಟ್ರಿಮ್ ಮಾಡಿ ಬಳಿಕ ಯಶ್ ಅವರು ಸಖತ್ ಯಂಗ್ ಆಗಿ ಕಾಣಿಸಿದ್ದಾರೆ. ಈ ಲುಕ್ ಗಮನ ಸೆಳೆಯೋ ರೀತಿಯಲ್ಲಿ ಇದೆ. 'ಟಾಕ್ಸಿಕ್' ಸಿನಿಮಾದಲ್ಲಿ ಯಶ್ ಅವರ ಈ ಲುಕ್ ಐಡಿಯಾ ಯಾರಿಗೆ ಬಂದಿದ್ದು ಎಂಬುದು ಇನ್ನೂ ರಿವೀಲ್ ಆಗಿಲ್ಲ. ಈ ವಿಷಯದಲ್ಲಿ ಮುಂದಿನ ದಿನಗಳಲ್ಲಿ ಮಾಹಿತಿ ನೀಡುವ ಸಾಧ್ಯತೆ ಇದೆ. 'ಟಾಕ್ಸಿಕ್' ಸಿನಿಮಾಗೆ ಭರ್ಜರಿ ಈವೆಂಟ್ ಆಯೋಜನೆ ಮಾಡವ ಸಾಧ್ಯತೆ ಇದೆ.

# ರಶ್ಮಿಕಾ, ವಿಜಯ್ ಪರಸ್ಪರ ಕರೆಯೋದು ಹೀಗೆ

# ಅವರು ರಶೀ ಇವರು ವಿಜು



ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ನಡುವೆ ಪ್ರೀತಿ, ಪ್ರೇಮ ಚಿಗುರಿದ್ದು ಇಂದು, ನಿನ್ನೆ ಅಲ್ಲ, ಹಲವು ವರ್ಷಗಳಿಂದ ಅವರಿಬ್ಬರು ಪ್ರೀತಿಸುತ್ತಿದ್ದಾರೆ. ಆದರೆ ಬಹಿರಂಗವಾಗಿ ಒಪ್ಪಿಕೊಂಡಿರಲಿಲ್ಲ ಅಷ್ಟೇ. ಈಗ ಅವರಿಬ್ಬರು ಹಸೆಮಣೆ ಏರಲು ಸಜ್ಜಾಗಿದ್ದಾರೆ. ಕುಟುಂಬದವರು ಮತ್ತು ಆಪ್ತರ ಸಮ್ಮುಖದಲ್ಲಿ ಮದುವೆ ನಡೆಯಲಿದೆ.


ನಟಿ ರಶ್ಮಿಕಾ ಮಂದಣ್ಣ ಮತ್ತು ನಟ ವಿಜಯ್ ದೇವರಕೊಂಡ ಅವರು ವೈವಾಹಿಕ ಜೀವನಕ್ಕೆ ಕಾಲಿಡುತ್ತಿದ್ದಾರೆ. ಉದಯಪುರದಲ್ಲಿ ಫೆಬ್ರವರಿ 26ರಂದು ಈ ಸೆಲೆಬ್ರಿಟಿ ಜೋಡಿಯ ಮದುವೆ ನಡೆಯಲಿದೆ. ಹಲವು ವರ್ಷಗಳ ಕಾಲ ಪರಸ್ಪರ ಪ್ರೀತಿಸಿದ್ದ ರಶ್ಮಿಕಾ ಮತ್ತು ವಿಜಯ್ ದೇವರಕೊಂಡ ಅವರು ಈ ಮೊದಲೇ ಹಲವು ಬಾರಿ ಸೂಚನೆ ನೀಡಿದ್ದರು. ನೇರವಾಗಿ ಪ್ರೀತಿಯನ್ನು ಒಪ್ಪಿಕೊಳ್ಳದೇ ಇದ್ದರೂ ಕೂಡ ಅವರ ವರ್ತನೆಯಲ್ಲಿ ಎಲ್ಲವೂ ಗೋಚರ ಆಗುತ್ತಿತ್ತು. ಪರಸ್ಪರ ಪ್ರೀತಿಯಿಂದ ಅಡ್ಡಹೆಸರು ಕರೆಯುತ್ತಿದ್ದಿದ್ದೇ ಈ ಮಾತಿಗೆ ಸಾಕ್ಷಿ.

ರಶ್ಮಿಕಾ ಮಂದಣ್ಣ ಅವರು ವಿಜಯ್ ದೇವರಕೊಂಡ ಅವರನ್ನು ವಿಜು ಎಂದು ಕರೆಯುತ್ತಿದ್ದರು. ಅದೇ ರೀತಿ, ರಶ್ಮಿಕಾ ಮಂದಣ್ಣ ಅವರನ್ನು ವಿಜಯ್ ದೇವರಕೊಂಡ ಅವರು ರಶೀ ಎಂದು ಕರೆಯುತ್ತಿದ್ದರು. ಇದೆಲ್ಲ ಗುಟ್ಟಾಗಿ ನಡೆದಿದ್ದಲ್ಲ. ಸೋಶಿಯಲ್ ಮೀಡಿಯಾದಲ್ಲಿ ಕೂಡ ರಶ್ಮಿಕಾ ಮಂದಣ್ಣ ಅವರು ಪ್ರೀತಿಯಿಂದ ವಿಜು ಎಂದು ಕರೆದಿದ್ದರು. ಆಗಲೇ ಅಭಿಮಾನಿಗಳಿಗೆ ಎಲ್ಲವೂ ಖಚಿತ ಆಗಿತ್ತು. ಕನ್ನಡ ಚಿತ್ರರಂಗದಲ್ಲಿ ಖ್ಯಾತಿ ಗಳಿಸಿದ ಬಳಿಕ ರಶ್ಮಿಕಾ ಮಂದಣ್ಣ ಅವರು ತೆಲುಗು ಚಿತ್ರರಂಗಕ್ಕೆ ಹಾರಿದರು. ಅಲ್ಲಿ ಅವರಿಗೆ ವಿಜಯ್ ದೇವರಕೊಂಡ ಜೊತೆ ಆಪ್ತತೆ ಬೆಳೆಯಿತು. ಇಬ್ಬರು ಜೊತೆಯಾಗಿ 'ಗೀತ ಗೋವಿಂದಂ', 'ಡಿಯರ್ ಕಾಮ್ರೇಡ್' ಸಿನಿಮಾಗಳನ್ನು ಮಾಡಿದರು.

ಆ ನಂತರ ಅವರು ಇನ್ನಷ್ಟು ಕ್ಲೋಸ್ ಆದರು. ಅವರಿಬ್ಬರ ನಡುವೆ ಪ್ರೀತಿ ಚಿಗುರಿತು. 2025ರ ಅಕ್ಟೋಬರ್ ತಿಂಗಳಲ್ಲಿ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರು ನಿಶ್ಚಿತಾರ್ಥ ಮಾಡಿಕೊಂಡರು. ಆದರೆ ಒಂದೇ ಒಂದು ಫೋಟೋ ಕೂಡ ಹೊರಬರಲಿಲ್ಲ.

ಆ ನಂತರ 'ದಿ ಗರ್ಲ್‌ಫ್ರೆಂಡ್' ಸಿನಿಮಾದ ಸಕ್ಸಸ್ ಮೀಟ್‌ನಲ್ಲಿ ರಶ್ಮಿಕಾ ಕೈಗೆ ವಿಜಯ್ ದೇವರಕೊಂಡ ಕಿಸ್ ಮಾಡಿದರು. ಆ ಮೂಲಕ ಅವರು ಪರೋಕ್ಷವಾಗಿ ತಮ್ಮ ಎಂಗೇಜ್‌ಮೆಂಟ್ ವಿಷಯವನ್ನು ಒಪ್ಪಿಕೊಂಡಂತೆ ಆಗಿತ್ತು.

# 10 ಕೋಟಿ ಮಂದಿ ಚಿತ್ರಮಂದಿರಕ್ಕೆ ಬರುವ ನಿರೀಕ್ಷೆ



ಮಾರ್ಚ್ 19ರಂದು 'ಟಾಕ್ಸಿಕ್' ಮತ್ತು 'ಧುರಂಧರ್ 2' ಸಿನಿಮಾಗಳು ಬಿಡುಗಡೆ ಆಗಲಿವೆ. ಈ ಎರಡೂ ಚಿತ್ರಗಳು ಜನಮನ ಗೆಲ್ಲಲು ಸಫಲವಾದರೆ ದೊಡ್ಡ ಸಿನಿ ಹಬ್ಬ ನಡೆಯಲಿದೆ. ಎರಡೂ ಸಿನಿಮಾ ಸೇರಿಸಿ ಒಟ್ಟು 10 ಕೋಟಿ ಜನರು ಚಿತ್ರಮಂದಿರಕ್ಕೆ ಬರುವ ನಿರೀಕ್ಷೆ ಇದೆ. 2026ರ ಎರಡು ಬಹುನಿರೀಕ್ಷಿತ ಸಿನಿಮಾಗಳು ಒಂದೇ ದಿನ ಬಿಡುಗಡೆ ಆಗುತ್ತಿರುವುದರ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತಿದೆ. 'ಟಾಕ್ಸಿಕ್' ಮತ್ತು 'ಧುರಂಧರ್ 2' ಸಿನಿಮಾಗಳು ಮಾರ್ಚ್ 19ರಂದು ರಿಲೀಸ್ ಆಗಲಿವೆ.

ಈ ಸಿನಿಮಾಗಳ ಕ್ಲ್ಯಾಶ್ ಬಗ್ಗೆ ಬಾಕ್ಸ್ ಆಫೀಸ್ ಪಂಡಿತರು ಹಲವು ರೀತಿ ಅಭಿಪ್ರಾಯಗಳನ್ನು ನೀಡುತ್ತಿದ್ದಾರೆ. ಇಂಥ ಕ್ಲ್ಯಾಶ್ ಉತ್ತಮವಲ್ಲ ಎಂದು ಬಹುತೇಕರು ಹೇಳುತ್ತಿದ್ದಾರೆ. ಅಚ್ಚರಿ ಎಂದರೆ, 'ಧುರಂಧರ್ 2' ಮತ್ತು 'ಟಾಕ್ಸಿಕ್' ಒಟ್ಟು ಸೇರಿ ಬರೋಬ್ಬರಿ 10 ಕೋಟಿ ಪ್ರೇಕ್ಷಕರನ್ನು ಸೆಳೆದುಕೊಳ್ಳಲಿವೆ ಎಂದು ಅಂದಾಜಿಸಲಾಗಿದೆ. ಯಶ್ ಅವರು 'ಟಾಕ್ಸಿಕ್' ಸಿನಿಮಾದಲ್ಲಿ ನಟಿಸಿದ್ದಾರೆ. ಈಗಾಗಲೇ ಈ ಚಿತ್ರದ ಟೀಸರ್ ಧೂಳೆಬ್ಬಿಸಿದೆ. 'ಕೆಜಿಎಫ್: ಚಾಪ್ಟರ್ 2' ಗೆಲುವಿನ ಬಳಿಕ ಯಶ್ ನಟಿಸಿದ ಸಿನಿಮಾ ಎಂಬ ಕಾರಣಕ್ಕೆ 'ಟಾಕ್ಸಿಕ್' ಸಿಕ್ಕಾಪಟ್ಟೆ ಹೈಪ್ ಸೃಷ್ಟಿ ಮಾಡಿದೆ. ಈ ಸಿನಿಮಾಗೆ ಗೀತು ಮೋಹನ್‌ದಾಸ್ ಅವರು ನಿರ್ದೇಶನ ಮಾಡಿದ್ದಾರೆ. ರುಕ್ಮಿಣಿ ವಸಂತ್, ನಯನತಾರಾ ಸೇರಿದಂತೆ ಅನೇಕರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. 'ಧುರಂಧರ್ 2' ಸಿನಿಮಾ ಕೂಡ ಸಣ್ಣದೇನಲ್ಲ. ರಣವೀರ್ ಸಿಂಗ್, ಅರ್ಜುನ್ ರಾಮ್‌ಪಾಲ್, ಸಾರಾ ಅರ್ಜುನ್, ಸಂಜಯ್ ದತ್ ಮುಂತಾದವರು ನಟಿಸಿರುವ ಈ ಸಿನಿಮಾಗೆ ಆದಿತ್ಯ ಧಾರ್ ಅವರು ನಿರ್ದೇಶನ ಮಾಡಿದ್ದಾರೆ. 'ಧುರಂಧರ್' ಸಿನಿಮಾ ಬ್ಲಾಕ್ ಬಸ್ಟರ್ ಹಿಟ್ ಆಗಿರುವುದರಿಂದ ಸೀಕ್ವೆಲ್ ಮೇಲೆ ನಿರೀಕ್ಷೆ ಜಾಸ್ತಿ ಇದೆ. ಮಾರ್ಚ್ 19ರಂದು ಈ ಸಿನಿಮಾ ಕೂಡ ಭರ್ಜರಿ ಓಪನಿಂಗ್ ಪಡೆದುಕೊಳ್ಳಲಿದೆ. ಈ ಎರಡು ಸಿನಿಮಾಗಳ ಪೈಕಿ ಒಂದು ಚಿತ್ರದ ರಿಲೀಸ್ ದಿನಾಂಕ ಮುಂದೂಡಿಕೆ ಆದರೆ ದೊಡ್ಡ ಕ್ಲ್ಯಾಶ್ ತಪ್ಪುತ್ತದೆ. ಎರಡೂ ಸಿನಿಮಾಗಳು ಬೇರೆ ಬೇರೆ ದಿನಾಂಕಗಳಲ್ಲಿ ಬಿಡುಗಡೆ ಆದರೆ ತಲಾ 1000 ಕೋಟಿ ರೂಪಾಯಿ ಕಲೆಕ್ಷನ್ ಮಾಡುವ ಸಾಮರ್ಥ್ಯ ಹೊಂದಿವೆ. ಆದರೆ ಎರಡೂ ಚಿತ್ರತಂಡಗಳು ಹಠಕ್ಕೆ ಬಿದ್ದು ಒಂದೇ ದಿನ ರಿಲೀಸ್ ಆಗುತ್ತಿವೆ.

'ಟಾಕ್ಸಿಕ್' ಚಿತ್ರತಂಡದವರು ಮೊದಲು ರಿಲೀಸ್ ದಿನಾಂಕ ಅನೌನ್ಸ್ ಮಾಡಿದ್ದರು. ಮಾರ್ಚ್ 19ರಂದು ಬಿಡುಗಡೆ ಎಂದು ಖಚಿತಪಡಿಸಿದ್ದರು. ಆದರೆ 'ಧುರಂಧರ್ 2' ಚಿತ್ರತಂಡ ಕೂಡ ಅದೇ ದಿನಾಂಕದಲ್ಲಿ ರಿಲೀಸ್ ಮಾಡುವುದಾಗಿ ಹಠ ಹಿಡಿದಿದೆ. ಬಿಡುಗಡೆಗೆ ಇನ್ನು ಕೆಲವೇ ದಿನಗಳು ಬಾಕಿ ಇರುವಾಗ ಹಲವು ಬಗೆಯ ಲೆಕ್ಕಾಚಾರಗಳು ನಡೆಯುತ್ತಿವೆ.

# ಅಲ್ಲು ಮನೆಯಲ್ಲಿ ಸಂಭ್ರಮ ಆರಂಭ



ಅಲ್ಲು ಸಿರಿಶ್ ಮತ್ತು ನಯನಿಕಾ ಮಾರ್ಚ್ 6ರಂದು ವಿವಾಹವಾಗುತ್ತಿದ್ದಾರೆ. ಇವರ ಮದುವೆ ಸಂಭ್ರಮ ಜೋರಾಗಿದೆ. ಅಲ್ಲು ಅರ್ಜುನ್ ಮತ್ತು ಸ್ನೇಹಾ ರೆಡ್ಡಿ ಇವರಿಗಾಗಿ ಅದ್ದೂರಿ ಪ್ರೀ-ವೆಡ್ಡಿಂಗ್ ಪಾರ್ಟಿ ಆಯೋಜಿಸಿದ್ದರು. ರಾಮ್ ಚರಣ್, ಶ್ರೀಲೀಲಾ ಸೇರಿದಂತೆ ಹಲವು ಸೆಲೆಬ್ರಿಟಿಗಳು ಭಾಗಿಯಾಗಿದ್ದರು.

ಪಾರ್ಟಿಯ ಫೋಟೋಗಳನ್ನು ಹಂಚಿಕೊಂಡ ಅಲ್ಲು ಸಿರಿಶ್, ಇದನ್ನು 'ಮ್ಯಾಡ್ ಪಾರ್ಟಿ' ಎಂದು ಕರೆದಿದ್ದಾರೆ. ಅಲ್ಲು ಅರ್ಜುನ್ ಸಹೋದರು ಅಲ್ಲು ಸಿರಿಶ್ ಅವರು ಮಾರ್ಚ್ 6ರಂದು ವಿವಾಹ ಆಗುತ್ತಿದ್ದಾರೆ.ತಾವು ಪ್ರೀತಿಸುತ್ತಿದ್ದ ನಯಾನಿಕಾ ಜೊತೆ ಅವರು ವಿವಾಹ ಆಗುತ್ತಿದ್ದಾರೆ. ಸದ್ಯ ಸಂಭ್ರಮ ಜೋರಾಗಿದೆ. ಈ ಮೊದಲು ದುಬೈನಲ್ಲಿ ಕುಟುಂಬದವರು ಯಾಚ್ ಪಾರ್ಟಿ ಮಾಡಿದ್ದರು. ಈಗ ಹೈದರಾಬಾದ್‌ನಲ್ಲಿ ದೊಡ್ಡ ಪಾರ್ಟಿ ಆಯೋಜನೆ ಮಾಡಲಾಗಿತ್ತು. ಅಲ್ಲು ಅರ್ಜುನ್ ಹಾಗೂ ಪತ್ನಿ ಸ್ನೇಹಾ ರೆಡ್ಡಿ ಇದನ್ನು ಹೋಸ್ಟ್ ಮಾಡಿದ್ದರು. ವಿವಾಹಕ್ಕೆ ಎರಡು ವಾರ ಇರುವಾಗಲೇ ಪಾರ್ಟಿ ಜೋರಾಗಿದೆ. ಅಲ್ಲು ಅರ್ಜುನ್ ದಂಪತಿ ಆಯೋಜನೆ ಮಾಡಿದ ಪಾರ್ಟಿಗೆ ರಾಮ್ ಚರಣ್, ಉಪಾಸನಾ ಕೊನಿಡೆಲಾ, ಶ್ರೀಲೀಲಾ, ಮಿಹೀಕಾ ಬಜಾಜ್ ಹಾಗೂ ಇತರರು ಭಾಗಿ ಆಗಿದ್ದರು. ಈಗ ಅಲ್ಲು ಸಿರಿಶ್ ಅವರು ಪಾರ್ಟಿ ಹೇಗಿತ್ತು ಎಂಬುದನ್ನು ಹಂಚಿಕೊಂಡಿದ್ದಾರೆ. ಇದನ್ನು ಮ್ಯಾಡ್ ಪಾರ್ಟಿ ಎಂದು ಅವರು ಕರೆದಿದ್ದಾರೆ.

# ದರ್ಶನ್‌ಗೆ ಕೋರ್ಟ್‌ನಿಂದ ಸಿಕ್ತು ಸಣ್ಣ ರಿಲೀಫ್




ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಜೈಲಿನಲ್ಲಿದ್ದು, ಅವರಿಗೆ ನ್ಯಾಯಾಲಯದಿಂದ ಸಣ್ಣ ರಿಲೀಫ್ ಸಿಕ್ಕಿದೆ. ಅಮಾನತುಗೊಂಡಿದ್ದ ಅವರ ಗನ್ ಲೈಸೆನ್ಸ್‌ಗೆ ಹೈಕೋರ್ಟ್ ಮಾರ್ಚ್ 6ರವರೆಗೆ ಮಧ್ಯಂತರ ತಡೆ ನೀಡಿದೆ. ದರ್ಶನ್ ಪರ ವಕೀಲರ ವಾದ ಪುರಸ್ಕರಿಸಿದ ನ್ಯಾಯಾಲಯದ ಈ ಆದೇಶದಿಂದ ನಟನಿಗೆ ತಾತ್ಕಾಲಿಕ ನಿರಾಳತೆ ಸಿಕ್ಕಂತಾಗಿದೆ, ಆದರೆ ಅವರು ಇನ್ನೂ ಜೈಲಿನಲ್ಲೇ ಇದ್ದಾರೆ. ನಟ ದರ್ಶನ್ ಅವರು ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಜೈಲಿನಲ್ಲಿ ಇದ್ದಾರೆ. ಈ ಪ್ರಕರಣದಲ್ಲಿ ಅವರು ಒಮ್ಮೆ ಜಾಮೀನು ಪಡೆದಿದ್ದರು. ನಂತರ ಸುಪ್ರೀಂಕೋರ್ಟ್ ಜಾಮೀನನ್ನು ರದ್ದು ಮಾಡಿತ್ತು. ಈಗ ದರ್ಶನ್ ಅವರ ಪರವಾಗಿ ಕೋರ್ಟ್ ಅಲ್ಲಿ ಆದೇಶ ಒಂದು ಬಂದಿದೆ. ಇದರಿಂದ ಅವರಿಗೆ ಸಣ್ಣ ರಿಲೀಫ್ ಸಿಕ್ಕಿದೆ. ಅಷ್ಟಕ್ಕೂ ದರ್ಶನ್ ಸಲ್ಲಿಕೆ ಮಾಡಿದ್ದ ಅರ್ಜಿ ಏನು ಕೋರ್ಟ್ ಕೊಟ್ಟ ಆದೇಶ ಏನು ಆ ಬಗ್ಗೆ ಇಲ್ಲಿದೆ ವಿವರ. ದರ್ಶನ್ ಅವರು ರೇಣುಕಾ ಸ್ವಾಮಿ ಕೊಲೆ ಕೇಸ್‌ನಲ್ಲಿ ಎ2 ಆಗಿದ್ದಾರೆ. ಅವರಿಗೆ 2024ರಲ್ಲಿ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿತ್ತು. ಜಾಮೀನು ಸಿಕ್ಕ ಬಳಿಕ ಗನ್ ಲೈಸೆನ್ಸ್ ಅನ್ನು ಪೊಲೀಸರು ಅಮಾನತುಗೊಳಿಸಿದ್ದರು. ಈ ಗನ್ ಬಳಸಿ ಸಾಕ್ಷಿಗಳಿಗೆ ಬೆದರಿಸಬಹುದೆಂದು ಗನ್ ಲೈಸೆನ್ಸ್ ಅಮಾನತುಪಡಿಸಲಾಗಿತ್ತು. ನಟ ದರ್ಶನ್ ಅವರು ಪೊಲೀಸರ ಕ್ರಮ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

'2008ರಿಂದಲೂ ದರ್ಶನ್ ಲೈಸೆನ್ಸ್ ಇರುವ ಗನ್ ಹೊಂದಿದ್ದಾರೆ. ಜಾಮೀನು ರದ್ದಾದ ಬಳಿಕ ಗನ್ ಸರಂಡರ್ ಮಾಡಲಾಗಿದೆ. ದರ್ಶನ್ ಹೆಸರಿನ ಕಾರಣಕ್ಕೆ ಲೈಸೆನ್ಸ್ ಅಮಾನತುಪಡಿಸಿದ್ದಾರೆ' ಎಂದು ದರ್ಶನ್ ಪರ ವಕೀಲ ಎಸ್.ಸುನೀಲ್ ಕುಮಾರ್ ವಾದ ಮಾಡಿದರು. 'ಹೆಸರಿನ ಕಾರಣಕ್ಕಲ್ಲ ಆರೋಪವಿರುವ ಕಾರಣಕ್ಕೆ' ಎಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿತು. ಆ ಬಳಿಕ ಗನ್ ಲೈಸೆನ್ಸ್ ಅಮಾನತು ಕ್ರಮಕ್ಕೆ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಮಧ್ಯಂತರ ತಡೆ ನೀಡಿದೆ. ಮಾರ್ಚ್ 6ರವರೆಗೆ ಮಧ್ಯಂತರ ತಡೆ ಅನ್ವಯ ಆಗಲಿದೆ.

# ಟೀಮ್ ಇಂಡಿಯಾದಲ್ಲಿ ಮಹತ್ವದ ಬದಲಾವಣೆ

## ಆಡುವ ಬಳಗದಲ್ಲಿ ಸಂಜು ಸ್ಯಾಮ್ಸನ್



ಟಿ20 ವಿಶ್ವಕಪ್‌ನ ಸೂಪರ್-8 ಪಂದ್ಯದಲ್ಲಿ ಟೀಮ್ ಇಂಡಿಯಾ ಹೀನಾಯ ಸೋಲನುಭವಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ತಂಡವು 20 ಓವರ್‌ಗಳಲ್ಲಿ 187 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಭಾರತ ತಂಡವು 18.5 ಓವರ್‌ಗಳಲ್ಲಿ 111 ರನ್‌ಗಳಿಸಿ ಆಲೌಟ್ ಆಗಿದೆ. ಟಿ20 ವಿಶ್ವಕಪ್‌ನ ಲೀಗ್ ಹಂತದಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದ ಭಾರತ ತಂಡವು ಸೂಪರ್-8 ಸುತ್ತಿನ ಮೊದಲ ಪಂದ್ಯದಲ್ಲೇ ಮುಗ್ಗರಿಸಿದೆ. ಅದು ಸಹ ಸೌತ್ ಆಫ್ರಿಕಾ ವಿರುದ್ಧ. ಈ ಸೋಲಿನ ಬೆನ್ನಲ್ಲೇ ಟೀಮ್ ಇಂಡಿಯಾದಲ್ಲಿ ಮಹತ್ವದ ಬದಲಾವಣೆಯಾಗುವ ಸೂಚನೆ ನೀಡಿದ್ದ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡುಸ್ಕಾಟ.

ಸೌತ್ ಆಫ್ರಿಕಾ ವಿರುದ್ಧದ ಹೀನಾಯ ಸೋಲಿನ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದ ರಯಾನ್ ಟೆನ್ ಡುಸ್ಕಾಟಗೆ ತಂಡದ ಪ್ಲೇಯಿಂಗ್ ಇಲೆವೆನ್ ಬಗ್ಗೆ ಪ್ರಶ್ನೆಗಳು ಎದುರಾಗಿತ್ತು. ಈ ಪ್ರಶ್ನೆಗೆ ಉತ್ತರಿಸಿದ ರಯಾನ್, ಮುಂದಿನ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಆಡುವ ಬಳಗದಲ್ಲಿ ಕಾಣಿಸಿಕೊಳ್ಳುವ ಬಗ್ಗೆ ಮಹತ್ವದ ಸುಳಿವು ನೀಡಿದ್ದಾರೆ.

ಈ ಬಗ್ಗೆ ಮಾತನಾಡಿದ ರಯಾನ್ ಟೆನ್ ಡುಸ್ಕಾಟ, ಭಾರತದ ಅಗ್ರ ಕ್ರಮಾಂಕವು ಹೆಚ್ಚಾಗಿ ಎಡಗೈ ಬ್ಯಾಟರ್‌ಗಳಿಂದ ಕೂಡಿದೆ. ಇದು ಎದುರಾಳಿ ತಂಡದ ಆಫ್-ಸ್ಪಿನ್ನರ್‌ಗಳಿಗೆ ಅನುಕೂಲವಾಗುತ್ತಿದೆ. ಈ ಸಮತೋಲನವನ್ನು ಸರಿಪಡಿಸಲು ಬಲಗೈ ಬ್ಯಾಟರ್ ಆಗಿರುವ ಸಂಜು ಸ್ಯಾಮ್ಸನ್ ಅವರನ್ನು ಪ್ಲೇಯಿಂಗ್ ಇಲೆವೆನ್‌ಗೆ ಸೇರಿಸಿಕೊಳ್ಳುವ ಯೋಚನೆ ಇದೆ ಎಂದು ತಿಳಿಸಿದ್ದಾರೆ.

ಆರಂಭಿಕ ಆಟಗಾರರಾದ ಅಭಿಷೇಕ್ ಶರ್ಮಾ ಮತ್ತು ತಿಲಕ್ ವರ್ಮಾ ಸತತವಾಗಿ ರನ್ ಗಳಿಸಲು ಪರದಾಡುತ್ತಿದ್ದಾರೆ.

ಅದರಲ್ಲೂ ಅಭಿಷೇಕ್ ಶರ್ಮಾ ಈ ಟೂರ್ನಿಯಲ್ಲಿ ಈಗಾಗಲೇ ಮೂರು ಬಾರಿ 'ಡಕ್' ಔಟ್ ಆಗಿರುವುದು ತಂಡಕ್ಕೆ ಚಿಂತೆಯಾಗಿದೆ. ಇದಾದ ಬಳಿಕ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿಯುವ ತಿಲಕ್ ವರ್ಮಾ ಕಡೆಯಿಂದಲೂ ನಿರೀಕ್ಷಿತ ಪ್ರದರ್ಶನ ಮೂಡಿ ಬರುತ್ತಿಲ್ಲ. ಅದರಲ್ಲೂ ಆಫ್ ಸ್ಪಿನ್ ಎಸೆತಗಳಿಗೆ ಟೀಮ್ ಇಂಡಿಯಾದ ಎಡಗೈ ದಾಂಡಿಗರು ವಿಕೆಟ್ ಒಪ್ಪಿಸುತ್ತಿದ್ದಾರೆ.

ಪಾಕಿಸ್ತಾನ್ ಮತ್ತು ನೆದರ್‌ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಆಫ್ ಸ್ಪಿನ್‌ಗೆ ಔಟಾಗಿದ್ದರು. ಇನ್ನು ಸೌತ್ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಇಶಾನ್ ಕಿಶನ್ ಕೂಡ ಆಫ್ ಸ್ಪಿನ್ ಎಸೆತದಲ್ಲಿ ಕ್ಯಾಚ್ ನೀಡಿದ್ದರು.

# ಎಷ್ಟು ರನ್‌ಗಳ ಅಂತರದಿಂದ ಗೆಲ್ಲಬೇಕು

ಟಿ20 ವಿಶ್ವಕಪ್‌ನ ಮೊದಲ 4 ಮ್ಯಾಚ್‌ಗಳಲ್ಲಿ ಭರ್ಜರಿ ಜಯ ಸಾಧಿಸಿದ್ದ ಟೀಮ್ ಇಂಡಿಯಾ ಇದೀಗ ಸೌತ್ ಆಫ್ರಿಕಾ ವಿರುದ್ಧ ಹೀನಾಯ ಸೋಲನುಭವಿಸಿದೆ. ಈ ಸೋಲಿನ ಹೊರತಾಗಿಯೂ ಭಾರತ ತಂಡವು ಝಿಂಬಾಬ್ವೆ ಹಾಗೂ ವೆಸ್ಟ್ ಇಂಡೀಸ್ ವಿರುದ್ಧ ಗೆದ್ದು ಸೆಮಿಫೈನಲ್ ಗೇರಬಹುದು. ಹೀಗೆ ಸೆಮಿಫೈನಲ್‌ಗೇರಲು ಟೀಮ್ ಇಂಡಿಯಾದ ಸಮೀಕರಣ ಈ ಕೆಳಗಿನಂತಿದೆ... ಸೌತ್ ಆಫ್ರಿಕಾ ವಿರುದ್ಧದ ಸೋಲಿನ ಬೆನ್ನಲ್ಲೇ ಟೀಮ್ ಇಂಡಿಯಾದ ಸೆಮಿಫೈನಲ್ ಲೆಕ್ಕಾಚಾರಗಳು ಶುರುವಾಗಿದೆ. ಇದಕ್ಕೆ ಮುಖ್ಯ ಕಾರಣ ಭಾರತ ತಂಡವು ಹೀನಾಯವಾಗಿ ಸೋತಿರುವುದು. ಅಂದರೆ ಸೌತ್ ಆಫ್ರಿಕಾ ವಿರುದ್ಧದ 76 ರನ್‌ಗಳ ಅಂತರದಿಂದ ಸೋತಿರುವ ಕಾರಣ ಟೀಮ್ ಇಂಡಿಯಾದ ನೆಟ್ ರನ್ ರೇಟ್ -3.800 ಕ್ಕೆ ಕುಸಿದಿದೆ. ಈ ನೆಗೆಟಿವ್ ನೆಟ್ ರನ್ ರೇಟ್ ಅನ್ನು ಪಾಸಿಟಿವ್ ಮಾಡಬೇಕಿದ್ದರೆ ಭಾರತ ತಂಡವು ಮುಂದಿನ ಪಂದ್ಯಗಳಲ್ಲಿ ಭರ್ಜರಿ ಜಯ ಸಾಧಿಸಬೇಕು.

ಅದರಂತೆ ಭಾರತ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಝಿಂಬಾಬ್ವೆ ವಿರುದ್ಧ ಎಷ್ಟು ರನ್‌ಗಳ ಅಂತರದಿಂದ ಗೆಲ್ಲಬೇಕು ಎಂದು ನೋಡುವುದಾದರೆ ಮೊದಲು ಬ್ಯಾಟಿಂಗ್ ಲೆಕ್ಕಾಚಾರ: ಭಾರತ ತಂಡವು 200ಕ್ಕೂ ಹೆಚ್ಚು ರನ್ ಗಳಿಸಬೇಕು ಮತ್ತು ಎದುರಾಳಿ ತಂಡವನ್ನು ಕನಿಷ್ಠ 70 ರಿಂದ 80 ರನ್‌ಗಳ ಅಂತರದಿಂದ ಸೋಲಿಸಬೇಕು.

**ಮೊದಲು ಬೌಲಿಂಗ್ ಲೆಕ್ಕಾಚಾರ:** ಎದುರಾಳಿ ತಂಡವನ್ನು 130 ರಿಂದ 140 ರನ್‌ಗಳ ಒಳಗೆ ಆಲೌಟ್ ಮಾಡಬೇಕು.

**ಚೇಸಿಂಗ್ ಲೆಕ್ಕಾಚಾರ:** ಎದುರಾಳಿ ತಂಡವನ್ನು 140 ರನ್‌ಗೆ ಆಲೌಟ್ ಮಾಡಿದರೆ ಟೀಮ್ ಇಂಡಿಯಾ ಈ ಗುರಿಯನ್ನು 9 ರಿಂದ 10 ಓವರ್‌ಗಳಲ್ಲಿ ಚೇಸ್ ಮಾಡಬೇಕು.

ಈ ಮೂರು ಲೆಕ್ಕಾಚಾರಗಳೊಂದಿಗೆ ಭಾರತ ತಂಡವು ಝಿಂಬಾಬ್ವೆ ವಿರುದ್ಧ ಕಣಕ್ಕಿಳಿಯುವ ಸಾಧ್ಯತೆಯಿದೆ. ಅಲ್ಲದೆ ಈ ಮ್ಯಾಚ್‌ನಲ್ಲಿ ಭರ್ಜರಿ ಜಯ ಸಾಧಿಸಿದರೆ ಟೀಮ್ ಇಂಡಿಯಾದ ನೆಟ್ ರನ್ ರೇಟ್ + ಆಗಲಿದೆ. ಇನ್ನು ವೆಸ್ಟ್ ಇಂಡೀಸ್ ವಿರುದ್ಧ ಕೂಡ ಭರ್ಜರಿ ಜಯ ಸಾಧಿಸುವ ಮೂಲಕ ಭಾರತ ತಂಡವು ತನ್ನ ನೆಟ್ ರನ್ ರೇಟ್ ಅನ್ನು ಹೆಚ್ಚಿಸಿಕೊಳ್ಳಬಹುದು. ಈ ಮೂಲಕ 4 ಅಂಕಗಳೊಂದಿಗೆ ನೆಟ್ ರನ್ ರೇಟ್‌ನಲ್ಲಿ ಇತರೆ ತಂಡಗಳನ್ನು ಹಿಂದಿಕ್ಕಿ ಸೆಮಿಫೈನಲ್‌ಗೇರಬಹುದು. ನೆಟ್ ರನ್ ರೇಟ್ ಲೆಕ್ಕಾಚಾರವಿಲ್ಲದೇ ಸೆಮಿಫೈನಲ್‌ಗೇರಬಹುದೇ ನೆಟ್ ರನ್ ರೇಟ್ ಲೆಕ್ಕಾಚಾರವಿಲ್ಲದೇ ಭಾರತ ತಂಡ ಸೆಮಿಫೈನಲ್‌ಗೆ ಪ್ರವೇಶಿಸಬಹುದು. ಆದರೆ ಇಲ್ಲಿ ಸೌತ್ ಆಫ್ರಿಕಾ ತಂಡವು ತನ್ನ ಮುಂದಿನ ಎರಡು ಮ್ಯಾಚ್‌ಗಳಲ್ಲಿ ಝಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ವಿರುದ್ಧ ಗೆಲ್ಲಬೇಕು. ಹೀಗಾದಲ್ಲಿ ವೆಸ್ಟ್ ಇಂಡೀಸ್ ಹಾಗೂ ಝಿಂಬಾಬ್ವೆ ತಂಡಕ್ಕೆ ಸೋಲುಣಿಸಿ ಟೀಮ್ ಇಂಡಿಯಾ ನೇರವಾಗಿ ಸೆಮಿಫೈನಲ್‌ಗೆ ಪ್ರವೇಶಿಸಬಹುದು.



# ಆಫ್ ಸ್ಪಿನ್‌ಗೆ ಭಾರತೀಯ ಬ್ಯಾಟರ್ಸ್ ಆಫ್!



ಟಿ20 ವಿಶ್ವಕಪ್‌ನಲ್ಲಿ ಟೀಮ್ ಇಂಡಿಯಾ ಈವರೆಗೆ 5 ಪಂದ್ಯಗಳನ್ನಾಡಿದೆ. ಈ ಐದು ಮ್ಯಾಚ್‌ಗಳಲ್ಲಿ ಭಾರತ ತಂಡ 4 ಪಂದ್ಯಗಳಲ್ಲಿ ಜಯ ಸಾಧಿಸಿದೆ. ಇನ್ನು ಸೋತಿರುವುದು ಸೌತ್ ಆಫ್ರಿಕಾ ವಿರುದ್ಧ ಮಾತ್ರ. ಈ ಸೋಲಿನ ಹೊರತಾಗಿಯೂ ಭಾರತ ತಂಡಕ್ಕೆ ಸೆಮಿಫೈನಲ್‌ಗೇರಲು ಉತ್ತಮ ಅವಕಾಶವಿದೆ. ಟಿ20 ವಿಶ್ವಕಪ್‌ನಲ್ಲಿ ಆಫ್ ಸ್ಪಿನ್ನರ್‌ಗಳ ವಿರುದ್ಧ ಟೀಮ್ ಇಂಡಿಯಾದ ತಿಣುಕಾಟ ಮುಂದುವರೆದಿದೆ. ಈ ತಿಣುಕಾಟವನ್ನೇ ಇದಿಗ ಎದುರಾಳಿ ತಂಡಗಳು ಅಸ್ತ್ರವಾಗಿ ಪ್ರಯೋಗಿಸುತ್ತಿದ್ದಾರೆ. ಇದಕ್ಕೆ ತಾಜಾ ಉದಾಹರಣೆ ಸೌತ್ ಆಫ್ರಿಕಾ ವಿರುದ್ಧದ ಪಂದ್ಯ. ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ಪರ ಮೊದಲ ಓವರ್ ಎಸೆದಿದ್ದು ಐಡೆನ್ ಮಾರ್ಕ್ರಾಮ್. ಪಾರ್ಟ್ ಟೈಮ್ ಆಫ್ ಸ್ಪಿನ್ನರ್ ಆಗಿರುವ ಮಾರ್ಕ್ರಾಮ್ ಇಶಾನ್ ಕಿಶನ್ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇದಕ್ಕೂ ಮುನ್ನ ಪಾಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ ಸಲ್ಮಾನ್ ಅಲಿ ಅಘಾ ಮೊದಲ ಓವರ್ ಎಸೆದಿದ್ದರು. ಅಲ್ಲದೆ ಅಭಿಷೇಕ್ ಶರ್ಮಾ ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾಗಿದ್ದರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಸಲ್ಮಾನ್ ಅಲಿ ಅಘಾ ಕೂಡ ಪಾರ್ಟ್ ಟೈಮ್ ಆಫ್ ಸ್ಪಿನ್ನರ್ ಎಂಬುದು. ಇನ್ನು ನೆದರ್‌ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅವರನ್ನು ಮೊದಲ ಓವರ್‌ನಲ್ಲೇ ಆರ್ಯನ್ ದತ್ ಔಟ್ ಮಾಡಿದ್ದರು. ಆರ್ಯನ್ ದತ್ ಕೂಡ ಆಫ್ ಸ್ಪಿನ್ನರ್ ಎಂಬುದು ವಿಶೇಷ.

**ಆಫ್ ಸ್ಪಿನ್‌ಗೆ ಆಫ್: ಕಡಿಮೆ ರನ್ ಗತಿ:** ಈ ಟೂರ್ನಿಯಲ್ಲಿ ಆಫ್-ಸ್ಪಿನ್ ವಿರುದ್ಧ ಭಾರತದ ಸರಾಸರಿ ರನ್ ಗತಿ ಕೇವಲ 6.23 ರನ್ ಮಾತ್ರ. ಅಂದರೆ ಆಫ್ ಸ್ಪಿನ್ನರ್‌ಗಳ ಓವರ್‌ನಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಕೇವಲ 6.23 ರ ಸರಾಸರಿಯಲ್ಲಿ ಮಾತ್ರ ರನ್ ಕಲೆಹಾಕಿದ್ದಾರೆ.

**ವಿಕೆಟ್ ನಷ್ಟ:** ಕಳೆದ 5 ಪಂದ್ಯಗಳಲ್ಲಿ ಭಾರತ ಕಳೆದುಕೊಂಡ 41 ವಿಕೆಟ್‌ಗಳಲ್ಲಿ 12 ವಿಕೆಟ್‌ಗಳನ್ನು ಆಫ್-ಸ್ಪಿನ್ನರ್‌ಗಳೇ ಪಡೆದಿದ್ದಾರೆ.

**ಪಾರ್ಟ್-ಟೈಮ್ ಸ್ಪಿನ್ನರ್:** ವಿಶೇಷವೆಂದರೆ, ಐಡೆನ್ ಮಾರ್ಕ್ರಾಮ್ ಮತ್ತು ಸಲ್ಮಾನ್ ಅಲಿ ಅಘಾ ಅವರಂತಹ ಪಾರ್ಟ್-ಟೈಮ್ ಬೌಲರ್‌ಗಳೇ ಭಾರತದ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದ್ದಾರೆ.

**ದಾಂಡಿಗರ ವೈಫಲ್ಯ:** ಎಡಗೈ ಬ್ಯಾಟರ್‌ಗಳ ಸಮಸ್ಯೆ: ಭಾರತದ ಟಾಪ್ ಆರ್ಡರ್‌ನಲ್ಲಿರುವ ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಮತ್ತು ತಿಲಕ್ ವರ್ಮಾ ಅವರಂತಹ ಎಡಗೈ ಬ್ಯಾಟರ್‌ಗಳನ್ನು ಗುರಿಯಾಗಿಸಿ ಎದುರಾಳಿ ತಂಡಗಳು ಆಫ್-ಸ್ಪಿನ್ನರ್‌ಗಳನ್ನು ಬಳಸುತ್ತಿವೆ.

**ಅಭಿಷೇಕ್ ಶರ್ಮಾ:** ಆರಂಭಿಕನಾಗಿ ಕಣಕ್ಕಿಳಿಯುತ್ತಿರುವ ಆಫ್-ಸ್ಪಿನ್ ವಿರುದ್ಧ ರನ್ ಗಳಿಸಲು ಪರದಾಡುತ್ತಿದ್ದು, ಸತತ ವೈಫಲ್ಯ ಅನುಭವಿಸಿದ್ದಾರೆ.

**ಇಶಾನ್ ಕಿಶನ್:** ಸೌತ್ ಆಫ್ರಿಕಾ ವಿರುದ್ಧದ ಪಂದ್ಯದ ಮೊದಲ ಓವರ್‌ನಲ್ಲೇ ಆಫ್-ಸ್ಪಿನ್ನರ್ ಮಾರ್ಕ್ರಾಮ್‌ಗೆ ವಿಕೆಟ್ ಒಪ್ಪಿಸಿದ್ದರು.

**ಸೂರ್ಯಕುಮಾರ್ ಯಾದವ್:** ಸಾಮಾನ್ಯವಾಗಿ ವೇಗವಾಗಿ ಆಡುವ ಸೂರ್ಯ ಕೂಡ ಆಫ್-ಸ್ಪಿನ್ನರ್‌ಗಳ ವಿರುದ್ಧ 27 ಎಸೆತಗಳಲ್ಲಿ ಕೇವಲ 28 ರನ್ ಗಳಿಸಿ ತಿಣುಕಾಡಿದ್ದಾರೆ.

**ಬದಲಾವಣೆ ಸಾಧ್ಯತೆ:** ಟೀಮ್ ಇಂಡಿಯಾದ ಟಾಪ್-3 ಬ್ಯಾಟರ್‌ಗಳು, ಅಂದರೆ ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಹಾಗೂ ತಿಲಕ್ ವರ್ಮಾ ಆಫ್ ಸ್ಪಿನ್ ಎಸೆತಗಳಲ್ಲಿ ವಿಕೆಟ್ ಒಪ್ಪಿಸುತ್ತಿದ್ದಾರೆ. ಇಲ್ಲಾ ರನ್‌ಗಳಿಸಲು ಪರದಾಡುತ್ತಿದ್ದಾರೆ. ಹೀಗಾಗಿ ಝಿಂಬಾಬ್ವೆ ವಿರುದ್ಧದ ಪಂದ್ಯಕ್ಕಾಗಿ ಟಾಪ್-3 ನಲ್ಲಿ ಬದಲಾವಣೆ ಕಂಡು ಬರಲಿದೆ. ಅಂದರೆ ಈ ಮೂವರು ಎಡಗೈ ದಾಂಡಿಗರಲ್ಲಿ ಒಬ್ಬರನ್ನು ಕೈ ಬಿಟ್ಟು ಅವರ ಬದಲಿಗೆ ಬಲಗೈ ದಾಂಡಿಗನನ್ನು ಕಣಕ್ಕಿಳಿಸಬಹುದು. ಅದರಂತೆ ಸಂಜು ಸ್ಯಾಮ್ಸನ್‌ಗೆ ಅವಕಾಶ ಸಿಗುವ ಸಾಧ್ಯತೆಯಿದೆ.

# ವಿರಾಟ್ ಕೊಹ್ಲಿ ಇರಬೇಕಿತ್ತು..!



ಟಿ20 ವಿಶ್ವಕಪ್‌ನ ಸೂಪರ್-8 ಪಂದ್ಯದಲ್ಲಿ ಟೀಮ್ ಇಂಡಿಯಾ ಸೋಲನುಭವಿಸಿದೆ. ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ ನೀಡಿದ 188 ರನ್‌ಗಳ ಗುರಿಯನ್ನು ಬೆನ್ನತ್ತಲು ವಿಫಲವಾದ ಟೀಮ್ ಇಂಡಿಯಾ ಬರೋಬ್ಬರಿ 76 ರನ್‌ಗಳಿಂದ ಸೋಲೊಪ್ಪಿಕೊಂಡಿದೆ. ಈ ಸೋಲಿನ ಬೆನ್ನಲ್ಲೇ ಟೀಮ್ ಇಂಡಿಯಾ ಅಭಿಮಾನಿಗಳಿಗೆ ವಿರಾಟ್ ಕೊಹ್ಲಿ ನೆನಪಾಗಿದ್ದಾರೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಟೀಮ್ ಇಂಡಿಯಾ 150 ಕ್ಕಿಂತ ಹೆಚ್ಚಿನ ಸ್ಕೋರ್ ಬೆನ್ನತ್ತಿ ಗೆದ್ದಿರುವುದು ಕೇವಲ 3 ಬಾರಿ ಮಾತ್ರ. ಈ ಮೂರು ಗೆಲುವಿನ ರೂವಾರಿ ವಿರಾಟ್ ಕೊಹ್ಲಿ. ಹೀಗಾಗಿ ಸೌತ್ ಆಫ್ರಿಕಾ ವಿರುದ್ಧದ ಹೀನಾಯ ಸೋಲಿನ ಬೆನ್ನಲ್ಲೇ ವಿರಾಟ್ ಕೊಹ್ಲಿ ಇರಬೇಕಿತ್ತು ಎಂಬ ಮಾತುಗಳು ಕೇಳಿ ಬರಲಾರಂಭಿಸಿದೆ.

ಭಾರತ ತಂಡವು ಮೊದಲ ಬಾರಿಗೆ ಟಿ20 ವಿಶ್ವಕಪ್‌ನಲ್ಲಿ 150+ ಸ್ಕೋರ್ ಚೇಸ್ ಮಾಡಿ ಗೆದ್ದಿದ್ದು 2014 ರಲ್ಲಿ. ಶೇರೆ ಬಾಂಗ್ಲಾ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದಿದ್ದ 2014ರ ಟಿ20 ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ ಸೌತ್ ಆಫ್ರಿಕಾ ನೀಡಿದ 173 ರನ್‌ಗಳನ್ನು ಟೀಮ್ ಇಂಡಿಯಾ ಚೇಸ್ ಮಾಡಿ ಗೆದ್ದಿತ್ತು. ಈ ಭರ್ಜರಿ ಗೆಲುವಿನ ರೂವಾರಿ ವಿರಾಟ್ ಕೊಹ್ಲಿ. ಈ ಪಂದ್ಯದಲ್ಲಿ ಕೇವಲ 44 ಎಸೆತಗಳನ್ನು ಎದುರಿಸಿದ್ದ ಕೊಹ್ಲಿ ಅಜೇಯ 72 ರನ್ ಬಾರಿಸಿ ಮಿಂಚಿದ್ದರು. ಟೀಮ್ ಇಂಡಿಯಾ ಟಿ20 ವಿಶ್ವಕಪ್‌ನಲ್ಲಿ ಎರಡನೇ ಬಾರಿ 150+ ಸ್ಕೋರ್ ಚೇಸ್ ಮಾಡಿದ್ದು 2016 ರಲ್ಲಿ. ಆಸ್ಟ್ರೇಲಿಯಾ ವಿರುದ್ಧದ ಈ ಪಂದ್ಯದಲ್ಲಿ ಕಿಂಗ್ ಕೊಹ್ಲಿ 51 ಎಸೆತಗಳಲ್ಲಿ ಅಜೇಯ 82 ರನ್ ಬಾರಿಸಿದ್ದರು. ಕೊಹ್ಲಿಯ ಈ ಭರ್ಜರಿ ಬ್ಯಾಟಿಂಗ್ ನೆರವಿನೊಂದಿಗೆ ಟೀಮ್ ಇಂಡಿಯಾ 161 ರನ್‌ಗಳ ಗುರಿ ಬೆನ್ನತ್ತಿ 6 ವಿಕೆಟ್‌ಗಳ ಜಯ ಸಾಧಿಸಿತ್ತು. ಭಾರತ ತಂಡವು ಮೂರನೇ ಬಾರಿ 150 ಕ್ಕಿಂತ ಹೆಚ್ಚಿನ ರನ್ ಚೇಸ್ ಮಾಡಿರುವುದು 2022ರ ಟಿ20 ವಿಶ್ವಕಪ್‌ನಲ್ಲಿ. ಅಂದು ಪಾಕಿಸ್ತಾನ್ ತಂಡ ನೀಡಿದ 160 ರನ್‌ಗಳ ಗುರಿ ಬೆನ್ನತ್ತಿದ ಟೀಮ್ ಇಂಡಿಯಾ ಆರಂಭಿಕ ಆಘಾತಕ್ಕೆ ಒಳಗಾಗಿತ್ತು. ಇದಾಗ್ಯೂ ಏಕಾಂಗಿಯಾಗಿ ಹೋರಾಟ ಮುಂದುವರೆಸಿದ ವಿರಾಟ್ ಕೊಹ್ಲಿ 53 ಎಸೆತಗಳಲ್ಲಿ ಅಜೇಯ 82 ರನ್ ಬಾರಿಸಿ ಭಾರತ ತಂಡಕ್ಕೆ 4 ವಿಕೆಟ್‌ಗಳ ಭರ್ಜರಿ ಗೆಲುವು ತಂದು ಕೊಟ್ಟಿದ್ದರು. ಅಂದರೆ ಟೀಮ್ ಇಂಡಿಯಾ ಟಿ20 ವಿಶ್ವಕಪ್‌ನಲ್ಲಿ 150+ ರನ್ ಚೇಸ್ ಮಾಡಿ ಗೆದ್ದಾಗೆಲ್ಲಾ ವಿರಾಟ್ ಕೊಹ್ಲಿ ಅಜೇಯರಾಗಿ ಉಳಿದಿದ್ದರು. ಅಜೇಯರಾಗಿಯೇ ಭಾರತ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಆದರೆ ಈ ಬಾರಿ ಕಿಂಗ್ ಕೊಹ್ಲಿ ಇರಲಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966